# ಭಜನ - ಪ್ರವಚನ - ಸಂಕೀರ್ತನ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪ್ರಕಾಶ ನಗರ ಇವುಗಳ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 15 ರಿಂದ 18ರ ವರೆಗೆ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಅವುಗಳ ವಿವರಗಳು ಈ ರೀತಿ ಇವೆ: ಏಪ್ರಿಲ್ 15, ಮಂಗಳವಾರ ರಾಜಾಜಿನಗರದ ರುಕ್ಮಿಣಿ ಮಹಿಳಾ ಸಂಘದ ಸದಸ್ಯರಿಂದ ಭಜನೆ ಮತ್ತು ಶ್ರೀ ರಾಮವಿಠಲಾಚಾರ್ಯರಿಂದ ಶ್ರೀ ವಾದಿರಾಜರ ವಿರಚಿತ ರುಕ್ಮಿಣೀಶ ವಿಜಯ ಧಾರ್ಮಿಕ ಪ್ರವಚನ. ಸಮಯ : ಸಂಜೆ 6 ರಿಂದ 8 ಏಪ್ರಿಲ್ 16, ಬುಧವಾರ ಗಾಂಧಿಬಜಾರಿನ ಶ್ರೀ ವ್ಯಾಸತೀರ್ಥ ಭಜನಾ ಮಂಡಳಿಯ ಸದಸ್ಯರಿಂದ ಭಜನೆ ಮತ್ತು ಶ್ರೀ ರಾಮವಿಠಲಾಚಾರ್ಯರಿಂದ ಶ್ರೀವಾದಿರಾಜರ ವಿರಚಿತ ರುಕ್ಮಿಣೀಶ ವಿಜಯ ಧಾರ್ಮಿಕ ಪ್ರವಚನ. (ಸಮಯ ಸಂಜೆ 6 ರಿಂದ 8). ಏಪ್ರಿಲ್ 17, ಗುರುವಾರ ಹರಿನಾಮ ಸಂಕೀರ್ತನೆ. ಗಾಯನ ಕು. ಅಹಿಕಾ ನಾಗದೀಪ್, ಪಿಟೀಲು ಶ್ರೀ ಸೀತಾರಾಮ್, ಮೃದಂಗ ಶ್ರೀ ಪ್ರಣವ್. (ಸಮಯ : ಸಂಜೆ 7 ರಿಂದ 8-30). ಏಪ್ರಿಲ್ 18, ಶುಕ್ರವಾರ ವಿಜಯನಗರದ ಶ್ರೀ ಶ್ರೀಕಾಂತ ಭಜನಾ ಮಂಡಳಿಯ ಸದಸ್ಯರಿಂದ ಭಜನೆ ಮತ್ತು ಶ್ರೀ ರಾಮವಿಠಲಾಚಾರ್ಯರಿಂದ ಶ್ರೀ ವಾದಿರಾಜರ ವಿರಚಿತ ರುಕ್ಮಿಣೀಶ ವಿಜಯ ಧಾರ್ಮಿಕ ಪ್ರವಚನ. (ಸಮಯ : ಸಂಜೆ 6 ರಿಂದ 8). ಕಾರ್ಯಕ್ರಮ ನಡೆಯುವ ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಪ್ರಕಾಶನಗರ, ಬೆಂಗಳೂರು-560021

# ಕೆ.ಮಂಜೇಗೌಡರವರಿಗೆ ಡಾ.ಬಿ.ಆರ್. ಅಂಬೇಡ್ಕರ್ ಭೂಷಣ ಪ್ರಶಸ್ತಿ

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ಅಧಿಕಾರಿ, ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ರವರ 134ನೇ ಜನ್ಮ ದಿನಾಚರಣೆ, ಬಿಬಿಎಂಪಿ ಅಧಿಕಾರಿ, ನೌಕರರಿಗೆ ಡಾ.ಬಿ.ಆರ್. ಅಂಬೇಡ್ಕರ್ ಭೂಷಣ ಪ್ರಶಸ್ತಿ ಪ್ರಧಾನ ಮಾಡುತ್ತಿದ್ದಾರೆ. ಬಿಬಿಎಂಪಿಯಲ್ಲಿ ಸಹಾಯಕ ಅಭಿಯಂತರಾಗಿ ಸೇವೆ ಸಲ್ಲಿಸುತ್ತಿರುವ



ಕೆ.ಮಂಜೇಗೌಡರವರಿಗೆ 2025ರ ಸಾಲಿನ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಲಭಿಸಿದೆ, ಪ್ರಶಸ್ತಿ ಪ್ರಧಾನ ಸಮಾರಂಭವು ಏ. 15ರಂದು ಟೌನ್ ಹಾಲ್ ಜರುಗಲಿದೆ.ಕೆ.ಮಂಜೇಗೌಡರು ರೈತಾಪಿ ಕುಟುಂಬದವರು ಬಿಬಿಎಂಪಿಯಲ್ಲಿ 20ವರ್ಷಕ್ಕಿಂತ ಹೆಚ್ಚು ಕಾಲ ಸೇವೆ ಸಲ್ಲಿಸುತ್ತಿದ್ದಾರೆ.

ಕನ್ನಡ ನಾಡು, ನುಡಿ ಹಾಗೂ ಬಿಬಿಎಂಪಿ ಅಧಿಕಾರಿ, ನೌಕರರ ಪರ ಹೋರಾಟದಲ್ಲಿ ಮಂಚೂಣಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು ಕೆ.ಮಂಜೇಗೌಡರಿಗೆ ಉತ್ತಮ ಒಡನಾಟವಿದೆ. ನನ್ನ ಸಾಧನೆ ಮತ್ತು ಹೋರಾಟಗಳಿಗೆ ಎ.ಅಮೃತ್ ರಾಜ್ ರವರು ಬೆನ್ನು ತಟ್ಟಿ ಪ್ರೋತ್ಸಹ ನೀಡುತ್ತಿದ್ದಾರೆ. ಡಾ.ಬಿ.ಆರ್.ಅಂಬೇಡ್ಕರ್ ಭೂಷಣ ಪ್ರಶಸ್ತಿ ಲಭಿಸಿರುವ ಈ ಶುಭಾ ಸಂದರ್ಭದಲ್ಲಿ ಅಧಿಕಾರಿ, ನೌಕರರಿಗೆ ಅರ್ಪಿಸುತ್ತೇನೆ ಎಂದು ಕೆ.ಮಂಜೇಗೌಡರು ಮನದಾಳದ ಮಾತುಗಳನ್ನು ಹೇಳಿದರು.

# ರಾಜಭವನ ಬಳಿ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನ

• ಉದಯವಾಹಿನಿ, ಬೆಂಗಳೂರು

ಪತ್ನಿ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಖಾಸಗಿ ಕಂಪನಿ ಉದ್ಯೋಗಿಯೊಬ್ಬ ರಾಜಭವನ ಎದುರು ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆದಿದೆ. ಆತ್ಮಹತ್ಯೆಗೆ ಯತ್ನಿಸಿದ ಜುಹೆಲ್ ಅಹ್ಮದ್ ಹೆಬ್ಬಾಳದ ಖಾಸಗಿ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿದ್ದಾರೆ. ಪತ್ನಿ ಚಿಕ್ಕಬಳ್ಳಾಪುರದಲ್ಲಿ ವಾಸವಾಗಿದ್ದಾರೆ. ರಾಜಕಾರಣಿಯೊಬ್ಬರ ಹೇಳಿಕೆ ಪಡೆಯಲು ಸಂಜೆ 4.30ರ ಸುಮಾರಿಗೆ ಮಾಧ್ಯಮ ಪ್ರತಿನಿಧಿಗಳು ರಾಜಭವನದ ಬಳಿ ತೆರಳಿದ್ದರು.

ಅದೇ ವೇಳೆ ಅಲ್ಲಿಗೆ ಬಂದ ಜುಹೆಲ್, ಏಕಾಏಕಿ ಪ್ಲಾಸ್ಟಿಕ್ ಬಾಟಲಿಯಲ್ಲಿ ತಂದಿದ್ದ ಪೆಟ್ರೋಲ್ ಅನ್ನು ಮೈ ಮೇಲೆ ಸುರಿದುಕೊಂಡರು. ಇದನ್ನು ನೋಡಿದ ಪತ್ರಕರ್ತರು ಬಾಟಲಿಯನ್ನು ಅವರಿಂದ ಕಸಿದುಕೊಂಡರು.

ನಂತರ ಸ್ಥಳೀಯರು ಅಹ್ಮದ್ ಮೇಲೆ ನೀರು ಸುರಿದರು. ಬಳಿಕ ಅವರನ್ನು ಪೊಲೀಸ ವಶಕ್ಕೆ ಒಪ್ಪಿಸಿದರು. ಸಾರ್ವಜನಿಕರಿಗೆ ತೊಂದರೆ ಉಂಟುಮಾಡಿದ ಆರೋಪದಡಿ ವಿಧಾನಸೌಧ ಠಾಣೆ ಪೊಲೀಸರು ಅವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅಹ್ಮದ್, 'ಪತ್ನಿ ಕಿರುಕುಳ ನೀಡುತ್ತಿರುವ ಬಗ್ಗೆ ಪೊಲೀಸರು ದೂರು ಸ್ವೀಕರಿಸಿಲ್ಲ. ನನ್ನ ಕೊಲೆ ಯತ್ನ ನಡೆದಿದೆ. ಆಕೆಯಿಂದ ಹಲ್ಲೆಗೊಳಗಾಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ.

ನನಗೆ ಬದುಕಲು ದಾರಿ ಇಲ್ಲ, ಸಾಯುವುದೊಂದೇ ದಾರಿ ಎಂದು ಬೇಸರ ಹೊರಹಾಕಿದ್ದಾರೆ. ಇದೇ ವೇಳೆ ಅಹ್ಮದ್, ತಾವು ಬರೆದಿರುವ ಮರಣ ಪತ್ರವನ್ನು ಮಾಧ್ಯಮದವರಿಗೆ ನೀಡಿದರು. ಕೆಲ ದಿನಗಳ ಹಿಂದೆ ಪತ್ನಿ ನೀಡಿದ ದೂರು ಆಧರಿಸಿ ಚಿಕ್ಕಬಳ್ಳಾಪುರ ಪೊಲೀಸರು ಅಹ್ಮದ್ ವಿರುದ್ಧ ಕೌಟುಂಬಿಕ ದೌರ್ಜನ್ಯ ಎಸಗಿದ ಆರೋಪದಡಿ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 498-ಎ ಅಡಿ ಪ್ರಕರಣ ದಾಖಲಿಸಿದ್ದಾರೆ ಎಂಬುದು ಗೊತ್ತಾಗಿದೆ.



ಉದಯವಾಹಿನಿ ಚಿತ್ರ

## ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ

# ಶೋಷಿತರ ದನಿಯಾದ ಬಾಬಾ ಸಾಹೇಬರ ಕೊಡುಗೆ ಅವಿಸ್ಮರಣೀಯ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ದಿನಕ್ಕೆ ಎಂಟು ಗಂಟೆಯ ಕೆಲಸದ ಕಾನೂನಿನ ಜಾರಿಯ ಮೂಲಕ ದೇಶದ ಶ್ರಮಜೀವಿಗಳ ಬದುಕಿನ ಸುಧಾರಣೆಗೆ ಕಾರ್ಮಿಕ ಸಚಿವರಾಗಿ ಡಾ. ಅಂಬೇಡ್ಕರ್ ಮಹತ್ವದ ಕೊಡುಗೆ ನೀಡಿದರೆಂದು ಪ್ರಗತಿಪರ ಚಿಂತಕರಾದ ಪ್ರೊ.ಬಿ.ಎಂ.ಪುಟ್ಟಯ್ಯ ಪ್ರತಿಪಾದಿಸಿದರು. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ ಗಡಿಯಾರ ಗೋಪುರದ ಬಳಿ ಏರ್ಪಡಿಸಲಾಗಿದ್ದ ಅಂಬೇಡ್ಕರ್ ಅವರ 134ನೇ ಜಯಂತಿ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಭಾರತದ ಪ್ರತಿಯೊಬ್ಬ ಪ್ರಜೆಗೂ ರಾಜಕೀಯ ಸಮಾನತೆ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ದೊರಕಿಸುವ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕನಸು ನನಸಾಗಿಸಲು ನಿರಂತರ ಪರಿಶ್ರಮದ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು. ಅಸ್ಪೃಶ್ಯತೆ, ಲಿಂಗ ತಾರತಮ್ಯ ನಿವಾರಣೆಯ ಮೂಲಕ ಸರ್ವರಿಗೂ ಸಮಾನ ಘನತೆಯ ಬದುಕನ್ನು ಒದಗಿಸುವ ನಿಟ್ಟಿನಲ್ಲಿ ಅಂಬೇಡ್ಕರ್ ಅವರ ಸೇವೆ ಅವಿಸ್ಮರಣೀಯವೆಂದು ಅವರು ಬಣ್ಣಿಸಿದರು.

ಮಹಿಳೆಯರಿಗೆ ಹೆರಿಗೆ ರಜೆ, ವಿವಾಹ ವಿಚ್ಛೇದನ ಮತ್ತು ಮರುಮದುವೆ ಹಕ್ಕುಗಳನ್ನು ಒದಗಿಸಿದ ಅಂಬೇಡ್ಕರ್ ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಪಾಲು ನೀಡುವ ಮಸೂದೆ ಸಂಸತ್ತಿನಲ್ಲಿ ತಿರಸ್ಕೃತವಾದಾಗ ತಮ್ಮ ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟರೆಂದು ಪ್ರೊ. ಪುಟ್ಟಯ್ಯ ವಿವರಿಸಿದರು.

ಬೌದ್ಧ ಧರ್ಮದ ಮಾನವೀಯ ಮೌಲ್ಯಗಳು ಮತ್ತು ಮಾರ್ಕ್ಸ್ ವಾದದ ಸಮಾನತೆಯ ತತ್ವಗಳನ್ನು ಸಮ್ಮಿಳಿತಗೊಳಿಸಿ ಸಂವಿಧಾನದ ನಿರ್ದೇಶಕ ತತ್ವಗಳನ್ನು ಅಂಬೇಡ್ಕರ್ ನಿರೂಪಿಸಿದರೆಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರೂ ಆದ ಪ್ರೊ. ಪುಟ್ಟಯ್ಯನವರು ವಿಶ್ಲೇಷಿಸಿದರು.

ಜೀವ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ವಿ.ದೇವರಾಜ್ ತಮ್ಮ ತಂದೆ ಜೀತದಾಳಾಗಿ ದುಡಿದ ಪರಿಸ್ಥಿತಿಯನ್ನು ಪ್ರಸ್ತಾಪಿಸಿ ಸಂವಿಧಾನದ ಜಾರಿಯ ಪರಿಣಾಮವಾಗಿ ಇಂತಹ ಶೋಷಣೆಯು ಅಂತ್ಯವಾಯಿತೆಂದು ನುಡಿದರು.

ಬಿಸಿಯು ಸಿಂಡಿಕೇಟ್ ಸದಸ್ಯರಾದ ಡಾ.ಎಚ್.ಕೃಷ್ಣರಾಮ, ಡಾ.ಫ್ರಾನ್ಸಿಸ್ ಅಲ್ಮಿಂಡಾ, ಡಾ.ಬಿ.ಆರ್. ಸುಪ್ರೀತ್, ಪ್ರೊ.ಪಿ.ಆರ್. ಚೇತನಾ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರೊ. ಕೆ. ಶಿವಶಂಕರ್ ಸ್ವಾಗತಿಸಿ ಡಾ. ಶ್ರೀನಿವಾಸ್ ವಂದಿಸಿದರು. ಕನ್ನಡ ವಿಭಾಗದ ಡಾ. ಮಾನಸ ಕಾರ್ಯಕ್ರಮ ನಿರೂಪಿಸಿದರು. ಡಾ. ಮಂಜು, ತಂಡದವರು ಅಂಬೇಡ್ಕರ್ ಕುರಿತಾದ ಜಾಗೃತಿ ಗೀತೆಗಳನ್ನು ಹಾಡಿದರು.


> ತಮ್ಮ ಶಾಲಾ ದಿನಗಳಲ್ಲಿ ಸ್ವತಹ ಜಾತಿ ತಾರತಮ್ಯ ಕಹಿ ಉಂಡಿದ್ದನ್ನು ಉಲ್ಲೇಖಿಸಿ ಮನೆ, ಕಚೇರಿ ಮತ್ತು ಸಮಾಜದಲ್ಲಿ ಮಹಿಳಾ ಸಬಲೀಕರಣಕ್ಕೆ ಅಂಬೇಡ್ಕರ್ ವಿಶೇಷ ಒತ್ತು ನೀಡಿದ್ದರು
> -ಪ್ರೊ.ಕೆ.ಆರ್. ಜಲಜಾ, ಪ್ರಭಾರ ಕುಲಪತಿ

> ಅಂಬೇಡ್ಕರ್ ತಮ್ಮ ವೈಯಕ್ತಿಕ ಬದುಕಿನಲ್ಲಿ ಅನುಭವಿಸಿದ ಅಸ್ಪೃಶ್ಯತೆಯ ಅಪಮಾನ ಮತ್ತು ಸಾಮಾಜಿಕ ಶೋಷಣೆಗೆ ಸಂವಿಧಾನದ ಮೂಲಕ ಪರಿಹಾರ ಸೂಚಿಸಿದರು
> - ಟಿ.ಜವರೇಗೌಡರು, ಕುಲಸಚಿವ

# ಪ್ರಧಾನಿಯನ್ನು ನಾನೇ ಅಭಿನಂಧಿಸುತ್ತೇನೆ: ಸಿಎಂ

## ಬಿಜೆಪಿ ಆಡಳಿತದಲ್ಲಿರುವ ಯಾವ ರಾಜ್ಯದಲ್ಲಿ ಎಸ್ ಸಿಪಿ, ಟಿಎಸ್‌ಪಿ ಕಾಯ್ದೆಯಿಲ್ಲ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ದೇಶಾದ್ಯಂತ ಎಸಿಪಿ, ಟಿಎಸ್‌ಪಿ ಕಾನೂನುಗಳನ್ನು ಜಾರಿಗೆ ಮಾಡಿದರೆ ಪ್ರಧಾನಮಂತ್ರಿ, ನರೇಂದ್ರ, ಮೋದಿಯವರಿಗೆ ಮೊದಲಿಗನಾಗಿ ನಾನು ಧನ್ಯವಾದ ಹೇಳುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ. ಅಂಬೇಡ್ಕರ್ ಜಯಂತಿಯಲ್ಲಿ ಮಾತನಾಡಿದ ಅವರು, ದೇಶದಲ್ಲೇ ಆಂಧ್ರಪ್ರದೇಶ ಹೊರತುಪಡಿಸಿದರೆ ಕರ್ನಾಟಕ ಸರ್ಕಾರ ಎರಡನೆಯದಾಗಿ ಎಸ್ ಸಿಪಿ, ಟಿಎಸ್ ಪಿ ಜಾರಿಗೆ ತಂದಿದೆ.

ಜನಸಂಖ್ಯೆಗನುಗುಣವಾಗಿ ಹಣ ಬಳಕೆ ಮಾಡುತ್ತಿದ್ದೇವೆ. ಇದನ್ನು ಮರೆಮಾಚಲು ಬಿಜೆಪಿಯ ವರು ಪರಿಶಿಷ್ಟರ ಅಭಿವೃದ್ಧಿಗೆ ಹಣವನ್ನು ಬೇರೆ ರೀತಿ ವರ್ಗಾವಣೆ ಮಾಡಲಾಗಿದೆ ಎಂದು ಟೀಕೆ ಮಾಡುತ್ತಿದ್ದಾರೆ. ಇಂತಹ ಹೇಳಿಕೆಗಳನ್ನು ನೀಡಲು ಬಿಜೆಪಿಯವರಿಗೆ ನಾಚಿಕೆಯಾಗಬೇಕು ಎಂದು ವಾಗ್ದಾಳಿ ನಡೆಸಿದರು. ಬಿಜೆಪಿ ಆಡಳಿತದಲ್ಲಿರುವ ಯಾವ ರಾಜ್ಯದಲ್ಲಿ ಎಸ್ ಸಿಪಿ, ಟಿಎಸ್ ಪಿ ಕಾಯ್ದೆಯಿಲ್ಲ, ಟೀಕೆ ಮಾಡುವ ಬಿಜೆಪಿಯು ಕೇಂದ್ರದಲ್ಲಿ ಎಸ್ ಸಿಪಿ, ಟಿಎಸ್‌ಪಿಯನ್ನು ಜಾರಿಗೊಳಿಸಲಿ ಎಂದು ಸವಾಲು ಹಾಕಿದರು. ಈ ಹಿಂದೆ ಪರಿಶಿಷ್ಟ ಜಾತಿ, ಪಂಗಡದವರಿಗೆ ಕಡಿಮೆ ಹಣ ನಿಗದಿ ಮಾಡಲಾಗುತ್ತಿತ್ತು. ನಮ್ಮ ಸರ್ಕಾರ ಕಾಯ್ದೆ ತಂದ ಪರಿಣಾಮ ಈ ವರ್ಷ 32 ಸಾವಿರ ಕೋಟಿ ರೂ.ಗಳನ್ನು ನಿಗದಿ ಮಾಡಲಾಗಿದೆ. ಬಡ್ತಿ ಮೀಸಲಾತಿಗೆ ಇಡೀ ದೇಶದಲ್ಲೇ ನಾವು ಕಾಯ್ದೆ ರೂಪಿಸಿದ್ದೇವೆ. ಬಿಜೆಪಿಯವರು ಸಾಮಾಜಿಕ ನ್ಯಾಯ, ಸಂವಿಧಾನಕ್ಕೆ ವಿರುದ್ಧವಾಗಿದ್ದಾರೆ ಎಂದರು. ಮಹಿಳೆಯರಿಗೆ, ಪರಿಶಿಷ್ಟರಿಗೆ, ಶೋಷಿತರಿಗೆ ಸಮಾನತೆ ನೀಡುವ ಆಶಯವನ್ನು ಸಂವಿಧಾನ ಹೊಂದಿದೆ.

**ಬಡವರ ಮಕ್ಕಳು ವೈದ್ಯರು, ಇಂಜಿನಿಯರುಗಳಾಗಬೇಕು**

ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವದ ಉದ್ದೇಶ ಕೂಡ ಸಮಾನತೆಯಾಗಿದೆ. ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತಿವೆ.

ಜನರಿಗೆ ಖರೀದಿಸುವ ಶಕ್ತಿ ಇಲ್ಲದೇ ಹೋದರೆ ಆರ್ಥಿಕ ಚಟುವಟಿಕೆಗಳು ಕುಸಿಯುತ್ತದೆ ಎಂದು ಹೇಳಿದರು. ಅವಕಾಶವಂಚಿತರಿಗಾಗಿ ನಾವೆಲ್ಲಾ ಹೋರಾಟ ಮಾಡಲು ಜೀವನ ಮುಡಿ ಪಾಗಿಡಬೇಕು. ತಮ್ಮ ಸರ್ಕಾರ ಪರಿಶಿಷ್ಟರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರಿಗೆ ಗುತ್ತಿಗೆ ನೀಡಿ ಮೀಸಲಾತಿ ನೀಡಲು ನಿರ್ಧಾರ ತೆಗೆದು ಕೊಂಡಿದ್ದೇವೆ. ಅಲ್ಪಸಂಖ್ಯಾತರಿಗೆ ಗುತ್ತಿಗೆಯಲ್ಲಿ ಮೀಸಲಾತಿ ನೀಡಿದ್ದನ್ನು ಓಲೈಕೆಯ ರಾಜಕೀಯ ಎಂದು ದೊಡ್ಡ ಪ್ರಮಾಣದಲ್ಲಿ ಅಪ ಪ್ರಚಾರ ಮಾಡಿದರು. ಮುಸ್ಲಿಮರಿಗೆ ಆರ್ಥಿಕ, ಸಾಮಾಜಿಕ ಸಾಮರ್ಥ್ಯ ಇಲ್ಲ. ಯಾರಿಗೆ ಅವಕಾಶ ಸಿಗುವುದಿಲ್ಲವೋ ಅವರಿಗೆ ನ್ಯಾಯ ದೊರಕಿಸಲು ನಮ್ಮ ಸರ್ಕಾರ ಪ್ರಯತ್ನಿಸಬೇಕು ಎಂದರು.

ನನ್ನನ್ನು ಮೇಲ್ವರ್ಗದ ವಿರೋಧಿ ಎಂದು ಬಿಂಬಿಸುವ ಪ್ರಯತ್ನ ನಡೆದಿದೆ. ನಾನು ಯಾರ ವಿರೋಧಿಯೂ ಅಲ್ಲ. ಅಂಬೇಡ್ಕರ್ ಆಶಯದಂತೆ ಶೋಷಿತರ ಪರವಾಗಿ ನಾನು ಕೆಲಸ ಮಾಡುತ್ತೇನೆ ಎಂದರು. ಶಿಕ್ಷಣಕ್ಕೆ ಒತ್ತು ನೀಡಬೇಕೆಂಬ ಸಲುವಾಗಿ ಪ್ರತಿ ಹೋಬಳಿಗೊಂದು ವಸತಿ ಶಾಲೆ ಆರಂಭಿಸಲು ನಿರ್ಧರಿಸಲಾಗಿದೆ. ಈ ವರ್ಷ 26 ವಸತಿ ಶಾಲೆಗಳನ್ನು ಮಂಜೂರು ಮಾಡಿದ್ದೇವೆ. ಬಡವರ ಮಕ್ಕಳು ಕೂಡ ವೈದ್ಯರು, ಇಂಜಿನಿಯರುಗಳಾಗಬೇಕು. ಇದೇ ನಮ್ಮ ಸರ್ಕಾರದ ಆಶಯ ಎಂದು ಹೇಳಿದರು.

ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆಯಿತ್ತು. ಈ ಹಿನ್ನೆಲೆಯಲ್ಲಿ 13 ಡಿಸಿಆರ್‌ಇ ಪೊಲೀಸ್ ಠಾಣೆಗಳನ್ನು ಸೋಮವಾರ ಮಧ್ಯರಾತ್ರಿಯಿಂದಲೇ ಆರಂಭಿಸಲಾಗಿದೆ ಎಂದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಸಂವಿಧಾನ ಪೀಠ ಸ್ಥಾಪಿಸಲಾಗುವುದು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಂಬೇಡ್ಕರ್ ವಸ್ತುಪ್ರದರ್ಶನ ಆರಂಭಿಸಿ ಎಲ್ಲಿಯೂ ಇಲ್ಲದಷ್ಟು ದೊಡ್ಡ ಪ್ರತಿಮೆಯನ್ನು ಸ್ಥಾಪಿಸಲಾಗುತ್ತದೆ ಎಂದು ಹೇಳಿದರು. ಇದಕ್ಕೂ ಮೊದಲು ಮುಖ್ಯಮಂತ್ರಿಯವರು ವಿಧಾನಸೌಧದ ಮುಂದಿನ ಅಂಬೇಡ್ಕರ್ ರವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಡಿಸಿಎಂ ಡಿ.ಕೆ.ಶಿವಕುಮಾರ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಎಚ್.ಸಿ.ಮಹದೇವಪ್ಪ ಮತ್ತಿತರರಿದ್ದರು.

> ಜಾತಿ ವ್ಯವಸ್ಥೆಗೆ ಚಲನಶೀಲತೆ ಇಲ್ಲ, ವಿದ್ಯಾವಂತರೇ ಜಾತಿ ಮಾಡುತ್ತಿದ್ದಾರೆ. ಅಂಬೇಡ್ಕರ್‌ರವರು ತಮ್ಮ ಜ್ಞಾನದಿಂದ ಶೋಷಣೆ ಮುಕ್ತ ಸಮಾಜ ನಿರ್ಮಿಸಲು ಬಳಕೆ ಮಾಡಿದ್ದರು. ಅಂಬೇಡ್ಕರವರ ಮೂಲಮಂತ್ರ, ಆಶಯಗಳನ್ನು ಎಲ್ಲರೂ ಪಾಲನೆ ಮಾಡಬೇಕು. ಪ್ರತಿಯೊಬ್ಬರೂ ವಿದ್ಯಾವಂತರಾಗಬೇಕು. ಸಂಘಟಿತರಾಗಬೇಕು. ಅಂಬೇಡ್ಕರ್ ಇಲ್ಲದಿದ್ದರೆ ಶೋಷಿತರಿಗೆ ನ್ಯಾಯ ಸಿಗುತ್ತಿರಲಿಲ್ಲ
> - ಸಿದ್ದರಾಮಯ್ಯ, ಮುಖ್ಯಮಂತ್ರಿ

# 10 ನಿಮಿಷಕ್ಕೊಂದು ಮೆಟ್ರೋ ರೈಲು

• ಉದಯವಾಹಿನಿ, ಬೆಂಗಳೂರು

ಸೋಮವಾರ ರಜಾದಿನ ಎಂದು ಪರಿಗಣಿಸಿ ಬೆಳಿಗ್ಗೆ ದಟ್ಟಣೆ ಅವಧಿಯಲ್ಲಿ 10 ನಿಮಿಷ ಕ್ಕೊಂದು ರೈಲು ಓಡಿಸಿದ ಬೆಂಗಳೂರು ಮೆಟ್ರೊ ರೈಲ್ ಕಾರ್ಪೊರೇಶನ್ ಲಿಮಿಟೆಡ್ ಕ್ರಮವನ್ನು ಸಂಸದ ಪಿ.ಸಿ. ಮೋಹನ್ ಟೀಕಿಸಿದ್ದಾರೆ. ಮೆಟ್ರೋ ಅಸಮರ್ಪಕ ನಿರ್ವಹಣೆ ಕುರಿತು ಎಕ್ಸ್, ಟ್ವಿಟರ್‌ನಲ್ಲಿ ಕಿಡಿಕಾರಿರುವ ಸಂಸದ, ಮೆಜೆಸ್ಟಿಕ್ ಮೆಟ್ರೊ ನಿಲ್ದಾಣದಲ್ಲಿನ ಅಸಮರ್ಪಕ ನಿರ್ವಹಣೆಯನ್ನು ಒಪ್ಪಲಾಗದು. ಎಲ್ಲರಿಗೂ ರಜೆ ಇದೆ ಎಂದು ಭಾವಿಸಿ ಸೋಮವಾರ ಬೆಳಿಗ್ಗೆ ಪ್ರತಿ ರೈಲು ಸಂಚಾರ ನಡುವಣ ಅವಧಿಯನ್ನು 10 ನಿಮಿಷಕ್ಕೆ ಏರಿಸಿದ್ದು, ಅವ್ಯವಸ್ಥೆ ಸೃಷ್ಟಿಸಿತು' ಎಂದು ಬರೆದುಕೊಂಡಿದ್ದಾರೆ.

ಲೋಕಸಭೆಯಲ್ಲಿ ಬೆಂಗಳೂರು ಕೇಂದ್ರ ಕ್ಷೇತ್ರವನ್ನು ಪ್ರತಿನಿಧಿಸುವ ಅವರು, ಬಿಎಂಆರ್‌ಸಿಎಲ್, ಇಂತಹ ಸಂದರ್ಭಗಳಲ್ಲಿ ಉತ್ತಮ ಯೋಜನೆಗಳನ್ನು ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ. ಮೆಜೆಸ್ಟಿಕ್ ನಿಲ್ದಾಣದಲ್ಲಿ ಭಾರಿ ಸಂಖ್ಯೆಯಲ್ಲಿ ಪ್ರಯಾಣಿಕರು ಜಮಾಯಿಸಿದ್ದ ವಿಡಿಯೋವನ್ನೂ ಹಂಚಿಕೊಂಡಿದ್ದಾರೆ.

ಬೆಳಿಗ್ಗೆ ಸಮಯದಲ್ಲಿ, ಎಲ್ಲಾ ಮೆಟ್ರೋ ನಿಲ್ದಾಣಗಳಲ್ಲಿಯೂ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುತ್ತದೆ. ಹೀಗಾಗಿ ಪ್ರತಿ ರೈಲು ಸಂಚಾರದ ನಡುವಣ ಅಂತರ ಮೂರ ರಿಂದ ಐದು ನಿಮಿಷ ಇರುತ್ತದೆ. ಆದರೆ, ಇಂದು 10 ನಿಮಿಷಗಳ ಅಂತರವಿದ್ದ ಕಾರಣ, ಹಲವು ನಿಲ್ದಾಣಗಳಲ್ಲಿ ಜನದಟ್ಟಣೆ ಉಂಟಾಗಿತ್ತು. ಇದರಿಂದಾಗಿ, ಪ್ರಯಾಣಿಕರು ತೊಂದರೆ ಅನುಭವಿಸುವಂತಾಯಿತು.

# ಲಾರಿ ಮುಷ್ಕರ: ಲಾರಿ ಮಾಲೀಕರ ಸಂಘದ ಅಧ್ಯಕ್ಷ ಷಣ್ಮುಖಪ್ಪ

• ಉದಯವಾಹಿನಿ, ಬೆಂಗಳೂರು

ಡೀಸೆಲ್ ದರ ಏರಿಕೆಯನ್ನು ಖಂಡಿಸಿ, ಐದು ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಏ. 14ರ ರಾತ್ರಿಯಿಂದಲೇ ಸಂಚಾರ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ರಾಜ್ಯ ಲಾರಿ ಮಾಲೀಕರ, ಏಜೆಂಟರ ಸಂಘ ಪ್ರಕಟಿಸಿದೆ. ಜಲ್ಲಿ, ಮರಳು ಸಾಗಣೆ ವಾಹನಗಳು, ಗ್ಯಾಸ್ ಟ್ಯಾಂಕ್ ಮಾಲೀಕರ ಸಂಘ ಸಹಿತ 69 ಸಂಘಟನೆಗಳು ಮುಷ್ಕರ ಬೆಂಬಲಿಸಿವೆ. ರಾಜ್ಯದಲ್ಲಿ ಸುಮಾರು 700 ಗೂಡ್ಸ್ ಕಚೇರಿಗಳಿದ್ದು, ಬಂದ್ ಆಗಲಿವೆ. ಈ ಬಗ್ಗೆ ಕೈಗಾರಿಕೆ, ಕಾರ್ಖಾನೆ, ಕಂಪನಿಗಳಿಗೆ ಮುಷ್ಕರದ ಬಗ್ಗೆ ಪತ್ರ ಬರೆಯಲಾಗಿದೆ ಎಂದು ಸಂಘದ ಅಧ್ಯಕ್ಷ ಜಿ.ಆರ್.ಷಣ್ಮುಖಪ್ಪ ತಿಳಿಸಿದ್ದಾರೆ. ಡೀಸೆಲ್ ದರವನ್ನು 2024ರ ಜೂನ್‌ನಲ್ಲಿ 3 ಏರಿಸಿದ್ದ ರಾಜ್ಯ ಸರ್ಕಾರ ಈಗ ಮತ್ತೆ 2 ಏರಿಸಿದೆ. ಈ ಏರಿಕೆ ಕೈಬಿಡುವವರೆಗೆ ಮುಷ್ಕರ ಕೈಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

# ಸೌರ-ಪವನ ವಿದ್ಯುತ್ ಉತ್ಪಾದನೆಗೆ ಯೋಜನೆ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ರಾಜ್ಯದಲ್ಲಿ 19 ಸಾವಿರ ಮೆಗಾವ್ಯಾಟ್ ಸಾಮರ್ಥ್ಯದ ಸೌರ, ಪವನ ವಿದ್ಯುತ್ ಉತ್ಪಾದನೆ ಅನುಷ್ಠಾನಕ್ಕೆ ಪ್ರಕ್ರಿಯೆ ಆರಂಭವಾಗಿದೆ. ಜೊತೆಗೆ, ಸಂಯೋಜಿತ ವಿಧಾನದ ಮೂಲಕ ಉತ್ಪಾದನೆಯಾಗುವ ವಿದ್ಯುತ್ ಅನ್ನು ಸಂಗ್ರಹಿಸುವ ಬ್ಯಾಟರಿಗಳ, ಪ್ರಸರಣ ಮಾರ್ಗಗಳ ಸ್ಥಾಪಿಸುವ ಯೋಜನೆಯನ್ನೂ ರೂಪಿಸಲಾಗಿದೆ. ಈ ಯೋಜನೆ ಅನುಷ್ಠಾನಕ್ಕೆ ಟೆಂಡರ್ ಪ್ರಕ್ರಿಯೆ ಆರಂಭಿಸಲು ಇಂಧನ ಇಲಾಖೆ ಸಿದ್ಧತೆ ನಡೆಸಿದೆ. 2030ರ ವೇಳೆಗೆ ಗುರಿ ಸಾಧಿಸುವ ಯೋಜನೆ ಇದೆ. ಈ ಯೋಜನೆ ಸೌರ ಮತ್ತು ಪವನ ವಿದ್ಯುತ್ ಎರಡನ್ನೂ ಒಟ್ಟಾಗಿ ಬಳಸಿಕೊಳ್ಳುವುದನ್ನು ಕೇಂದ್ರೀಕರಿಸುತ್ತದೆ. ಇದರಿಂದ ಉತ್ಪಾದನೆಯಾಗುವ ವಿದ್ಯುತ್ ಸಂಗ್ರಹಿಸಲು ಬ್ಯಾಟರಿ ವ್ಯವಸ್ಥೆ ಅಥವಾ ಪ್ರಸರಣದ ಮಾರ್ಗ ಮಧ್ಯೆ ಸಂಗ್ರಹಿಸಿಟ್ಟುಕೊಂಡು ಅಗತ್ಯವಿದ್ದಾಗ ಬಳಕೆ ಮಾಡಬಹುದಾದ ಹೊಸ ವ್ಯವಸ್ಥೆಯನ್ನು ರೂಪಿಸಲಾಗುವುದು ಎಂದು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್‌ಕುಮಾರ್ ಪಾಂಡೆ ತಿಳಿಸಿದರು.

ಬೆಳಿಗ್ಗೆ ವೇಳೆ ಸೌರಶಕ್ತಿ ಉತ್ಪಾದನೆ ಹೆಚ್ಚಿರುತ್ತದೆ. ಸಂಜೆ ವೇಳೆ ಪವನ ಶಕ್ತಿ ಉತ್ಪಾದನೆ ಸಾಮಾನ್ಯವಾಗಿ ಹೆಚ್ಚಾಗಿರುತ್ತದೆ. ಆದ್ದರಿಂದ, ನಾವು ಹೈಬ್ರಿಡ್ ಮಾದರಿಯನ್ನು ಅನುಸರಿಸಿಕೊಂಡು, ಸಾಮಾನ್ಯ ಪ್ರಸರಣ ಮಾರ್ಗಗಳನ್ನು ಬಳಸಲು ಆಯ್ಕೆ ಮಾಡಿಕೊಂಡಿದ್ದೇವೆ. ಇದನ್ನು ಸಂಗ್ರಹ ವ್ಯವಸ್ಥೆಗಳೊಂದಿಗೆ ಸಂಯೋಜಿಸಲಾಗುತ್ತದೆ ಎಂದು ಅವರು ವಿವರಿಸಿದರು. ವಿದ್ಯುತ್ ಸಂಗ್ರಹ ವ್ಯವಸ್ಥೆಯ ಕೊರತೆಯಿಂದಾಗಿ, ರಾಜ್ಯದಲ್ಲಿ ಕೆಲವೊಮ್ಮೆ ಬೇಡಿಕೆ ಅವಧಿಯಲ್ಲಿ ವಿದ್ಯುತ್ ಕೊರತೆ ಎದುರಾಗುತ್ತದೆ. ಹಾಗೆಯೇ, ದಟ್ಟಣೆ ಇಲ್ಲದ ಅವಧಿಯಲ್ಲಿ ಹೆಚ್ಚುವರಿ ವಿದ್ಯುತ್ ಉತ್ಪಾದನೆಯಾಗುತ್ತದೆ. ಈ ಹೊಸ ನವೀಕರಿಸಬಹುದಾದ ವಿದ್ಯುತ್ ಯೋಜನೆಯಿಂದ ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ಸುಧಾರಿಸುವುದಲ್ಲದೆ, ಹೆಚ್ಚು ಉತ್ಪಾದನೆಯಾಗುವ ವಿದ್ಯುತ್ ಸಂಗ್ರಹಿಸಿ ದಟ್ಟಣೆ ಅವಧಿಯಲ್ಲಿ ಬಳಸಲು ಸಹಾಯವಾಗುತ್ತದೆ. ಈ ಯೋಜನೆಯ ಗುರಿ 19 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ. ಈ ಯೋಜನೆಯನ್ನು ಬೆಳಗಾವಿ, ಕೊಪ್ಪಳ, ರಾಯಚೂರು, ಗದಗ, ಹಾವೇರಿಯಂತಹ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ, ಮಧ್ಯ ಕರ್ನಾಟಕದ ಜಿಲ್ಲೆ ಚಿತ್ರದುರ್ಗದಲ್ಲಿ ಅನುಷ್ಠಾನಗೊಳಿಸಿ 15 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಪ್ರಸ್ತಾವವಿದೆ. ಯೋಜನೆ ಅನುಷ್ಠಾನಕ್ಕೆ ಹಲವು ಜಿಲ್ಲೆಗಳಲ್ಲಿ ಜಮೀನುಗಳನ್ನು ಗುರುತಿಸಲಾಗಿದೆ. ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ರೈತರೊಂದಿಗೆ ಮಾತುಕತೆ ಪೂರ್ಣಗೊಂಡಿದೆ. ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಪಂಕಜ್‌ಕುಮಾರ್ ಪಾಂಡೆ ತಿಳಿಸಿದರು.

# ಜಕ್ಕೂರಿನಲ್ಲಿ ಅಂಬೇಡ್ಕರ್ ಜಯಂತ್ಯೋತ್ಸವ

• ಉದಯವಾಹಿನಿ, ಯಲಹಂಕ


ಉದಯವಾಹಿನಿ ಚಿತ್ರ

ಹುಟ್ಟಿನಿಂದ ಯಾರೂ ಮೇಲು-ಕೀಳಾಗುವುದಿಲ್ಲ ನಮ್ಮ ಗುಣದಿಂದ ಮಾತ್ರ ನಾವು ಮೇಲೆ-ಕೆಳಗೆ ಎಂಬುದನ್ನು ಸಂಪಾದಿಸಬಹುದು ಎಂಬ ಸಂದೇಶವನ್ನು ಸಾರುವ ಮೂಲಕ ನಮ್ಮನ್ನು ಜಾಗೃತರಾಗಿ ಮಾಡಲು ತಮ್ಮ ಜೀವನವನ್ನೇ ತ್ಯಾಗಮಾಡಿದ ಮಹಾನ್ ಮಾನವತಾವಾದಿ ಅಂಬೇಡ್ಕರ್ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರಿನ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯಭವನ ಟ್ರಸ್ಟ್ ಹಾಗೂ ಜಕ್ಕೂರು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಆಯೋಜಿಸಿದ್ದ ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬುದ್ಧ, ಬಸವಣ್ಣ ಮತ್ತು ಗಾಂಧೀಜಿ, ಕುವೆಂಪು ಅವರು ಇದೇ ಸಂದೇಶವನ್ನು ಸಾರಿದರು. ಇವರೆಲ್ಲರೂ ಹೇಳಿದ ಸಂದೇಶವನ್ನು ಸಂವಿಧಾನದಲ್ಲಿ ಕಾರ್ಯರೂಪಕ್ಕೆ ತಂದವರು ಅಂಬೇಡ್ಕರ್ ಅವರು ಎಂದರು. ದೇಶದಲ್ಲಿ ಇಂದು ಇವರ ಸಂದೇಶಗಳನ್ನು ಸಹಿಸದ ಕೆಲವರು ಸಂವಿಧಾನವನ್ನು ತಿದ್ದಬೇಕೆಂಬ ಪಿತೂರಿ ನಡೆಸುತ್ತಿದ್ದಾರೆ. ಬಡವರ ದುಡಿಮೆ ಶ್ರೀಮಂತರ ಕೈಸೇರುವ ಮೂಲಕ ಕೆಲವು ಶ್ರೀಮಂತರು ಕುಬೇರರಾಗುತ್ತಿದ್ದು, ಬಡವರು ಇನ್ನೂ ಬಡವರಾಗುತ್ತಿದ್ದಾರೆ. ಇದರ ವಿರುದ್ದ ನಾವೆಲ್ಲರೂ ಜಾಗೃತರಾಗದಿದ್ದರೆ, ಸಂವಿಧಾನದಲ್ಲಿ ಅಡಕಮಾಡಿರುವ ಸಮಾನತೆಯ ಸಾರಾಂಶ ನನಸಾಗದೆ ಕನಸಾಗಿಯೇ ಉಳಿಯಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎರಡು ಸಾವಿರ ಬಡಮಹಿಳೆಯರಿಗೆ ಸೀರೆ, 500 ಮಂದಿ ಪುರುಷರಿಗೆ ಬಟ್ಟೆ ವಿತರಿಸಲಾಯಿತು.

ಅಂಬೇಡ್ಕರ್ ಸಮುದಾಯಭವನ ಧ್ಯಕ್ಷ ರವಿಕುಮಾರ್, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ವಿ.ನಾಗರಾಜ್, ಕಾಂಗ್ರೆಸ್ ಮುಖಂಡರಾದ ಎಂ.ಹನುಮಂತೇಗೌಡ, ಎನ್.ಎನ್. ಶ್ರೀನಿವಾಸಯ್ಯ, ಎಂ.ಜಯಗೋಪಾಲಗೌಡ, ಎನ್.ಕೆ.ಮಹೇಶ್ ಕುಮಾರ್, ಬಿ.ಜಿ.ರಮೇಶ್, ಎಚ್.ಎ.ಶಿವಕುಮಾರ್, ಎಸ್. ಮಾರುತಿ, ಶಾಂತಕುಮಾರ್, ದಿವ್ಯ ರಾಜಣ್ಣ ಇನ್ನಿತರರಿದ್ದರು.

# ಒನ್-ಟೈಮ್ ಸೆಟ್ಲ್‌ಮೆಂಟ್‌ನಿಂದ ಶೇ 94.62 ರಷ್ಟು ಟ್ಯಾಕ್ಸ್!

## 2025-26ನೇ ಹಣಕಾಸು ವರ್ಷದಲ್ಲಿ ರೂ.6,000 ಕೋಟಿ ಮೊತ್ತದ ಆಸ್ತಿ ತೆರಿಗೆ ಸಂಗ್ರಹ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

**ಬಿಬಿಎಂಪಿ ವ್ಯಾಪ್ತಿ ಆಸ್ತಿ ತೆರಿಗೆ ಸಂಗ್ರಹ**

2023-24 ನೇ ಸಾಲಿಗಿಂತ 2024-25ನೇ ಸಾಲಿನಲ್ಲಿ ರೂ.1,000 ಕೋಟಿಗಳಿಗಿಂತ ಹೆಚ್ಚಿನ ಮೊತ್ತದ ಆಸ್ತಿ ತೆರಿಗೆ ಸಂಗ್ರಹಣೆಯಾಗಿದೆ. 2023-24 ನೇ ಸಾಲಿನಲ್ಲಿ ರೂ. 3,918 ಕೋಟಿ ಆಸ್ತಿ ತೆರಿಗೆ ಸಂಗ್ರಹಣೆಯಾಗಿತ್ತು. ಪ್ರಸಕ್ತ 2025-26ನೇ ಹಣಕಾಸು ವರ್ಷದಲ್ಲಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ರೂ.6,000 ಕೋಟಿ ಮೊತ್ತದ ಆಸ್ತಿ ತೆರಿಗೆ ಸಂಗ್ರಹಣೆಯನ್ನು ಮೀರಲಿದೆ. ಈ ವರ್ಷ ಕಳೆದ ವರ್ಷಕ್ಕಿಂತ ಬರೋಬ್ಬರಿ ಸಾವಿರ ಕೋಟಿ ರೂಪಾಯಿ ಹೆಚ್ಚು ಆಸ್ತಿ ತೆರಿಗೆಸಂಗ್ರಹಿಸಿದೆ. ಮಹದೇವಪುರ ಹಾಗೂ ಯಲಹಂಕ ವಲಯಗಳಲ್ಲಿ ನೂರಕ್ಕೆ ನೂರರಷ್ಟು ತೆರಿಗೆ ವಸೂಲಿ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ 5 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ತೆರಿಗೆ ಸಂಗ್ರಹದ ಗುರಿಯನ್ನು ಬಿಬಿಎಂಪಿ ಹೊಂದಿತ್ತು. 2016 ರಂತೆಯೇ ಮುಂದುವರಿದ ಆಸ್ತಿ ತೆರಿಗೆ ದರಗಳನ್ನು ಹೆಚ್ಚಿಸದೆ ಇರುವುದರಿಂದ ಇದೆಲ್ಲವೂ ಸಾಧ್ಯವಾಯಿತು.

**ಶೇ 94.62 ರಷ್ಟು ತೆರಿಗೆ ಸಂಗ್ರಹ:** ದಕ್ಷಿಣ ವಲಯವು 769.50 ಕೋಟಿ ರೂ. ಗುರಿಯಲ್ಲಿ 733.65 ಕೋಟಿ ರೂ. ಸಂಗ್ರಹಿಸುವ ಮೂಲಕ ಮೂರನೇ ಸ್ಥಾನದಲ್ಲಿದೆ. ಪೂರ್ವ ವಲಯವು ಶೇ 93.52 ರೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ ಮತ್ತು ದಾಸರಹಳ್ಳಿ ಶೇ 92.72 ರೊಂದಿಗೆ ಐದನೇ ಸ್ಥಾನದಲ್ಲಿದೆ. ಪಶ್ಚಿಮ ವಲಯವು ತೆರಿಗೆ ಸಂಗ್ರಹದಲ್ಲಿ ಶೇ 92.17 ಸಾಧಿಸಿದರೆ, ರಾಜರಾಜೇಶ್ವರಿ ನಗರವು 87.89 ರ ಸಾಧನೆ ಮಾಡಿದೆ. 585.11 ಕೋಟಿ ರೂ. ಗುರಿಯಲ್ಲಿ ಕೇವಲ ಶೇ 83.75 ಮಾತ್ರ ಸಂಗ್ರಹ ಮಾಡುವ ಮೂಲಕ ಬೊಮ್ಮನಹಳ್ಳಿ ಅತ್ಯಂತ ಕಡಿಮೆ ತೆರಿಗೆ ಸಂಗ್ರಹಿಸಿದೆ.

ಒಟ್ಟಾರೆಯಾಗಿ ಶೇ 94.62 ರಷ್ಟು ತೆರಿಗೆ ಸಂಗ್ರಹವಾಗಿದೆ. ತೆರಿಗೆ ಬಾಕಿ ಉಳಿಸಿಕೊಂಡಿರುವವರಿಂದ ವಸೂಲಿ ಮಾಡಲು ಈ ಬಾರಿ ಬಿಬಿಎಂಪಿ ಹಲವು ಕ್ರಮಗಳನ್ನು ಕೈಗೊಂಡಿತ್ತು. ಒನ್-ಟೈಮ್ ಸೆಟ್ಲ್‌ಮೆಂಟ್, ಸ್ಥಿರಾಸ್ತಿಗಳನ್ನು ಹರಾಜು ಹಾಕಿ ಮೊತ್ತ ವಸೂಲಿ ಇತ್ಯಾದಿ ನಡೆಗಳನ್ನು ಅನುಸರಿಸಿತು.

**2024-25 ರಲ್ಲಿ ಆಸ್ತಿ ತೆರಿಗೆ ಸಂಗ್ರಹ ಹೆಚ್ಚಳಕ್ಕೆ ಕಾರಣ ಏನು?:** 1. ಒನ್-ಟೈಮ್ ಸೆಟ್ಲ್‌ಮೆಂಟ್

2. ಬಾಕಿ ಮತ್ತು ಪ್ರಸ್ತುತ ತೆರಿಗೆ ಬಾಕಿಗಳ ಮೇಲೆ ಬಹಳ ವ್ಯವಸ್ಥಿತ ಕೆಲಸ ನಿರ್ವಹಣೆ ಮತ್ತು ತಂತ್ರಜ್ಞಾನ ಆಧಾರಿತ ಅನುಸರಣೆ.

3. ಬಾಕಿ ಆಸ್ತಿ ತೆರಿಗೆಗಳನ್ನು ವಸೂಲಿ ಮಾಡಲು ಸಂಪೂರ್ಣವಾಗಿ ಪರಿಣಾಮಕಾರಿ ಪ್ರಮಾಣಿತ ಕಾರ್ಯಾಚರಣೆ ವಿಧಾನಗಳು, ನಿಯಮಗಳನ್ನು ಹೊರಡಿಸಲಾಗಿತ್ತು. ಬಾಕಿ, ಪ್ರಸ್ತುತ ಸಾಲಿನ ಆಸ್ತಿ ತೆರಿಗೆಯ ವಸೂಲಾತಿಗೆ ಮನೆ- ಮನೆಗಳಿಗೆ ನಿರಂತರವಾಗಿ ಭೇಟಿ ನೀಡಿ ವಸೂಲಿ ಮಾಡಲಾಗಿರುತ್ತದೆ ಎಂದು ಬಿಬಿಎಂಪಿಯ ವಿಶೇಷ ಆಯುಕ್ತರು ಮುನಿಶ್ ಮೌದ್ಗಿಲ್ ಹೇಳಿದರು.

### ಇ-ಖಾತಾ ಸೇವೆ ನೀಡಲು ಉದ್ಯಮಿಗಳಿಗೆ ಅವಕಾಶ

ನಾಗರಿಕರಿಗೆ ಮತ್ತಷ್ಟು ತ್ವರಿತಗತಿಯಲ್ಲಿ ಇ-ಖಾತಾ ಸಿಗಬೇಕೆಂಬ ದೃಷ್ಟಿಯಲ್ಲಿ ಪಾಲಿಕೆಯು ವಿನೂತನ ಕ್ರಮವನ್ನು ತೆಗೆದುಕೊಂಡಿದೆ. ಅದೇನೆಂದರೆ ಪಾಲಿಕೆ ವ್ಯಾಪ್ತಿಯಲ್ಲಿ ಯುವ, ಸ್ಥಳೀಯ ಖಾಸಗಿ ಉದ್ಯಮಿಗಳು ಪಾಲಿಕೆಯ ವೆಬ್ ಸೈಟ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ಅನಂತರ ನಾಗರಿಕರಿಗೆ ಇ-ಖಾತಾ ಸೇವೆಗಳನ್ನು ನೀಡಿ ಹಣ ಗಳಿಸುವ ಸುವರ್ಣಾವಕಾಶವನ್ನು ಕಲ್ಪಿಸಲಾಗಿದೆ.

# ಕಾಂಗ್ರೆಸ್ ಪ್ರತಿಭಟನೆ ಕಪಟ ನಾಟಕ: ಬಿವೈವಿ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ನಡೆಸಲು ಮುಂದಾಗಿರುವುದು ಒಂದು ಕಪಟ ನಾಟಕ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದ್ದಾರೆ. ಸನಮ್ಮ ಪಕ್ಷದ ಹೋರಾಟದಿಂದ ಬೆದರಿರುವ ಕಾಂಗ್ರೆಸ್ ಇದೇ 17ರಂದು ಕೇಂದ್ರದ ವಿರುದ್ಧ ಹೋರಾಟ ಮಾಡಲು ಮುಂದಾಗಿದೆ. ಇದು ರಾಜ್ಯದ ಜನರ ಗಮನವನ್ನು ಬೇರೆಡೆ ಸೆಳೆಯುವ ತಂತ್ರ, ಕಾಂಗ್ರೆಸ್‌ನವರ ಹೋರಾಟ ಕಪಟ ನಾಟಕ ಎಂದು ವಾಗ್ದಾಳಿ ನಡೆಸಿದರು. ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸದ ಅವರು, ಪ್ರಧಾನಿ ನರೇಂದ್ರಮೋದಿ ನೇತೃತ್ವದ ಸರ್ಕಾರದ ವಿರುದ್ಧ ನೀವು ಎಷ್ಟೇ ಹೋರಾಟ ಮಾಡಿದರೂ ಜನ ನಂಬುವುದಿಲ್ಲ, ನಿಮ್ಮ ಹೋರಾಟದ ಪ್ರಯತ್ನ ಸಫಲವಾಗುವುದಿಲ್ಲ ಎಂದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ಬೆಲೆ ಏರಿಕೆ ವಿರುದ್ಧ ಬಿಜೆಪಿ ನಡೆಸಿದ ಹೋರಾಟದಲ್ಲಿ ಮೊದಲ ಹಂತದ ಜನಾಕ್ರೋಶ ಯಾತ್ರೆ ಯಶಸ್ವಿಯಾಗಿದೆ ಏಪ್ರಿಲ್ 1, 3ರಂದು ಸರ್ಕಾರದ ಬೆಲೆ ಏರಿಕೆ ವಿರುದ್ಧ ಯಶಸ್ವಿ ಅಹೋರಾತ್ರಿ, ಧರಣಿ ನಡೆಸಿದ್ದೆವು. ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಸೇರಿದಂತೆ ಪಕ್ಷದ ಎಲ್ಲಾ ನಾಯಕರೂ ಯಾತ್ರೆ ಭಾಗವಹಿಸಿದ್ದರು ಎಂದು ಸಮರ್ಥನೆ ಮಾಡಿಕೊಂಡರು. ರಾಜ್ಯಾದ್ಯಂತ ಬೆಲೆಯೇರಿಕೆ ವಿರುದ್ಧ ಹೋರಾಟ ಮಾಡಿದ್ದೇವೆ. ಮೂರು ಹಂತಗಳಲ್ಲಿ ಜನಾಕ್ರೋಶ ಯಾತ್ರೆ ನಡೆಸುತ್ತಿದ್ದೇವೆ. ಮೊದಲ ಹಂತದ ಜನಾಕ್ರೋಶ ಯಾತ್ರೆ ಐದು ದಿನಗಳ ಕಾಲ ಒಂಭತ್ತು ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಪೂರ್ಣಗೊಂಡಿದೆ. ಜನಾಕ್ರೋಶ ಯಾತ್ರೆಗೆ ನಮ್ಮೆಲ್ಲ ನಾಯಕರೂ ಬಂದಿದ್ದರು. ಆಯಾಯಾ ಭಾಗದ ನಾಯಕರು ಸಹ ಕರಿಸಿದ್ದಾರೆ. ಜನಾಕ್ರೋಶ ಯಾತ್ರೆಯಲ್ಲಿ 115 ಕಿ.ಮೀ ಪ್ರವಾಸ ಮಾಡಿದ್ದೇವೆ ಎಂದು ಹೇಳಿದರು.

ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಮಾತನಾಡಿ, ಹುಬ್ಬಳ್ಳಿ ಎನ್ ಕೌಂಟರ್‌ಗೆ ಸ್ವಾಗತ, ಯಾರೇ ಇಂತಹ ಕೆಟ್ಟ ಕೆಲಸ ಮಾಡಿದ್ರೂ ಕಾನೂನು ರೀತಿಯಲ್ಲಿ ಇದೇ ಶಿಕ್ಷೆ ಆಗಬೇಕು. ಅನ್ನಪೂರ್ಣ ಅವರ ಕಾರ್ಯ ಶ್ಲಾಘನೀಯ ಎಂದರು.

> ಜಾತಿ ಗಣತಿ ವರದಿ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ಅವರ ಹಿಂದೆ ಟೋಪಿ ಹಾಕಿಕೊಂಡು ಯಾಕೆ ಬಿದ್ದಿದ್ದಾರೆ. ಸಮೀಕ್ಷೆ ಮಾಡಿದಾಗ ಒಂದು ಕೋಟಿ ಇದ್ದರು. ಈಗ ಆರು ಕೋಟಿ ಜನ ಇದ್ದಾರೆ. ಒಂದು ಕೋಟಿ ಜನರನ್ನ ಸಮುದ್ರಕ್ಕೆ ಬಿಡಬೇಕಾ ಎಂದು ಪ್ರಶ್ನಿಸಿದರು. ಯತ್ನಾಳಗೆ ಕೊಲೆ ಬೆದರಿಕೆ ಕುರಿತು ಮಾಧ್ಯಮದವರು ಪ್ರಶ್ನೆಗೆ ಉತ್ತರಿಸಿದ ಅವರು, ಯಾರಿಗೇ ಆಗಲಿ ಕೊಲೆ ಬೆದರಿಕೆ ಹಾಕಬಾರದು. ಹಿಂದುತ್ವದ ಪರ ಮಾತಾಡುವ, ಹೋರಾಡುವ ಯಾರಿಗೇ ಆಗಲಿ ಅವರಿಗೆ ನಮ್ಮ ಬೆಂಬಲವಿದೆ. ಯತ್ನಾಳ್ ಕೊಲೆ ಬೆದರಿಕೆಯನ್ನು ನಾವು ಖಂಡಿಸುತ್ತೇವೆ
> - ಬಿ.ವೈ.ವಿಜಯೇಂದ್ರ, ಬಿಜೆಪಿ ಅಧ್ಯಕ್ಷ



### ಸಿದ್ದು ಕೇಂದ್ರದ ವಿರುದ್ಧ ಆರೋಪ

ರಾಜ್ಯ ಸರ್ಕಾರ ಹಣಕಾಸು ಪರಿಸ್ಥಿತಿ ನಿರ್ವಹಣೆಯಲ್ಲಿ ವಿಫಲವಾಗಿದೆ. ಆರ್ಥಿಕ ಪರಿಸ್ಥಿತಿ ನಿಭಾಯಿಸುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಫಲರಾಗಿದ್ದಾರೆ. ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರದ ವಿರುದ್ಧ ಆರೋಪ ಮಾಡುತ್ತಿದ್ದಾರೆ. ರಾಜ್ಯದ ಜನರಿಗೆ ಈ ಸರ್ಕಾರ ಅಭಿವೃದ್ಧಿ ನೀಡುತ್ತಿಲ್ಲ. ಬೆಲೆ ಏರಿಕೆ ಕೊಡುಗೆ ನೀಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಅಕ್ಕಮಹಾದೇವಿ ಜಯಂತಿ: ಶಿವಶರಣೆಯ ಆದರ್ಶಗಳನ್ನು ಪಾಲಿಸಲು ಕರೆ

• ಉದಯವಾಹಿನಿ, ಮಡಿಕೇರಿ


ಉದಯವಾಹಿನಿ ಚಿತ್ರ

ಅಕ್ಕಮಹಾದೇವಿ ಅವರ ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು ಎಂದು ಅಕ್ಕನ ಬಳಗದ ಅಧ್ಯಕ್ಷೆ ವಸುಂಧರಾ ಪ್ರಸನ್ನ ತಿಳಿಸಿದರು. ಇಲ್ಲಿನ ವೀರಶೈವ ಸಮಾಜದ ಅಕ್ಕನ ಬಳಗದ ವತಿಯಿಂದ ಮಹದೇವಪೇಟೆಯ ಬಸವೇಶ್ವರ ದೇವಾಲಯದಲ್ಲಿ ನಡೆದ 12ನೇ ಶತಮಾನದ ಮಹಾಶಿವಶರಣೆ, ಕವಯತ್ರಿ ಅಕ್ಕಮಹಾದೇವಿ ಅವರ ಜಯಂತಿ ಕಾರ್ಯಕ್ರಮವದಲ್ಲಿ ಅವರು ಮಾತನಾಡಿದರು.

ಚಿಕ್ಕವಯಸ್ಸಿನಲ್ಲಿಯೇ ವೈರಾಗ್ಯಮತಿಯಾದ ಮಹಾದೇವಿ ತಮ್ಮಲ್ಲಿನ ಅಗಾಧವಾದ ಜ್ಞಾನದಿಂದಾಗಿ ಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷ ಅಲ್ಲಮಪ್ರಭು ಅವರಿಂದ ಅಕ್ಕಾಮಹಾದೇವಿ ಎಂದು ಕರೆಸಿಕೊಂಡ ಶ್ರೇಷ್ಠ ಶಿವಶರಣೆಯಾಗಿದ್ದಾರೆ. ಇವರ ಆದರ್ಶಗಳನ್ನು ಮಹಿಳೆಯರು ಹಾಗೂ ಮಕ್ಕಳು ಅರಿಯಬೇಕು ಎಂದು ಕಿವಿಮಾತು ಹೇಳಿದರು. ದೇವಾಲಯ ಸಮಿತಿ ಅಧ್ಯಕ್ಷರಾದ ರುದ್ರಪ್ರಸನ್ನ ಮಾತನಾಡಿ, 'ಇಂದಿನ ಆಧುನಿಕ ಕಾಲದ ಹೆಣ್ಣು ಮಕ್ಕಳು ಹಾಗೂ ಮಹಿಳೆಯರಿಗೆ ಅಕ್ಕನ ಆದರ್ಶಗಳು ಸದಾ ಅನುಕರಣೀಯ ಎಂದರು. ಈ ವೇಳೆ ಅಕ್ಕಮಹಾದೇವಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಅಕ್ಕನಬಳಗದ ಕಾರ್ಯದರ್ಶಿ ಬಿ.ಎಸ್.ನಾಗರತ್ನ ಶಿವಕುಮಾರ್, ಪದಾಧಿಕಾರಿ ಗಳಾದ ವಸುಂಧರಾ, ಲೀಲಾ, ರೂಪಾ, ಶೈಲಾ, ದಿವ್ಯಾ, ಮಂಜುಳಾ, ಧನ್ಯಾ, ಕವಿತಾ, ಪ್ರೇಮಾ, ಶೋಭಾ ಕಮಲಾಮಣಿ, ಗೀತಾ ಬಸವರಾಜು, ಸಾಕಮ್ಮ ಪ್ರಭಾಕರ್, ಕವಿತಾ ಹರೀಶ್, ಪ್ರೇಮಾ, ಗೀತಾ ಲೀಲಾ ಉಳ್ಳಾಗಡ್ಡಿ, ಗೀತಾ, ಕಾರ್ಯದರ್ಶಿ ಪ್ರಶಾಂತ್, ಮಣಿ ಮುರುಗೇಶ್ ಭಾಗವಹಿಸಿದ್ದರು. ಅರ್ಚಕ ಪ್ರಕಾಶ್ ಪೂಜಾರಿ ಪೂಜಾ ವಿಧಿ ನಡೆಸಿಕೊಟ್ಟರು. ಈ ವೇಳೆ ಮಹಿಳೆಯರು, ಮಕ್ಕಳಿಂದ ಅಕ್ಕನ ವಚನಗಳ ಗಾಯನ ನಡೆಯಿತು. ಅಕ್ಕಮಹಾದೇವಿ ಜೀವನ ಸಾಧನೆಯ ಕುರಿತಾದ ಪ್ರವಚನವನ್ನು ಆಲಿಸಲಾಯಿತು.

# ಚಾಮರಾಜನಗರದ ಜಮೀನು ವಿಚಾರದಲ್ಲಿ ಆತಂಕ ಬೇಡ

### ಒಂದು ವೇಳೆ ಜಮೀನು ನಮಗೆ ಸೇರಿದ್ದರೂ ಸಹ ಅಲ್ಲಿನ ಜನತೆ ಆತಂಕಪಡುವ ಅಗತ್ಯವಿಲ್ಲ

• ಉದಯವಾಹಿನಿ, ಮೈಸೂರು

ರಾಜಮನೆತನದ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅರಮನೆಯ ನಿವಾಸದಲ್ಲಿ ಸುದ್ದಿಗೋಷ್ಠಿಯುದ್ದೇಶಿಸಿ ಮಾತನಾಡಿದರು. ಚಾಮರಾಜನಗರದ ಜಮೀನು ವಿಚಾರದಲ್ಲಿ ಆ ಭಾಗದ ಜನರು ಆತಂಕಪಡುವ ಅಗತ್ಯವಿಲ್ಲ. 1950ನೇ ಇಸವಿಯ ದಾಖಲೆಗಳ ಆಧಾರದ ಮೇಲೆ ಚಾಮರಾಜನಗರ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದೇನೆ. ತಹಶೀಲ್ದಾರ್, ರಾಜ್ಯ ಸರ್ಕಾರಕ್ಕೂ ಪತ್ರ ಬರೆದಿದ್ದೇನೆ. ಅಂದಿನ ಮಹಾರಾಜರು ಜಮೀನು ಕೊಟ್ಟಿದ್ದರೆ ಕಿತ್ತುಕೊಳ್ಳುವುದಿಲ್ಲ. ಒಂದು ವೇಳೆ ಜಮೀನು ನಮಗೆ ಸೇರಿದ್ದರೂ ಸಹ ಅಲ್ಲಿನ ಜನತೆ ಆತಂಕಪಡುವ ಅಗತ್ಯವಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

**ಜನತೆ ಆತಂಕಪಡುವ ಅಗತ್ಯವಿಲ್ಲ:** ಆ ಜಮೀನನ್ನು ರಾಜ್ಯ ಸರ್ಕಾರ ನಮಗೆ ನೀಡಿದರೂ ಕೂಡ ಅಲ್ಲಿನ ಜನರಿಗೆ ತೊಂದರೆ ಕೊಡುವುದಿಲ್ಲ. ಯಥಾಸ್ಥಿತಿ ಕಾಯ್ದುಕೊಳ್ಳುತ್ತೇವೆ. ಅಲ್ಲಿನ ಜನರನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸುವುದಿಲ್ಲ. ಕಂದಾಯ ಗ್ರಾಮ ಮಾಡುವುದಾಗಿ ಚಾಮರಾಜನಗರ ಜಿಲ್ಲಾಡಳಿತ ಹೇಳಿದ್ದರಿಂದ ನಮ್ಮ ಜಮೀನು ಅಲ್ಲಿರುವ ಕಾರಣ ಚಾಮರಾಜನಗರ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದೇನೆ. ಯಾವುದೇ ವಿಚಾರವಿದ್ದರೂ, ಸಮಸ್ಯೆಗಳಿದ್ದರೂ ಆ ಭಾಗದ ಗ್ರಾಮಸ್ಥರು ನಮ್ಮನ್ನು ನೇರವಾಗಿ ಸಂಪರ್ಕಿಸಲಿ. ಗ್ರಾಮಸ್ಥರ ಬಳಿಯಿರುವ ದಾಖಲೆಗಳ ಬಗ್ಗೆ ನಮಗೆ ಗೊತ್ತಿಲ್ಲ. ಯಾವುದೇ ಕಾರಣಕ್ಕೂ ಆ ಭಾಗದ ಗ್ರಾಮಸ್ಥರು ಆತಂಕ ಪಡುವ ಅಗತ್ಯ ಇಲ್ಲ ಎಂದು ಪುನರುಚ್ಚರಿಸಿದ್ದಾರೆ. ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಜಿಲ್ಲೆಯ 5 ಸಾವಿರ ಎಕರೆ ಜಾಗದ ತಮಗೆ ಸೇರಬೇಕಿದೆ. 7-8 ಗ್ರಾಮಗಳಲ್ಲಿನಮ್ಮ ಜಮೀನುಗಳ ಮೇಲೆ ಹಕ್ಕುಗಳಿವೆ ಎಂದು ತಧಿಮಗೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪತ್ರ ಬರೆದಿದ್ದಾರೆ. ಆದರೆ, ಪತ್ರದೊಂದಿಗೆ ಯಾವುದೇ ಸೂಕ್ತ ದಾಖಲೆಗಳನ್ನು ನೀಡಿಲ್ಲ. ಪತ್ರವನ್ನು ಎಸಿ ತಹಶೀಲ್ದಾರ್‌ಗೆ ಪರಿಶೀಲಿಸುವಂತೆ ತಿಳಿಸಿದ್ದೇನೆ. ಪರಿಶೀಲಿಸಿದ ನಂತರ ಎಲ್ಲಾ ಮಾಹಿತಿ ದೊರೆಯಲಿದೆ. ಸದ್ಯಕ್ಕೆ ನಮ್ಮ ಬಳಿ ರಾಜಮನೆತನಕ್ಕೆ ಸೇರಿದ ಆಸ್ತಿಗೆ ಸಂಬಂಧಿಸಿದ ಯಾವುದೇ ದಾಖಲೆಗಳಿಲ್ಲ. ಆದ್ದರಿಂದ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.



**ಸದ್ಯಕ್ಕೆ ನಮ್ಮ ಬಳಿ ರಾಜಮನೆತನಕ್ಕೆ ಸೇರಿದ ಆಸ್ತಿಯ ದಾಖಲೆಗಳಿಲ್ಲ**

**ಸದ್ಯಕ್ಕೆ ನಮ್ಮ ಬಳಿ ರಾಜಮನೆತನಕ್ಕೆ ಸೇರಿದ ಆಸ್ತಿಯ ಯಾವುದೇ ದಾಖಲೆಗಳಿಲ್ಲ. ಹಾಗಾಗಿ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲಎಂದು ಚಾಮರಾಜನಗರ ಡಿಸಿ ಶಿಲ್ಪನಾಗ್ ತಿಳಿಸಿದ್ದಾರೆ.**

**ರಾತ್ರಿ ವೇಳೆ ಏಕೆ ಅವಕಾಶ ಕೊಡಬೇಕು**

**ಬಂಡೀಪುರದಲ್ಲಿ ರಾತ್ರಿಯ ವೇಳೆ ವಾಹನಗಳ ಸಂಚಾರ ನಿಷೇಧ ಮುಂದುವರೆಯಬೇಕು. ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ರಾತ್ರಿ ವೇಳೆ ವಾಹನಗಳ ಸಂಚಾರ ನಿಷೇಧವಿದ್ದು, ಯಾವುದೇ ಕಾರಣಕ್ಕೂ ತೆರವಾಗಬಾರದು. ಈಗಾಗಲೇ ರಾತ್ರಿ ಒಂಬತ್ತು ಗಂಟೆಯವರೆಗೂ ವಾಹನಗಳ ಸಂಚಾರಕ್ಕೆ ಅವಕಾಶವಿದೆ. ಬೆಳಿಗ್ಗೆಯಿಂದ ರಾತ್ರಿ 9 ಗಂಟೆಯವರೆಗೂ ಅವಕಾಶವಿದ್ದ ಮೇಲೆ ರಾತ್ರಿ ವೇಳೆ ಏಕೆ ಅವಕಾಶ ಕೊಡಬೇಕು. ರಾತ್ರಿ ಒಂಬತ್ತುಗಂಟೆ ಆದ ಮೇಲೆ ಯಾರು ಓಡಾಡುವುದಿಲ್ಲ. ರಾತ್ರಿ ವೇಳೆ ವಾಹನಗಳ ಸಂಚಾರಕ್ಕೆ ಅವಕಾಶ ನೀಡಿದರೆ ಅರಣ್ಯ ಮತ್ತು ಪ್ರಾಣಿ ಸಂಕುಲಕ್ಕೆ ತೊಂದರೆಯಾಗುತ್ತದೆ. ಹಾಗಾಗಿ ಬಂಡೀಪುರ ಅರಣ್ಯದಲ್ಲಿ ರಾತ್ರಿ ವೇಳೆ ಸಂಚಾರ ನಿಷೇಧ ತೆರವು ಮಾಡಬಾರದು. ಈಗ ಇರುವ ನಿಷೇಧ ಮುಂದುವರೆಯಬೇಕು**

**-ಪ್ರಮೋದಾದೇವಿ ಒಡೆಯರ್, ರಾಜವಂಶಸ್ಥೆ**

## ಮಿನಿ ನ್ಯೂಸ್

## ಕಾಡುಪ್ರಾಣಿಗಳನ್ನು ಬೇಟೆಯಾಡುತ್ತಿದ್ದ 18 ಆರೋಪಿಗಳು ವಶಕ್ಕೆ

• ಉದಯವಾಹಿನಿ, ಶಿರಾ

ಬುಕ್ಕಾಪಟ್ಟಣ ವಲಯದ ಚಿಂಕಾರ ವನ್ಯಜೀವಿಧಾಮದಲ್ಲಿ ಕಾಡು ಪ್ರಾಣಿಗಳನ್ನು ಬೇಟೆಯಾಡುತ್ತಿದ್ದ 18 ಮಂದಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ವಶಕ್ಕೆ ತೆಗೆದುಕೊಂಡಿದ್ದಾರೆ. ಮಧುಗಿರಿ ತಾಲ್ಲೂಕಿನ ತಿಪ್ಪನಹಳ್ಳಿ, ಬಡವನಹಳ್ಳಿ, ಶಿರಾ ತಾಲ್ಲೂಕಿನ ಕಲ್ಲಪಾಳ್ಯ, ತುಮಕೂರು ತಾಲ್ಲೂಕಿನ ಕೆಂಚಯ್ಯನಪಾಳ್ಯ ಗ್ರಾಮಕ್ಕೆ ಸೇರಿದ 18 ಮಂದಿ ಬೇಟೆಯಾಡಲು ತಂದಿದ್ದ ವಾಹನ, ಬಲೆ, ಮರದ ದೊಣ್ಣೆ, ಭರ್ಜಿಗಳನ್ನು ಅಧಿಕಾರಿಗಳು ವಶಕ್ಕೆ ತೆಗೆದುಕೊಂಡಿದ್ದಾರೆ. ಕೆಲವು ದಿನಗಳಿಂದ ಬೇಟೆಗಾರರ ಚಟುವಟಿಕೆ ಹೆಚ್ಚಾಗಿತ್ತು. ಇದರ ಮಾಹಿತಿ ಪಡೆದಿದ್ದ ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದರು. ವಲಯ ಅರಣ್ಯಾಧಿಕಾರಿ ಚಂದನ್ ಕುಮಾರ್ ಮಾರ್ಗ ದರ್ಶನದಲ್ಲಿ ಉಪ ವಲಯಾಧಿಕಾರಿ ಕಿರಣ್ ನೇತೃತ್ವದ ತಂಡದಲ್ಲಿ ರೇವ ಣಸಿದ್ದಪ್ಪ ಕಾಳಗಿ, ಪರಶುರಾಮ, ನವೀನ್ ಕುಮಾರ್, ಪುಟ್ಟಸ್ವಾಮಿ, ಗುರುವಯ್ಯ, ನಾಗರಾಜ್ ಭಾಗವಹಿಸಿದ್ದರು.

## ಅಪಮಾನ ನುಂಗಿ ಸಮಾನತೆ ಸಾರಿದ ನಾಯಕ ಅಂಬೇಡ್ಕರ್

• ಉದಯವಾಹಿನಿ, ಕನಕಪುರ


ಉದಯವಾಹಿನಿ ಚಿತ್ರ

ಸಮಾಜದಲ್ಲಿ ಅಸಮಾನತೆ ಹೋಗಲಾಡಿಸಿ ಸಮಾನತೆ ನೆಲೆಗೊಳಿಸಲು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾರತ ದೇಶಕ್ಕೆ ಒಪ್ಪುವಂತಹ ಸಂವಿಧಾನವನ್ನು ಕೊಟ್ಟಿದ್ದಾರೆ. ಅವರು ಒಬ್ಬ ಮಹಾನ್ ಮಾನವತವಾದಿ ಎಂದು ವಿಧಾನ ಪರಿಷತ್ ಸದಸ್ಯ ಎಸ್.ರವಿ ಹೇಳಿದರು.

ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿಯಿಂದ ಅಂಬೇಡ್ಕರ್ ಭವನದಲ್ಲಿ ಸೋಮವಾರ ನಡೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ 134 ನೇ ಜಯಂತಿ ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಇದೀಗ ಅನ್ಯಾಯ ನಡೆದರೆ ಹೋರಾಟ ಮಾಡಿ ನ್ಯಾಯ ಪಡೆಯಲು ಸಂವಿಧಾನ ಮತ್ತು ಕಾನೂನು ಇದೆ. ಆದರೆ ಅಂಬೇಡ್ಕರ್ ಹೋರಾಟ ಆರಂಭಿಸಿದ ಕಾಲದಲ್ಲಿ ಯಾವುದೇ ಬೆಂಬಲ ಇರಲಿಲ್ಲ. ಸಮ ಸಮಾಜ ನಿರ್ಮಾಣಕ್ಕೆ ಅವಮಾನ ನುಂಗಿ ದಿಟ್ಟ ನಿರ್ಧಾರದೊಂದಿಗೆ ಹೋರಾಟ ಮಾಡಿದರು ಎಂದು ಸ್ಮರಿಸಿದರು.

ಸೆನೆಟ್ ಮಾಜಿ ಸದಸ್ಯ ಡಿ.ಶಿವಣ್ಣ ವಿಶೇಷ ಉಪನ್ಯಾಸ ನೀಡಿ, ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮಾತ್ರ ಮೀಸಲಾತಿ ಕಲ್ಪಿಸಿಲ್ಲ. ಒಂದೂ ಸಮುದಾಯಕ್ಕೆ ಸಿಮೀತವಲ್ಲ. ದೇಶದಲ್ಲಿನ ಎಲ್ಲಾ ಜಾತಿ, ಧರ್ಮದ ಜನರಿಗೂ ಸಮಾನ ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದರು. ಅಂಬೇಡ್ಕರ್ ಎಂದರೆ ಪರಿಶಿಷ್ಟ ಜಾತಿ, ಪಂಗಡದ ಪರ ಎನ್ನುವ ತಪ್ಪು ಭಾವನೆ ಇದೆ. ಇದು ತೊಲಗಬೇಕು. ಬುದ್ಧ, ಕಬೀರ, ಜ್ಯೋತಿ ಬಾ ಫುಲೆ ಅವರನ್ನು ಅಂಬೇಡ್ಕರ್ ಗುರುವೆಂದು ಸ್ವೀಕರಿಸಿದ್ದರು. ಬಾಬಾ ಸಾಹೇಬ್ ಜಾತಿವಾದಿಯಾಗಿದ್ದರೆ, ಇವರನ್ನು ಗುರುಗಳಾಗಿ ಸ್ವೀಕರಿಸುತ್ತಿರಲಿಲ್ಲ ಎಂದರು.

ತಹಶೀಲ್ದಾರ್ ಮಂಜುನಾಥ್, ಅಂಬೇಡ್ಕರ್ ರವರು ಕೊಟ್ಟಿರುವಂತಹ ಸಂವಿಧಾನದ ಅಡಿಯಲ್ಲಿ ಎಲ್ಲರೂ ಬದುಕನ್ನು ಕಟ್ಟಿಕೊಳ್ಳುವ ಮೂಲಕ ಉತ್ತಮ ಜೀವನ ರೂಪಿಸಿಕೊಳ್ಳೋಣ. ಅಂಬೇಡ್ಕರ್ ಅವರ ಕನಸು ನನಸಾಗಿಸೋಣ ಎಂದು ತಿಳಿಸಿದರು.

ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು, ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನ ಅಂಬೇಡ್ಕರ್ ಅವರ ಭಾವಚಿತ್ರವನ್ನು ನಗರದಲ್ಲಿ ಮೆರವಣಿಗೆ ಮಾಡಲಾಯಿತು.

**ಅಂಬೇಡ್ಕರ್ ಅವರ ಜೀವನ ನಮ್ಮೆಲ್ಲರಿಗೂ ಆದರ್ಶ. ಮಹಾತ್ಮ ಗಾಂಧಿ, ನೇತಾಜಿ ಸುಭಾಷ್ ಚಂದ್ರ ಬೋಸ್, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸಮಾಜ ಎಂದಿಗೂ ಮರೆಯುವುದಿಲ್ಲ. ಅಂಬೇಡ್ಕರ್ ಅವರ ಹೋರಾಟ, ದೇಶಕ್ಕೆ ಕೊಟ್ಟ ಕೊಡುಗೆ ಸಾವಿರ ವರ್ಷಗಳು ಅಜರಾಮರವಾಗಿರುತ್ತದೆ ಎಂದರು.**

## ವಿಶು ಆಚರಣೆ ಸಂಭ್ರಮ; ಭರ್ಜರಿ ಭೋಜನ

• ಉದಯವಾಹಿನಿ, ಸುಂಟಿಕೊಪ್ಪ


ಉದಯವಾಹಿನಿ ಚಿತ್ರ

ಸೌರಮಾನ ಯುಗಾದಿ ಸಂದರ್ಭದಲ್ಲಿ ಹೊಸ ವರ್ಷವನ್ನು ಸ್ವಾಗತಿಸುವ ಹಬ್ಬವನ್ನು ಮಲಯಾಳಿ ಭಾಷಿಗರು ವಿಶು ಎಂಬುದಾಗಿ ಆಚರಿಸಿಕೊಂಡರೆ, ತುಳು ಭಾಷಿಗರು ಬಿಸು ಪರ್ಬ ಎಂಬುದಾಗಿ ಸೋಮವಾರ ಸಡಗರ, ಸಂಭ್ರಮದಿಂದ ಆಚರಿಸಿಕೊಂಡರು. ಇಲ್ಲಿನ ಮಲಯಾಳಿ ಭಾಷಿಗರು ಅಕ್ಕಪಕ್ಕದ ದೇವಾಲಯಗಳಿಗೆ ಕುಟುಂಬ ಸಮೇತರಾಗಿ ಶುಭ್ರವಾದ ಹೊಸ ವಸ್ತ್ರಧರಿಸಿ ದೇವರಿಗೆ ಪೂಜೆ ಸಲ್ಲಿಸಿದರು. ಸುಂಟಿಕೊಪ್ಪದಲ್ಲಿ ನೆಲೆಸಿರುವ ಕೇರಳಿಗರು ತಮ್ಮ ಮನೆಗಳಲ್ಲಿ ಕಣಿ ಇಟ್ಟು ಶ್ರದ್ದೆಯಿಂದ, ಸಡಗರದಿಂದ ಪೂಜೆ ಸಲ್ಲಿಸುವುದರ ಮೂಲಕ ಹಬ್ಬವನ್ನು ಆಚರಿಸಿಕೊಂಡರು.

ಹಬ್ಬದ ಅಂಗವಾಗಿ ಮನೆಗೆ ಬಂದ ಸ್ನೇಹಿತರು, ಬಂಧು- ಬಳಗದವರಿಗೆ, ಅತಿಥಿಗಳಿಗೆ ಅನ್ನ, ಸಾಂಬರು, ಪಚ್ಚಡಿ, ಕಿಚ್ಚಡಿ, ಕಾಳನ್, ಅವೆಲ್, ಉಣ್ಣಿಯಪ್ಪ, ಓಲನ್, ಪಾಯಸ, ತುಪ್ಪ, ಚಿಪ್ಸ್ ಸೇರಿದಂತೆ ಹತ್ತು ಹಲವು ತಿಂಡಿ ತಿನಿಸುಗಳನ್ನು ಮಾಡಿ ಉಣ ಬಡಿಸಿ ಸಂಭ್ರಮಿಸಿದರು.ಕೇರಳಿಗರು, ತುಳು ಭಾಷಿಗರು ಹೊಸ ಬಟ್ಟೆ ಧರಿಸಿದರಲ್ಲದೇ ಮನೆಗಳನ್ನು ಸ್ವಚ್ಛಗೊಳಿಸಿ ರಂಗೋಲಿ ಹಾಕಿ ದೀಪ ಹಚ್ಚಿ ಬಂದವರನ್ನು ಸ್ವಾಗತಿಸಿದರು.

ಈಗಾಗಲೇ ಶಾಲಾ ಕಾಲೇಜುಗಳಿಗೆ ಬೇಸಿಗೆ ರಜೆ ಸಿಕ್ಕಿದರಿಂದ ಕೇರಳ, ದಕ್ಷಿಣ ಕನ್ನಡ ಜಿಲ್ಲೆಯ ನೆಂಟರಿಷ್ಟರು, ಸ್ನೇಹಿತರು ಬಂದು ಹಬ್ಬದ ಜೊತೆಗೆ ಪ್ರವಾಸ ಮಾಡಿದ್ದು ಕಂಡುಬಂತು.

**ಸುಖ, ಸಮೃದ್ಧಿ ದೊರಕಲಿ**

**ಸೋಮವಾರ ಮುಂಜಾನೆ ಬೇಗನೆ ಎದ್ದು ವಿಶು ಕಣಿಯನ್ನಿಟ್ಟು ಅದರಲ್ಲಿ ವಿವಿಧ ತರಹದ ತರಕಾರಿಗಳು, ತೆಂಗಿನಕಾಯಿ, ಅಕ್ಕಿ, ಹಣ್ಣುಗಳು, ವಿವಿಧ ರೀತಿಯ ತಿಂಡಿ- ತಿನಿಸುಗಳನ್ನು, ಹಣ, ಆಭರಣ ಸೇರಿದಂತೆ ಬೇರೆ ಬೇರೆ ದಿನನಿತ್ಯ ಬಳಕೆಯ ವಸ್ತುಗಳನ್ನು ಇಟ್ಟು ಪೂಜೆ ಸಲ್ಲಿಸಿ ದೇವರಲ್ಲಿ ಸುಖ, ಸಮೃದ್ಧಿ ದೊರಕಲಿ ಎಂದು ಪ್ರಾರ್ಥಿಸಿದರು.**

## ವೈಕೋ ಉರುಸ್‌ನಲ್ಲಿ ಶಾಸಕ ಪೊನ್ನಣ್ಣ

• ಉದಯವಾಹಿನಿ, ನಾಪೋಕ್ಲು

ಉರುಸ್ ಧಾರ್ಮಿಕ ಹಾಗೂ ಪಾರಂಪರಿಕವಾಗಿ ಆಚರಿಸಿಕೊಂಡು ಬಂದಿರುವ ಆಚರಣೆಯಾಗಿದ್ದು, ಈ ಭಾಗದಲ್ಲಿ ಅತ್ಯಂತ ಶ್ರದ್ಧಾಭಕ್ತಿಯಿಂದ ನಡೆಯುತ್ತಾ ಬಂದಿದೆ. ಸೋಮವಾರ ಈ ಸಮಾರಂಭದಲ್ಲಿ ಭಾಗವಹಿಸುವ ಅವಕಾಶ ದೊರಕಿದ್ದು ಅತೀವ ಸಂತಸವನ್ನು ಉಂಟು ಮಾಡಿದೆ ಎಂದು ಶಾಸಕ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಹೇಳಿದರು. ಮಡಿಕೇರಿ ತಾಲ್ಲೂಕು ನಾಪೋಕ್ಲು ಹೋಬಳಿಯ ಕಕ್ಕಬ್ಬೆಯಲ್ಲಿ ನಡೆದ ವೈಕೋ ಉರುಸ್ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಉರುಸ್ ಆಚರಣೆಯ ಸದುದ್ದೇಶದ ಸಂದೇಶ ನಾಡಿನ ಎಲ್ಲೆಡೆ ಪಸರಿಸುವಂತಾಗಲಿ ಎಂದು ಶಾಸಕರು ಶುಭಹಾರೈಸಿದರು. ಸಂಪನ್ ಅಯ್ಯಪ್ಪ, ಬಾಚಮಂಡ ಲವ ಚಿಣ್ಣಪ್ಪ, ಅಹಮದ್ ಹಾಜಿ, ವಿ.ಎ.ಉಸ್ಮಾನ್, ವಿ.ಎಂ.ಉಸ್ಮಾನ್, ಮೊಯಿದು ಉಪಸ್ಥಿತರಿದ್ದರು.

## ಶಾಸಕ ನರೇಂದ್ರಸ್ವಾಮಿ ಸಚಿವ ರಾಗಲಿ

• ಉದಯವಾಹಿನಿ, ಮಂಡ್ಯ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು, ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರು, ಮಾಜಿ ಸಚಿವರಾದ ಪಿ.ಎಂ.ನರೇಂದ್ರಸ್ವಾಮಿ ಅವರ ಹುಟ್ಟು ಹಬ್ಬದ ಅಂಗವಾಗಿ ಮಂಡ್ಯ ಜಿಲ್ಲಾ ಆಸ್ಪತ್ರೆಯ ಹೆರಿಗೆ ವಾರ್ಡ್ ಆವರಣದಲ್ಲಿರುವ ಪರಿಸರ ಸಂಸ್ಥೆಯ ಮಮತೆಯ ಮಡಿಲು ನಿತ್ಯ ಅನ್ನದಾಸೋಹ ಕೇಂದ್ರದಲ್ಲಿ ರೋಗಿಗಳು, ಅವರ ಸಂಬಂಧಿಕರಿಗೆ ಉಪಹಾರ, ಊಟ ವಿತರಣೆ ಮಾಡುವ ಮೂಲಕ ಕಾಂಗ್ರೆಸ್ ಕಾರ್ಯಕರ್ತರು ಅವರ ಹುಟ್ಟುಹಬ್ಬ ಆಚರಿಸಿದರು. ನಂತರ ಮಾತನಾಡಿದ ಡಿಸಿಸಿ ಬ್ಯಾಂಕ್ ನಿರ್ದೇಶಕ ಹೆಚ್. ಅಶೋಕ್ ಮಳವಳ್ಳಿ ವರಪುತ್ರ ಪಿ.ಎಂ.ನರೇಂದ್ರಸ್ವಾಮಿ ಅವರಿಗೆ ಮುಂದಿನ ದಿನಗಳಲ್ಲಿ ಮಂತ್ರಿ ಸ್ಥಾನ ಲಭಿಸಲಿ ಎಂದು ಶುಭ ಕೋರಿದರು.

ಮಾಜಿ ಸಚಿವರಾಗಿ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾಗಿ ಕೆಲಸ ಮಾಡುತ್ತಿರುವ ಅವರಿಗೆ ಮುಂದಿನ ದಿನಗಳಲ್ಲಿ ಉನ್ನತವಾಗಿ ಹೆಚ್ಚಿನ ಕೆಲಸ ಮಾಡಲು ಮಂತ್ರಿ ಆಗಲಿ ಎಂದು ಅವರ ಹುಟ್ಟುಹಬ್ಬಕ್ಕೆ ಶುಭ ಹಾರೈಸಿದರು. ಜಿಲ್ಲಾ ಪರಿಶಿಷ್ಟ ಜಾತಿ ಕಾಂಗ್ರೆಸ್ ಅಧ್ಯಕ್ಷ, ನಗರಸಭಾ ಸದಸ್ಯ ಎಂ.ಎನ್.ಶ್ರೀಧರ್ ಮಾತನಾಡಿ ಒಂದು ಬಾರಿ ಮಂತ್ರಿಯಾಗಿ ಕೆಲಸ ಮಾಡಿರುವ ಪಿ.ಎಂ.ನರೇಂದ್ರಸ್ವಾಮಿ ಅವರಿಗೆ ಮುಂದಿನ ದಿನಗಳಲ್ಲಿ ರಾಜ್ಯದ ಮಂತ್ರಿಯಾಗುವ ಅವಕಾಶ ಸಿಗಲಿ, ದೇವರು ಅವರಿಗೆ ಆಯಸ್ಸು, ಆರೋಗ್ಯ, ಉನ್ನತ ಸ್ಥಾನಮಾನದ ಯಶಸ್ಸು ಲಭಿಸಲಿ ಎಂದು ಶುಭ ಕೋರಿದರು.

## ಕೊಡವ ಕೌಟುಂಬಿಕ ಕ್ರಿಕೆಟ್ ಟೂರ್ನಿ

• ಉದಯವಾಹಿನಿ, ಗೋಣಿಕೊಪ್ಪಲು

ಚೋಟ್ಟಂಗಡ ತಂಡ ಕೋದಂಡ ತಂಡದ ಎದುರು 78 ರನ್‌ಗಳ ಭಾರಿ ಅಂತರದಿಂದ ಜಯಗಳಿಸಿತು. ಹುದಿಕೇರಿ ಜನತಾ ಪ್ರೌಢಶಾಲಾ ಮೈದಾನದಲ್ಲಿ ನಡೆಯುತ್ತಿರುವ ಚೆಕ್ಕೆರಾ ಕಪ್ ಕೊಡವ ಕೌಟುಂಬಿಕ ಕ್ರಿಕೆಟ್ ಟೂರ್ನಿಯ ಭಾನುವಾರದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ ಚೋಟ್ಟಂಗಡ ತಂಡ ನಿಗದಿತ 8 ಓವರ್‌ಗಳಲ್ಲಿ ಯಾವುದೇ ವಿಕೆಟ್ ಕಳೆದುಕೊಳ್ಳದೆ 126 ರನ್‌ಗಳ ಬೃಹತ್ ಮೊತ್ತ ಗಳಿಸಿತು. ಬಳಿಕ ಬ್ಯಾಟಿಂಗ್ ನಡೆಸಿದ ಕೋದಂಡ ತಂಡ 8 ವಿಕೆಟ್‌ಗಳ ನಷ್ಟಕ್ಕೆ ಕೇವಲ 48 ರನ್ ಗಳಿಸಿ ನಿರಾಸೆ ಅನುಭವಿಸಿತು.

2ನೇ ಪಂದ್ಯದಲ್ಲಿ ಇಟ್ಟರ ತಂಡ ಕೊಕ್ಕೆಂಗಡ ತಂಡದ ಎದುರು 7 ವಿಕೆಟ್‌ಗಳಿಂದ ಜಯ ಗಳಿಸಿತು. ಇಟ್ಟರ ತಂಡ ಕೊಕ್ಕೆಂಗಡ ತಂಡಕ್ಕೆ 87 ರನ್ ಗುರಿ ನೀಡಿತು. ಗುರಿ ಬೆನ್ನತ್ತಿದ ಇಟ್ಟರ ತಂಡ 3 ವಿಕೆಟ್ ಕಳೆದುಕೊಂಡು 88 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಕುಂದ್ರಂಡ ತಂಡ ನಾಗಂಡ ತಂಡ 7 ವಿಕೆಟ್‌ಗಳಿಂದ ಮಣಿಸಿತು. ಬೋಳಂದಂಡ ತಂಡ ಐಚೋಡಿಯಂಡ ತಂಡವನ್ನು ಏಳು ವಿಕೆಟ್‌ಗಳಿಂದ ಸೋಲಿಸಿ ಮುಂದಿನ ಸುತ್ತಿಗೆ ಪ್ರವೇಶ ಪಡೆಯಿತು.

ಮಂಡಂಗಡ ತಂಡ ಬಾಚಮಾಡ ತಂಡವನ್ನು 120 ರನ್‌ಗಳ ಭಾರಿ ಅಂತರದಿಂದ ಸೋಲಿಸಿತು. ಮೊದಲು ಬ್ಯಾಟಿಂಗ್ ನಡೆಸಿದ ಮಂಡಂಗಡ ತಂಡ ನಿಗದಿತ 8 ಓವರ್‌ಗಳಲ್ಲಿ 172 ರನ್ ಗಳಿಸಿತು. ಬಳಿಕ ಗೆಲುವಿನ ಗುರಿ ಬೆನ್ನತ್ತಿದ ಬಾಚಮಾಡ ತಂಡ ಕೇವಲ 48 ರನ್ ಗಳಿಸಲು ಶಕ್ತವಾಯಿತು.

ಸೋಮವಾರ ಶಾಲೆಯ ಮೈದಾನದಲ್ಲಿ ಗ್ರಾಮದ ದೇವತೆಯ ಉತ್ಸವ ನಡೆಯುವುದರಿಂದ ಯಾವುದೇ ಕ್ರಿಕೆಟ್ ಪಂದ್ಯ ನಡೆಯುವುದಿಲ್ಲ ಎಂದು ಆಯೋಜಕರು ತಿಳಿಸಿದ್ದಾರೆ.

## ರೈತರ ಹೋರಾಟ ಭ್ರಷ್ಟರಿಗೆ ಎಚ್ಚರಿಕೆ ಗಂಟೆಯಾಗಲಿ

• ಉದಯವಾಹಿನಿ, ಭಾರತೀನಗರ


ಉದಯವಾಹಿನಿ ಚಿತ್ರ

ರೈತರ ಹೋರಾಟಗಳು ಭ್ರಷ್ಟರಿಗೆ ಎಚ್ಚರಿಕೆ ಗಂಟೆಯಾಗಬೇಕು. ಈ ನಿಟ್ಟಿನಲ್ಲಿ ರೈತ ಮುಖಂಡರು ಪ್ರತಿಭಟನೆಗಳನ್ನು ರೂಪಿಸಬೇಕು ರಾಜ್ಯ ರೈತ ಸಂಘದ ಹಸಿರು ಸೇನೆ ಏಕೀಕರಣ ಸಮಿತಿಯ ರಾಜ್ಯಾಧ್ಯಕ್ಷ ಪಚ್ಚೆ ನಂಜುಸ್ವಾಮಿ ಹೇಳಿದರು.

ಶರಣರ ಸಂಘಟನೆ ವೇದಿಕೆ, ವೀರಶೈವ ಕ್ಷೇಮಾಭಿವೃದ್ಧಿ ಸಂಘಗಳ ಸಹಯೋಗದಲ್ಲಿ ಶಿವಕುಮಾರ ಸ್ವಾಮೀಜಿಗಳ ಜನ್ಮದಿನೋತ್ಸವದ ಅಂಗವಾಗಿ ಇಲ್ಲಿಯ ವೀರಶೈವ ಸಮುದಾಯ ಭವನದಲ್ಲಿ ನಡೆದ ಜನ ಮೆಚ್ಚಿದ ವೈದ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.ಇತ್ತೀಚಿನ ದಿನಗಳಲ್ಲಿ ಭ್ರಷ್ಟಾಚಾರ ಮಿತಿ ಮೀರಿದ್ದು, ಸರ್ಕಾರಗಳು ರಾಜಕೀಯ ಲೆಕ್ಕಾಚಾರ, ಟೀಕೆಗಳಲ್ಲಿ ಮುಳುಗಿ ಹೋಗಿದ್ದಾರೆ. ಸ್ವಯಂ ರೈತರೆ ಹೆಚ್ಚು ಶೋಷಣೆಗೊಳಗಾಗುತ್ತಿದ್ದು, ರೈತ ಸಂಘಟನೆ ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕು.

ಆ ಮೂಲಕ ಭ್ರಷ್ಟಾಚಾರ ಸಂಪೂರ್ಣ ನಿರ್ಮೂಲನೆಯಾಗಬೇಕು ಎಂದು ಹೇಳಿದರು. ವೈದ್ಯನಾಥಪುರ ಮಠದ ಕದಂಬ ಜಂಗಮ ಮಠದ ರೇಣುಕಾ ಶಿವಾಚಾರ್ಯ ಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಿ ಮಾತನಾಡಿದರು. ಮದ್ದೂರು ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ವೆಂಕಟೇಗೌಡ ಡಾ.ಶಿವಕುಮಾರ್, ಡಾ.ಪ್ರಕಾಶ್, ನೆಲ್ಲೂರು ಡಾ.ಶ್ರೀನಿವಾಸ್, ಡಾ.ಸಂಧ್ಯಾಶ್ರೀ, ಡಾ. ಅರ್ಜುನ್‌ಕುಮಾರ್, ಡಾ.ದಯಾನಂದ ಅವರಿಗೆ ಜನ ಮೆಚ್ಚಿದ ವೈದ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಧಕರಾದ ಡಿ.ಪ್ರಕಾಶ್, ಶುಶ್ರೂಷಕಿಯರಾದ ವಸಂತ, ಫಾತಿಮಾ, ಯಲ್ಲಮ್ಮ, ಶಿವಕುಮಾರಮಹಾಸ್ವಾಮಿ, ಬಿ.ಪ್ರವೀಣ್‌ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಶರಣರ ಸಂಘಟನೆ ವೇದಿಕೆಯ ಜಿಲ್ಲಾ ಗೌರವಾಧ್ಯಕ್ಷ ಬಬ್ರುವಾಹನ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶರಣರ ಸಂಘಟನೆ ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ಕಾಡುಕೊತ್ತನಹಳ್ಳಿ ನಂದೀಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವೀರಶೈವ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜಿ.ಆರ್.ಶಿವಣ್ಣ, ಮಹೇಂದ್ರ, ಜಗಜ್ಯೋತಿ ಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಚ್ .ಬಿ.ಸ್ವಾಮಿ, ರಘು, ಎಚ್.ಎಸ್. ಮಹದೇವಮ್ಮ, ಕಲ್ಪನಾಮಾದಪ್ಪ, ಕೆ.ರಾಜು, ಕವಿತ ವೈಬಿಶ್ರೀ, ಸೌಮ್ಯ ಉಪಸ್ಥಿತರಿದ್ದರು.

## ಮೀಸಲಾತಿ ಪಡೆಯುತ್ತಿರುವವರೇ ವಿರೋಧ ಸರಿಯಲ್ಲ

• ಉದಯವಾಹಿನಿ, ಪಾಂಡವಪುರ


ಉದಯವಾಹಿನಿ ಚಿತ್ರ


ಮೀಸಲಾತಿ ಪಡೆಯುತ್ತಿರುವವರೇ ಅದರ ವಿರುದ್ಧ ಮಾತನಾಡುತ್ತಿರುವುದು ಬೇಸರದ ಸಂಗತಿ ಎಂದು ಚಿಂತಕ ಮಹೇಶ್ ಮುದ್ದೇನಹಟ್ಟಿ ಹೇಳಿದರು. ಪಟ್ಟಣದಲ್ಲಿ ತಾಲ್ಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆಯಿಂದ ಸೋಮವಾರ ಆಯೋಜಿಸಿದ್ದ ಅಂಬೇಡ್ಕರ್ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪರಿಶಿಷ್ಟರು, ಕುರುಬರು, ವಿಶ್ವಕರ್ಮರು, ಗಾಣಿಗರು, ಮಡಿವಾಳರು, ಒಕ್ಕಲಿಗರು, ಲಿಂಗಾಯತರು ಸೇರಿದಂತೆ ಎಲ್ಲಾ ಹಿಂದುಳಿದ ವರ್ಗಗಳು ಮೀಸಲಾತಿಯನ್ನು ಪಡೆಯುತ್ತಿವೆ. ಶೇ 3ರಿಂದ 5ರಷ್ಟಿರುವ ಬ್ರಾಹ್ಮಣರು, ಜೈನರೂ ಶೇ10ರಷ್ಟು ಮೀಸಲಾತಿಯನ್ನು ಪಡೆಯುತ್ತಿದ್ದಾರೆ. ಒಟ್ಟಿನಲ್ಲಿ ಸಮಾಜದ ಎಲ್ಲಾ ಜನವರ್ಗಗಳು ಕೂಡ ಮೀಸಲಾತಿಯನ್ನು ಪಡೆಯುತ್ತಿದ್ದರೂ ಪರಿಶಿಷ್ಟರ ಮೇಲೆ ಅಸಮಾಧಾನ ವ್ಯಕ್ತಪಡಿಸುತ್ತಿರುವುದು ದುರಂತದ ಸಂಗತಿ ಎಂದರು. ಮೈಸೂರಿನ ಒಡೆಯರ್ ಅವರ ಆಸ್ಥಾನದಲ್ಲಿ ತಮಿಳುನಾಡಿನ ಬ್ರಾಹ್ಮಣರು ದಿವಾನರಾಗಿದ್ದ ವೇಳೆ ಮೈಸೂರು ರಾಜ್ಯದ ಬ್ರಾಹ್ಮಣರು ತಮಗೆ ದಿವಾನ ಹುದ್ದೆ ನೀಡಬೇಕು ಎಂದು ಒತ್ತಾಯಿಸಿದ್ದರು. ಇದರಿಂದಾಗಿಯೇ ವಿಶ್ವೇಶ್ವರಯ್ಯನವರು ದಿವಾನರಾಗಿ ಅಧಿಕಾರ ಅನುಭವಿಸುವಂತಾಯಿತು. ಮೀಸಲಾತಿಗಾಗಿ ಮೊದಲು ಹೋರಾಟ ನಡೆಸಿದವರೇ ಬ್ರಾಹ್ಮಣರು ಎಂದು ವಿವರಿಸಿದರು. ತಹಶೀಲ್ದಾರ್ ಎಸ್.ಸಂತೋಷ್ ಮಾತನಾಡಿ, ಪ್ರತಿಯೊಬ್ಬ ಭಾರತೀಯನೂ ತನ್ನ ಹಕ್ಕಿಗಾಗಿ ಹೋರಾಟ ಮಾಡುವಾಗಲೆಲ್ಲಾ ಅಂಬೇಡ್ಕರ್ ಅವರನ್ನು ನೆನಪಿಸಿಕೊಳ್ಳಬೇಕಿದೆ. ಅಂಬೇಡ್ಕರ್ ಅವರು ಸಂವಿಧಾನವನ್ನು ನೀಡಿ ಪ್ರತಿ ಪ್ರಜೆಗೂ ಸಮಾನ ಅವ ಕಾಶಗಳನ್ನು ದೊರಕಿಸಿಕೊಟ್ಟಿದ್ದಾರೆ ಎಂದರು. ವಿದ್ಯಾರ್ಥಿನಿ ಮಧುಶ್ರೀ ಅವರಿಂದ ಅಂಬೇಡ್ಕರ್ ಕುರಿತ ಮಹಾನಾಯಕ ಗೀತೆಗೆ ನೃತ್ಯ ಪ್ರದರ್ಶನ ಮೆಚ್ಚುಗೆಗೆ ಪಾತ್ರವಾಯಿತು.

ಪಟ್ಟಣದ ಐದು ದೀಪ ವೃತ್ತದಲ್ಲಿ ಅಂಬೇಡ್ಕರ್ ಮೆಮೋರಿಯಲ್ ಎಜುಕೇಷನ್ ಅಸೋಸಿಯೇಷನ್ ವತಿಯಿಂದ ಅಧ್ಯಕ್ಷ ಜೆ.ಅಂದಾನಯ್ಯ ಅವರ ನೇತೃತ್ವದಲ್ಲಿ ಅಂಬೇಡ್ಕರ್ ಭಾವಚಿತ್ರದ ಫ್ಲೆಕ್ಸ್‌ಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು.

## ಅಕ್ರಮ ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿ ಬಂಧನ

• ಉದಯವಾಹಿನಿ, ಕೊಳ್ಳೇಗಾಲ


ಉದಯವಾಹಿನಿ ಚಿತ್ರ

ಅಕ್ರಮವಾಗಿ ಮಾರಾಟ ಮಾಡಲು ಒಣ ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಗ್ರಾಮಾಂತರ ಪೊಲೀಸ್ ಠಾಣಾ ಅಧಿಕಾರಿಗಳು ಬಂಧಿಸಿದ್ದಾರೆ. ತಾಲ್ಲೂಕಿನ ಪುಟ್ಟ ಇರಮ್ಮಾನದೊಡ್ಡಿ ನಿವಾಸಿ ರಂಗೇಗೌಡ ಅಲಿಯಾಸ್ ರಂಗಸ್ವಾಮಿ ಬಿನ್ ಸಿದ್ದೇಗೌಡ (38 ವರ್ಷ) ಬಂಧಿತ ಆರೋಪಿಯಾಗಿದ್ದಾನೆ.

ಆರೋಪಿ ರಂಗೇಗೌಡ ಎಂಬಾತ ಅಕ್ರಮವಾಗಿ ಮಾರಾಟ ಮಾಡಲು ಒಣ ಗಾಂಜಾ ಸಾಗಿಸುತ್ತಿದ್ದ ಎಂಬ ಖಚಿತ ಮಾಹಿತಿ ಮೇರೆಗೆ ಪಿ.ಎಸ್.ಐ ಸುಪ್ರೀತ್ ನೇತೃತ್ವದ ತಂಡ ದಾಳಿ ನಡೆಸಿದ್ದಾರೆ. ಈ ವೇಳೆ 140 ಗ್ರಾಂ ಒಣ ಗಾಂಜಾ ದೊರೆತಿದೆ. ನಂತರ ಗಾಂಜಾ ಸಹಿತ ಆರೋಪಿಯನ್ನು ವಶಕ್ಕೆ ಪಡಿಯಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕವಿತಾ. ಡಿ.ವೈ.ಎಸ್. ಪಿ ಧರ್ಮೇಂದ್ರ ಅವರ ಮಾರ್ಗ ದರ್ಶನದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಸುಪ್ರೀತ್ ಪ್ರಕರಣ ದಾಖಲಾಗಿದೆ.

ದಾಳಿ ಕಾಲದಲ್ಲಿ ಪಿ.ಎಸ್.ಐ ಸುಪ್ರೀತ್, ಎಸ್.ಎ.ಡಿ.ಎಸ್ ಪೂಜೇರಿ, ಎ.ಎಸ್.ಐ ಗೋವಿಂದ್, ಮನೋಹರ್, ದಿನೇಶ್, ಸಿದ್ದರಾಜು, ವಿಜಯ್ ಕುಮಾರ್ ಹಾಜರಿದ್ದರು.

## ಮೈಸೂರಲ್ಲಿ ಮರಗಳ ಹನನ

• ಉದಯವಾಹಿನಿ, ಮೈಸೂರು

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ರಸ್ತೆ ಅಗಲೀಕರಣದ ನೆಪಹೇಳಿ ರಾತ್ರೋರಾತ್ರಿ 40ಕ್ಕೂ ಹೆಚ್ಚು ಮರಗಳನ್ನು ಕಡಿದಿರುವುದು ನಗರದ ಜನತೆ ಹಾಗೂ ಪರಿಸರ ಪ್ರೇಮಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಸದ್ಯ ಈ ಬಗ್ಗೆ ಸ್ಪಷ್ಟನೆ ನೀಡಿರುವ ಅರಣ್ಯ ಇಲಾಖೆ ಅಧಿಕಾರಿ ಮೈಸೂರು ಮಹಾನಗರ ಪಾಲಿಕೆ ಕೋರಿಕೆಯಂತೆ ಮರಗಳನ್ನು ಕಡಿಯಲಾಗಿದೆ ಎಂದಿದ್ದಾರೆ. ನಗರದ ಎಸ್‌ಪಿ ಕಚೇರಿ ವೃತ್ತದಿಂದ ಕಾಳಿಕಾಂಬ ದೇವಸ್ಥಾನದವರೆಗೆ ರಸ್ತೆ ವಿಸ್ತರಣೆಗೆ ಸಂಬಂಧಿಸಿದಂತೆ ಮೈಸೂರು ಮಹಾನಗರ ಪಾಲಿಕೆ ಸಲ್ಲಿಸಿರುವ ಕೋರಿಕೆಯಂತೆ, 40 ಫೆಲ್ಟೋಫೊರಮ್ ಜಾತಿಯ ಮರಗಳನ್ನು ನಿಯಮಾನುಸಾರ ಕಡಿಯಲಾಗಿದೆ ಎಂದು ಮೈಸೂರು ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಗರದಲ್ಲಿ ಅರ್ಥಪೂರ್ಣವಾಗಿ ಶ್ರೀ ಭಗವಾನ್ ಮಹಾವೀರ ಜಯಂತಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಾಮರಾಜನಗರ


ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಶ್ರೀ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮವನ್ನು ನಗರದಲ್ಲಿಂದು ಅರ್ಥಪೂರ್ಣವಾಗಿ ಆಚರಿಸಲಾಯಿತು. ಮೊದಲಿಗೆ ನಗರದ ಚಾಮರಾಜೇಶ್ವರ ದೇವಾಲಯ ಮುಂಬಾಗದಲ್ಲಿ ಶ್ರೀ ಮಹಾವೀರರ ಭಾವಚಿತ್ರಕ್ಕೆ ಎಂ.ಎಸ್.ಐ.ಎಲ್. ಅಧ್ಯಕ್ಷರು, ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಪುಷ್ಪರ್ಚಾನೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು. ಬಳಿಕ ನಗರದ ಪ್ರಮುಖ ರಸ್ತೆಗಳಲ್ಲಿ ಮಂಗಳ ವಾದ್ಯ ಸಮೇತ ಮಹಾವೀರರ ಭಾವಚಿತ್ರದ ಮೆರವಣಿಗೆ ಸಾಗಿ ವರನಟ ಡಾ. ರಾಜ್ ಕುಮಾರ್ ರಂಗಮಂದಿರದ ಬಳಿ ಮುಕ್ತಾಯವಾಯಿತು.

ನಂತರ ಡಾ. ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದ್ದ ಶ್ರೀಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಎಲ್ಲಾ ಧರ್ಮಗಳ ಸಾರವು ಅಹಿಂಸೆ, ಮಾನವತೆ, ಪ್ರೀತಿಯನ್ನು ಪ್ರತಿಪಾದಿಸುವುದಾಗಿದೆ. ಮಹಾವೀರರು ಶಾಂತಿಯನ್ನು ಸಾರಿದರು ಜನರ ಒಳಿತಿಗಾಗಿ ಕಳಕಳಿ ವ್ಯಕ್ತಪಡಿಸಿದರು.

### ಏ. 15 ರಿಂದ 2 ಕೇಂದ್ರಗಳಲ್ಲಿ, ಏ.18 ರಿಂದ 4 ಕೇಂದ್ರಗಳಲ್ಲಿ ಆರಂಭ | ಯಾವುದೇ ಲೋಪಕ್ಕೆ ಅವಕಾಶ ನೀಡದಿರಿ: ಎಸ್.ಆರ್.ವೀಣಾ

## 6 ಕೇಂದ್ರಗಳಲ್ಲಿ 1500 ಮಂದಿ ಶಿಕ್ಷಕರಿಂದ ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನ

• ಉದಯವಾಹಿನಿ, ಕೋಲಾರ


ಉದಯವಾಹಿನಿ ಚಿತ್ರ

ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸಮಯ ಪಾಲನೆಯೊಂದಿಗೆ ಕ್ರಮಬದ್ದ, ವಿದ್ಯಾರ್ಥಿಸ್ನೇಹಿ ಮೌಲ್ಯಮಾಪನ ನಡೆಸಿ, ಯಾವುದೇ ಲೋಪಕ್ಕೆ ಅವಕಾಶ ನೀಡದಿರಿ ಎಂದು ಶಾಲಾ ಶಿಕ್ಷಣ ಇಲಾಖೆ ಶಿಕ್ಷಣಾಧಿಕಾರಿ ಎಸ್.ಆರ್.ವೀಣಾ ಸೂಚನೆ ನೀಡಿದರು. ಕೆಲವು ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ನಡೆಯುವ ಹಿನ್ನಲೆಯಲ್ಲಿ ಏಪ್ರಿಲ್ 15 ರಿಂದ 2 ಕೇಂದ್ರಗಳಲ್ಲಿ, ಏ.18 ರಿಂದ 4 ಕೇಂದ್ರಗಳಲ್ಲಿ ಆರಂಭಗೊಳ್ಳುವ ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನ ಕಾರ್ಯದ ಹಿನ್ನಲೆ ನಗರದ ಚಿನ್ಮಯ ಶಾಲೆಯಲ್ಲಿ ಜಂಟಿ ಹಾಗೂ ಉಪ ಮುಖ್ಯ ಮೌಲ್ಯಮಾಪಕರು ಮೌಲ್ಯಮಾಪನ ಕಾರ್ಯದಲ್ಲಿ ಅನುಸರಿಸಬೇಕಾದ ನಿಯಮಗಳ ಪಾಲನೆ, ಅಂಕಗಳ ನೀಡಿಕೆ ಕುರಿತು ಅರಿವು ಮೂಡಿಸಿ ಅವರು ಮಾತನಾಡಿದರು.

ಸಿಇಟಿ ಪರೀಕ್ಷೆ ನಡೆಯದ ನಗರದ ಸೈನಿಕ್ ಪಬ್ಲಿಕ್ ಶಾಲೆಯಲ್ಲಿ ಹಿಂದಿ, ಸೆಂಟ್ ಆನ್ಸ್ ಶಾಲೆಯಲ್ಲಿ ವಿಜ್ಞಾನ ವಿಷಯದ ಮೌಲ್ಯಮಾಪನ ಕೇಂದ್ರಗಳಲ್ಲಿ ಏ.12 ರಿಂದಲೇ ಜಂಟಿ, ಉಪಮುಖ್ಯಮೌಲ್ಯಮಾಪಕರು ಕೇಂದ್ರಗಳಲ್ಲಿ ಹಾಜರಿದ್ದು ಡಿಕೋಡಿಂಗ್ ಮಾಡಿ ಸಿದ್ಧತೆ ನಡೆಸಿದ ನಂತರ ಏ.15 ರಂದು ಪೂರ್ಣಪ್ರಮಾಣದ ಮೌಲ್ಯಮಾನಪನ ಆರಂಭಗೊಳ್ಳಲಿದೆ ಎಂದರು. ಉಳಿದಂತೆ ಉಳಿದ ನಾಲ್ಕು ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ಏ.17 ರವರೆಗೂ ಇರುವುದರಿಂದ ಅಲ್ಲಿ ಮಾತ್ರ ಏ.18 ರಿಂದ ಪೂರ್ಣಪ್ರಮಾಣದ ಮೌಲ್ಯಮಾಪನ ಆರಂಭಗೊಳ್ಳಲಿದೆ. ಆದರೆ ಅಲ್ಲಿಯೂ ಏ.12 ರಿಂದಲೇ ಉಪಮುಖ್ಯ ಮೌಲ್ಯಮಾಪಕರು ಹಾಜರಿದ್ದು, ಡಿಕೋಡಿಂಗ್ ಕಾರ್ಯ ನಡೆಸಬೇಕು ಎಂದರು.

**ಸಿಇಟಿ ಪರೀಕ್ಷೆ ನಡೆಯುವ ಹಿನ್ನಲೆ**

ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನಲ್ಲಿ ಕನ್ನಡ, ಮಹಿಳಾ ಸಮಾಜದಲ್ಲಿ ಇಂಗ್ಲೀಷ್, ಮದರ್ ತೆರೇಸಾ ಶಾಲೆಯಲ್ಲಿ ಗಣಿತ, ಚಿನ್ಮಯ ಶಾಲೆಯಲ್ಲಿ ಸಮಾಜ ವಿಜ್ಞಾನ ವಿಷಯಗಳ ಪರೀಕ್ಷೆ ಏ.18 ರಿಂದ ಆರಂಭವಾಗುತ್ತದೆ ಎಂದು ತಿಳಿಸಿದರು.

ಈ ಬಾರಿಯೂ ನೀವೇ ಗಣಕಯಂತ್ರದಲ್ಲಿ ಆನ್ ಲೈನ್‌ನಲ್ಲಿ ದಾಖಲಿಸಬೇಕಾಗಿದೆ ಎಂದು ತಿಳಿಸಿ, ಪ್ರತಿ ವಿದ್ಯಾರ್ಥಿಯ ಭವಿಷ್ಯ ಅಡರುವ ಈ ಮೌಲ್ಯಮಾಪನ ಕಾರ್ಯದಲ್ಲಿ ಉಪ ಮುಖ್ಯ ಮೌಲ್ಯಮಾಪಕರು ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಬೇಕು, ಸಹ ಮೌಲ್ಯಮಾಪಕರು ಮೌಲ್ಯಮಾಪನ ನಡೆಸಿದ ಉತ್ತರ ಪತ್ರಿಕೆಗಳನ್ನು ಅಡ್ಡ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿ, ತಪ್ಪುಗಳು ಮಾಡಿದರೆ ದಂಡ ತೆರಬೇಕಾಗುತ್ತದೆ ಎಂದು ಎಚ್ಚರಿಸಿದರು.

ನಗರದ ಆರು ಮೌಲ್ಯಮಾಪನ ಕೇಂದ್ರಗಳಲ್ಲಿ 6 ಜಂಟಿ ಮುಖ್ಯ ಮೌಲ್ಯಮಾಪಕರು, 6 ಮಂದಿ ವ್ಯವಸ್ಥಾಪಕರು ಸೇರಿದಂತೆ 246 ಉಪ ಮುಖ್ಯ ಮೌಲ್ಯಮಾಪಕರು, 1416 ಮಂದಿ ಸಹ ಮೌಲ್ಯಮಾಪಕರು ಕಾರ್ಯನಿರ್ವಹಿಸುವರು ಎಂದು ತಿಳಿಸಿದರು. ಗಣಕಯಂತ್ರದಲ್ಲಿ ಆ ದಿನ ಮೌಲ್ಯಮಾಪನ ಮಾಡಿದ ಅಂಕಗಳನ್ನು ಅದೇ ದಿನ ಆನ್‌ಲೈನ್‌ನಲ್ಲಿ ಅಳವಡಿಸಬೇಕಾಗಿರುವುದರಿಂದ ಹೆಚ್ಚಿನ ಗಮನ ವಹಿಸಲು ಸೂಚಿಸಿದರು.

**ಮೌಲ್ಯಮಾಪನ ಕೇಂದ್ರಕ್ಕೆ ಹೊರಗಿನ ವ್ಯಕ್ತಿಗಳು, ರಾಜಕೀಯಪಕ್ಷ, ಸಂಘಟನೆ ಗಳ ಮುಖಂಡರು ಪ್ರವೇಶ ನಿಷಿದ್ಧವಾಗಿದೆ, ಕೇಂದ್ರದ ಸಿಬ್ಬಂದಿ ಯಾವುದೇ ಪ್ರಾಯೋಜಕರಿಂದ ಊಟ, ತಿಂಡಿ, ಟೀ, ಕಾಫಿ ಪಡೆಯುವಂತಿಲ್ಲ ಎಂದು ಸ್ಪಷ್ಟಪಡಿಸಿ, ಕೇಂದ್ರಗಳ ಸುತ್ತಮುತ್ತ ಮೌಲ್ಯಮಾಪನ ಮುಕ್ತಾಯವಾಗುವವರೆಗೂ 200 ಮೀ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ತಿಳಿಸಿದರು.**

**ಮೊಬೈಲ್ ಬಳಕೆ ನಿಷೇಧ**

**ಜಂಟಿ, ಕೇಂದ್ರ ವ್ಯವಸ್ಥಾಪಕರು ಪ್ರತಿ ದಿನ ಬೆಳಗ್ಗೆ 9-00ಕ್ಕೆ ಕೇಂದ್ರದಲ್ಲಿ ಹಾಜರಿರಬೇಕು, ಹಾಗೆಯೇ ಉಪ ಮೌಲ್ಯಮಾಪಕರು ಹಾಗೂ ಸಹಮೌಲ್ಯಮಾಪಕರು 9-30 ಗಂಟೆಗೆ ಹಾಜರಾಗಬೇಕು ಎಂದರು. ಸಮಯಪಾಲನೆಯ ಜತೆಗೆ ಮೌಲ್ಯಮಾಪನ ನಡೆಸುವಾಗ ಮಧ್ಯದಲ್ಲಿ ಹೊರ ಹೋಗುವುದು ಸರಿಯಲ್ಲ, ಮೌಲ್ಯಮಾಪನ, ಅಂಕಗಳ ನಮೂದು, ಕೂಡುವಿಕೆಯಲ್ಲಿ ವ್ಯತ್ಯಯವಾಗದಂತೆ ಎಚ್ಚರವಹಿಸಿ, ಸಹ ಮೌಲ್ಯಮಾಪಕರ ಕಾರ್ಯವನ್ನು ಪರಿಶೀಲಿಸುತ್ತಿರಿ ಎಂದು ಸೂಚಿಸಿದರು.**

ಅಂತರಾಳದಿಂದ..
EDITORIAL

# ನ್ಯಾಯಾಂಗವು ಲಿಂಗತಾರತಮ್ಯದ ಪೂರ್ವಾಗ್ರಹ ಮೀರಿ ನಿಲ್ಲಬೇಕು



ಸಮಾಜದ ಬಹುದೊಡ್ಡ ವರ್ಗದ ಭಾವನೆಗಳು, ಚಿಂತನೆ ಮತ್ತು ನಡವಳಿಕೆಯ ಮೇಲೆ ಪುರುಷ ಪ್ರಧಾನ ಮನಃಸ್ಥಿತಿಯ ಪ್ರಭಾವ ದಟ್ಟವಾಗಿದೆ ಎಂಬುದನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ. ಇವು ವಿವಿಧ ರೀತಿಯಲ್ಲಿ ಆಗಾಗ ಪ್ರಕಟವಾಗುತ್ತಲೇ ಇರುತ್ತವೆ. ಈ ಮನಃಸ್ಥಿತಿಯು ಹೊರಗೆ ಬರುವುದನ್ನು ತಡೆಯುವುದಕ್ಕಾಗಿ ಸಮಾಜದಲ್ಲಿ ಕೆಲವು ಸಂಸ್ಥೆಗಳು ಇವೆ. ಲಿಂಗಸಮಾನತೆ ಮತ್ತು ಲಿಂಗತ್ವ ನ್ಯಾಯದ ಯೋಚನೆಗಳನ್ನು ಖಾತರಿಪಡಿಸುವ ಕೆಲಸವನ್ನು ಈ ಸಂಸ್ಥೆಗಳು ಮಾಡುತ್ತವೆ. ಅಂತಹ ಸಂಸ್ಥೆಗಳಲ್ಲಿ ನ್ಯಾಯಾಂಗವು ಬಹಳ ಮುಖ್ಯವಾದುದು.

ಆದರೆ, ನ್ಯಾಯಾಂಗದ ಪ್ರತಿನಿಧಿಗಳೇ ಮಹಿಳೆಯರಿಗೆ ಸಂಬಂಧಿಸಿದ ವಿಚಾರಗಳಲ್ಲಿ ಹಗುರವಾಗಿ ಮಾತನಾಡಿದ ಉದಾಹರಣೆಗಳು ಇವೆ. ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಸಂಜಯ್ ಕುಮಾರ್ ಸಿಂಗ್ ಅವರ ಆದೇಶ ಮತ್ತು ಅಭಿಪ್ರಾಯ ಗಳನ್ನು ಈ ದೃಷ್ಟಿಯಲ್ಲಿ ನೋಡಬೇಕಿದೆ. ಅತ್ಯಾಚಾರ ಆರೋಪಿಯ ಜಾಮೀನು ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಸಿಂಗ್ ಅವರು 'ಸಂತ್ರಸ್ತೆಯೇ ತನ್ನನ್ನು ಅಪಾಯಕ್ಕೆ ಒಡ್ಡಿಕೊಂಡಿದ್ದಾಳೆ' ಎಂದು ಹೇಳಿದ್ದಾರೆ. ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಆಘಾತಕಾರಿ ಮತ್ತು ಪ್ರತಿಗಾಮಿಯಾಗಿವೆ. ಅವು ನ್ಯಾಯಶಾಸ್ತ್ರದ ನಿಯಮಗಳಿಗೆ ವಿರುದ್ಧವಾಗಿವೆ. ಸಂತ್ರಸ್ತೆಯು ಮದ್ಯ ಕುಡಿದು ಆರೋಪಿಯ ಮನೆಗೆ ಹೋಗುವ ಮೂಲಕ ಅಪಾಯಕ್ಕೆ ಒಡ್ಡಿಕೊಂಡಿದ್ದಾಳೆ ಎಂದು ನ್ಯಾಯಮೂರ್ತಿ ಹೇಳಿರುವುದು ಅಪರಾಧಕ್ಕಾಗಿ ಸಂತ್ರಸ್ತೆಯನ್ನೇ ದೂರಿದಂತೆ ಆಗಿದೆ. ನ್ಯಾಯಮೂರ್ತಿಯ ಹೇಳಿಕೆಯನ್ನು ಯಾವುದೇ ರೀತಿಯಲ್ಲಿ ನೋಡಿದರೂ ಅದು ಕಾನೂನಿನ ಆಶಯಗಳಿಗೆ ವಿರುದ್ಧ. ಸುಪ್ರೀಂ ಕೋರ್ಟ್, ಹೈಕೋರ್ಟ್, ಇತರ ನ್ಯಾಯಾಲಯಗಳು ಹಾಕಿಕೊಟ್ಟ ಪೂರ್ವನಿದರ್ಶನ ಗಳಿಗೆ ವಿರುದ್ಧವಾಗಿದೆ. ನ್ಯಾಯಮೂರ್ತಿಯು ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆಯದ್ದೇ ತಪ್ಪು ಎಂಬಂತೆ ಹೇಳಿದ್ದಾರೆ. ಯಾವುದೇ ಸ್ಥಿತಿಯಲ್ಲಿ ಅಥವಾ ಯಾವುದೇ ಸ್ಥಳದಲ್ಲಿ ಅಥವಾ ಯಾವುದೇ ಸಮಯದಲ್ಲಿ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲು ಕಾನೂನು ಅವಕಾಶ ಕೊಡುವುದಿಲ್ಲ. ಸಂತ್ರಸ್ತೆಯ ಶೈಕ್ಷಣಿಕ ಅರ್ಹತೆಯಾಗಲೀ ಆಕೆ ಮದ್ಯ ಕುಡಿದಿದ್ದಳು ಎಂಬುದಾಗಲೀ ತನ್ನ ಇಚ್ಛೆಯ ಪ್ರಕಾರವೇ ಅವಳು ಆರೋಪಿ ಇದ್ದಲ್ಲಿಗೆ ಹೋಗಿದ್ದಳು ಎಂಬುದಾಗಲೀ ಇಲ್ಲಿ ಪ್ರಸ್ತುತ ಅಲ್ಲವೇ ಅಲ್ಲ. ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿರುವ ಪುರುಷ ಪ್ರಧಾನ ಮನಃಸ್ಥಿತಿಗೆ ನ್ಯಾಯಮೂರ್ತಿ ಸಿಂಗ್ ಅವರು ಮಾತಿನ ರೂಪ ಕೊಟ್ಟಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆ ಮುಂದುವರಿಯಬೇಕು ಎಂಬ ಹಂಬಲ ಸಮಾಜದ ಕೆಲವರಲ್ಲಿ ಇದೆ. ಆದರೆ, ಇಂತಹ ಭಾವನೆಗಳಿಂದ ಮಹಿಳೆಯರನ್ನು ರಕ್ಷಿಸಬೇಕಾದ ವ್ಯವಸ್ಥೆಯ ಕಾವಲುಗಾರರಾದ ನ್ಯಾಯಮೂರ್ತಿಗಳು ತಮ್ಮ ಮಾತು ಮತ್ತು ಆದೇಶಗಳ ಮೂಲಕ ಮಹಿಳೆಯ ಮೌಲ್ಯಮಾಪನದ ಕೆಲಸ ಮಾಡಬಾರದು. ಹೈಕೋರ್ಟ್‌ನಂತಹ ಸಾಂವಿಧಾನಿಕ ನ್ಯಾಯಾಲಯದ ನ್ಯಾಯಮೂರ್ತಿಯೊಬ್ಬರು ಇಂತಹ ಸಂವೇದನಾರಹಿತ ಹೇಳಿಕೆ ನೀಡಿರುವುದು ಇದೇ ಮೊದಲೇನಲ್ಲ.

**ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ತೆಯು ತನ್ನ ಸಮ್ಮತಿ ಇರಲಿಲ್ಲ ಎಂದು ಹೇಳಿದರೆ ಕಾನೂನು ಅದನ್ನು ಒಪ್ಪಿಕೊಳ್ಳುತ್ತದೆ. ಕಾನೂನು ಪ್ರಕಾರ, ಆರೋಪಿಯ ನಡವಳಿಕೆ ಮತ್ತು ಕ್ರಿಯೆಯನ್ನು ಪರಿಶೀಲನೆಗೆ ಒಳಪಡಿಸಬೇಕೇ ವಿನಾ ಸಂತ್ರಸ್ತೆಯನ್ನು ಅಲ್ಲ. ಭಾರತೀಯ ಸಾಕ್ಷ್ಯ ಕಾಯ್ದೆಯ 114ಎ ಸೆಕ್ಷನ್ ಅನ್ನು ವ್ಯಾಖ್ಯಾನಿಸಿ ಈ ವಿಷಯವನ್ನು ಹಲವು ಬಾರಿ ಸ್ಪಷ್ಟಪಡಿಸಲಾಗಿದೆ.**

ಹೆಣ್ಣಿನ ಸ್ತನಗಳನ್ನು ಮುಟ್ಟುವುದು, ಪೈಜಾಮಾದ ಲಾಡಿಯನ್ನು ಎಳೆಯುವುದು, ಎಳೆದೊಯ್ಯುವುದು ಅತ್ಯಾಚಾರ ಪ್ರಯತ್ನ ಆಗದು ಎಂದು ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿಯೊಬ್ಬರು ಕೆಲವು ದಿನಗಳ ಹಿಂದೆ ಹೇಳಿದ್ದರು. ಬೇರೊಂದು ಪ್ರಕರಣದಲ್ಲಿ, ಅತ್ಯಾಚಾರ ಸಂತ್ರಸ್ತೆಯನ್ನು ಮೂರು ತಿಂಗಳಲ್ಲಿ ಮದುವೆ ಆಗಬೇಕು ಎಂಬ ಷರತ್ತು ಒಡ್ಡಿ ಆರೋಪಿಗೆ ಇದೇ ನ್ಯಾಯಾಲಯ ಫೆಬ್ರುವರಿಯಲ್ಲಿ ಜಾಮೀನು ನೀಡಿತ್ತು. ದಶಕಗಳ ಹೋರಾಟದ ಫಲವಾಗಿ ದಕ್ಕಿಸಿಕೊಂಡ ಲಿಂಗತ್ವ ನ್ಯಾಯ ಮತ್ತು ಸಮಾನತೆಯನ್ನು ಇಂತಹ ಆದೇಶಗಳು ಮತ್ತು ಹೇಳಿಕೆಗಳು ಕ್ಷಣದಲ್ಲಿ ಧ್ವಂಸ ಮಾಡಿಬಿಡುತ್ತವೆ.



# ರಾಮಾಯಣ

## ವಸಿಷ್ಠನು ಸೀತಾದೇವಿಗೆ ವಸ್ತ್ರಾಭರಣಗಳನ್ನು ಕೊಡಿಸಿದ್ದು

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ಕೈಕೇಯಾದೇವಿ, ಈಗ ಶ್ರೀರಾಮನು ವನಕ್ಕೆ ತೆರಳಿದನಾದರೆ ಪಶು ಪಕ್ಷಿ ಮೊದಲಾದ ಪ್ರಾಣಿಗಳೆಲ್ಲವೂ ಆತನ ಹಿಂದೆ ಹೋಗಿಬಿಡುವುವು. ನೀನು ನಿನ್ನ ಸೊಸೆಯಾದ ಸೀತಾದೇವಿಗೆ ಅಲಂಕಾರವನ್ನು ಮಾಡು. ಈ ನಾರುಸೀರೆಗಳನ್ನು ತೆಗೆಸಿಹಾಕು. ಸೀತಾದೇವಿಗೆ ನಾರುಸೀರೆಗಳು ಉಚಿತವಲ್ಲ. ನೀನು ದಶರಥರಾಯನ ಕೈಯಲ್ಲಿ ವರವನ್ನು ಬೇಡಿಕೊಂಡಾಗ ಶ್ರೀರಾಮನೊಬ್ಬನಿಗೆ ವನವಾಸವಾಗಬೇಕೆಂದು ಬೇಡಿಕೊಂಡೆಯಲ್ಲದೆ ಸೀತಾ ದೇವಿಗೂ ನಾರುಸೀರೆಯ ಉಡಿಗೆ ವನವಾಸಗಳಾಗಬೇಕೆಂದು ಬೇಡಿಕೊಳ್ಳಲಿಲ್ಲ. ಸೀತಾದೇವಿಯು ನಾರುಸೀರೆಯನ್ನುಟ್ಟು ಜಡೆಯನ್ನು ಧರಿಸಿ ವನಕ್ಕೆ ಹೋಗಲೆಂದು ಯಾರು ವರವನ್ನು ಕೊಟ್ಟರು ಎಂದು ನುಡಿದನು.

ಪತಿವ್ರತಾಶಿರೋಮಣಿಯಾದ ಸೀತಾದೇವಿಯು ತನ್ನ ಪತಿಯಾದ ಶ್ರೀರಾಮನಹಾಗೆಯೇ ತಾನೂ ಇರಬೇಕೆಂದೂ ಆತನು ಮುನಿವೇಷವನ್ನು ಕೈಗೊಂಡಮೇಲೆ ತಾನು ಸರ್ವಾಭರಣಭೂಷಿತೆ ಯಾಗಿರಬಾರದೆಂದೂ ಕೂಲವಸ್ತ್ರಾಭರಣಗಳೆಲ್ಲಿ ಮನಸ್ಸಿಡದಿದ್ದಳು.

### ಶ್ರೀರಾಮನು ದಶರಥನಿಗೆ ಹೇಳಿದ ಸಮಾಧಾನ

ಆಮೇಲೆ ಸೀತಾದೇವಿಯನ್ನು ಕಂಡ ಸಮಸ್ತ ಜನರೂ ದಶರಥರಾಯನ ಜನ್ಮವನ್ನು ಸುಡಬೇಕೆಂದು ಅತ್ಯಂತ ದುಃಖಾತಿಶಯದಿಂದ ರೋದನವನ್ನು ಮಾಡುತ್ತಿದ್ದರು. ಆ ಕೋಲಾಹಲ ಧ್ವನಿಯನ್ನು ಕೇಳಿ ದಶರಥರಾಯನು ಮನಗರಗಿ ಅಕಟಕಟಾ ! ನನ್ನ ಜೀವನದಿಂದ ಪ್ರಯೋಜನ ವೇನು ? ನನಗೆ ಅಪಕೀರ್ತಿಯೂ ಅಧರ್ಮವಾ? ಸಂಭವಿಸಿತಲ್ಲ! ಎಂದು ನಿಟ್ಟುಸಿರುಬಿಡುತ್ತ ತನ್ನ ಸ್ತ್ರೀಯಾದ ಕೈಕೇಯಾದೇವಿಯನ್ನು ನೋಡಿ ಕೈಕೇಯಿ, ಕೋಮಲಾಂಗಿಯಾದ ಸೀತಾದೇವಿಯು ನಾರುಸೀರೆಯನ್ನುಡುವುದು ಯೋಗ್ಯವಲ್ಲ. ನಮ್ಮ ಗುರುವಾದ ವಸಿಷ್ಠಮುನೀಶ್ವರನು ಈ ದೇವಿಯು ವನವಾಸಕ್ಕೆ ಯೋಗ್ಯಳಲ್ಲವೆಂದು ನುಡಿದ ಮಾತೇ ಸತ್ಯ. ರಾಜಕುಮಾರಿಯಾದ ಸೀತಾದೇವಿಯು ಸಭಾವಂಧ್ಯದಲ್ಲಿ ಬಡಹೆಂಗಸಿನಹಾಗೆ ನಾರುಸೀರೆಯನ್ನುಡುವುದಕ್ಕೆ ಯಾರಿಗೆ ದ್ರೋಹವನ್ನು ಮಾಡಿದಳು? ನಾನು ನಿನಗೆ ಶ್ರೀ ರಾಮನೊಬ್ಬನು ನಾರುಬಟ್ಟೆಯನ್ನುಟ್ಟು ವನಕ್ಕೆ ಹೋಗಲೆಂದು ಮಾತುಕೊಟ್ಟೆನಲ್ಲದೆ ಸೀತಾದೇವಿಯು ನಾರುಸೀರೆಯನ್ನುಟ್ಟು ವನಕ್ಕೆ ಹೋಗ ಬೇಕೆಂದು ಮಾತು ಕೊಡಲಿಲ್ಲ. ಈ ದೇವಿಯು ತನ ಕ ಮನಸ್ಸುಬಂದಂತೆ ಸರ್ವಾಭರಣಭೂಷಿತೆ ಯಾಗಿ ವನಕ್ಕೆ ಹೋಗಲಿ ! ಬದುಕಲಾರದ ನಾನು ನಿನಗೆ ಕೊಡಬಾರದ ವರವನ್ನು ಕೊಟ್ಟೆನು. ನಿನ್ನ ಅಜ್ಞಾನದಿಂದ ನೀನು ಶ್ರೀರಾಮನಿಗೆ ವನವಾಸವಾಗಬೇಕೆಂದು ಬೇಡಿಕೊಂಡೆ. ನಾನೂ ನಿನ್ನ ಮಾತಿಗೆ ಮರುಳಾಗಿ ಆತನನ್ನು ವನಕ್ಕೆ ಕಳುಹಿಸಲು ಒಪ್ಪಿದೆ. ಶ್ರೀರಾಮನು ನಿನಗೆ ಮಾಡಿದ ಅಪರಾಧವು ಏನಾದರೂ ಉಂಟೆ? ಸೀತಾದೇವಿಯು ನಿನಗೆ ದ್ರೋಹವನ್ನು ಮಾಡಿದ್ದು ಉಂಟೆ? ಸುಕುಮಾರಿಯಾಗಿ ಕಮಲದಳವನ್ನು ಹೋಲುವ ಕಣ್ಣುಗಳುಳ್ಳ ಪತಿವ್ರತೆಯಾದ ಈ ದೇವಿಯು ಮಾಡಿದ ಅಪರಾಧವೇನು ಶ್ರೀರಾಮನೊಬ್ಬನು ತೆರಳುವುದೇ ಸಾಕು. ನೀನು ಶ್ರೀರಾಮನ ವನವಾಸದಿಂದಲೇ ಸಂತೋಷಪಡು. ಸೀತಾದೇವಿಗೆ ವಾರುಸೀರೆಯನ್ನು ಅಳವಡಿಸಬೇಡ ಏಂದು ನುಡಿದು ಅಪರಿಮಿತವಾದ ಶೋಕಸಾಗರದಲ್ಲಿ ಮುಳುಗಿ ಮುಂದುಗಾಣದೆ: ಮೂರ್ಛೆಬಿದ್ದನು.

ಶ್ರೀರಾಮನು ಆತನನ್ನು ಕೈಹಿಡಿದೆತ್ತಿ ತಂದೆಯೆ, ನೀನು ಧರ್ಮ ರಹಸ್ಯವನ್ನು ಬಲ್ಲವನು ಆದ್ದರಿಂದ ಮಹಾಪತಿವ್ರತೆಯೂ ವೃದ್ಧೆಯೂ ಸದಾಚಾರಸಂಪನ್ನೆಯೂ ಒಂದು ಸಾರಿಯಾದರೂ ಪುತ್ರವಿಯೋಗವನ್ನು ಕಾಣದವಳೂ ನಿನ್ನ ಶರಣುಹೊಕ್ಕವಳೂ ಆದ ನನ್ನ ತಾಯಿ ಕೌಸಲ್ಯಾದೇವಿಯನ್ನು ಸಂತವಿಟ್ಟು ರಕ್ಷಿಸು. ಯಾವಾಗಲೂ ನಿನ್ನನ್ನೇ ಧ್ಯಾನಿಸುವ ಕೌಸಲ್ಯಾದೇವಿಯು ನಾನು ವನಕ್ಕಿ ಹೋದಮೇಲೆ ನನ್ನ ಅಗಲಿಕೆಯಿಂದುಂಟಾಗುವ ದುಃಖ ದಿಂದ ಶರೀರವನ್ನು ತೊರೆಯದಂತೆ ಮನ್ನಿಸಿ ರಕ್ಷಿಸು ಎಂದು ಪ್ರಾರ್ಥಿಸಿದನು.

ಮುಂದುವರಿಯುವುದು...



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ


# ರೈತನೇ ಮಾತ್ರ ಮಹಾಶ್ರೇಷ್ಠ



ಬೆಳಗ್ಗೆ ತಿಂಡಿ, ಮಧ್ಯಾಹ್ನ ಮತ್ತು ರಾತ್ರಿ ಹೊಟ್ಟೆ ತುಂಬುವಷ್ಟು ಊಟ ಮಾಡಿ ಹಸಿವೆ ಇಲ್ಲದೆ ನಿಶ್ಚಿಂತೆಯಿಂದ ನಾವು ನಿದ್ದೆ ಮಾಡುತ್ತಿದ್ದರೆ, ಇದಕ್ಕೆ ರೈತನ ಶ್ರಮದ ಫಲವೇ ಮುಖ್ಯಕಾರಣ. ಏಕೆಂದರೆ ಉಪಹಾರ ಮತ್ತು ಊಟದಲ್ಲಿ ಬಳಸುವ ಪ್ರತಿಯೊಂದು ಪದಾರ್ಥದಲ್ಲಿಯೂ ರೈತನ ಶ್ರಮ ಅಡಗಿರುತ್ತದೆ. ಇಂತಹ ರೈತನಿಗೆ ನಾವೆಲ್ಲರೂ ಕೃತಜ್ಞರಾಗಿರಲೇಬೇಕು.

ನಮಗೆಲ್ಲರಿಗೂ ಇಂದು ಡಾಕ್ಟರ್, ಲಾಯರ್, ಎಂಜಿನಿಯರ್‌ಗಳು, ವ್ಯಾಪಾ ರಸ್ಥ, ಬ್ಯುಸಿನೆಸ್ ಮ್ಯಾನ್ ಮುಖ್ಯ ಎನಿಸು ತ್ತಾರೆ. ಆದರೆ ಇವರೆಲ್ಲರಿಗಿಂತಲೂ ಮೂರು ಹೊತ್ತು ಅನ್ನಕ್ಕೆ ಕಾರಣವಾಗಿರುವ ರೈತನ ನೆನಪು ಮಾತ್ರ ಬರುವುದಿಲ್ಲ. ಇವರೆಲ್ಲರಿಗಿಂತಲೂ ರೈತನೇ ಏಕೆ ಮಾತ್ರ ಮಹಾಶ್ರೇಷ್ಠ ಎಂಬುದಕ್ಕೆ ಇಲ್ಲೊಂದು ಚಿಕ್ಕ ಕತೆ ಹೇಳುತ್ತೇನೆ ಕೊನೆಯವರೆಗೆ ಓದಿ... ಒಂದು ಊರಲ್ಲಿ ಒಬ್ಬ ರಾಜನಿದ್ದನಂತೆ ಆತನಿಗೆ ತನ್ನ ಹುಟ್ಟಿದ ಹಬ್ಬದ ಸಂದರ್ಭದಲ್ಲಿ ರಾಜ್ಯದ ಅತ್ಯಂತ ಶ್ರೇಷ್ಠ ವ್ಯಕ್ತಿಯನ್ನು ಗೌರವಿಸ ಬೇಕೆಂದು ಅಂದುಕೊಂಡಿದ್ದ. ರಾಜನ ಕಾಲದಲ್ಲಿ ಸನ್ಮಾನವೆಂದರೆ ಕೇವಲ ಹೂಗುಚ್ಛ ನೀಡುವುದಲ್ಲ, ವಜ್ರ ವೈಡೂರ್ಯಗಳನ್ನು ಕೊಟ್ಟು ಸನ್ಮಾನಿಸಲಾಗುತ್ತಿತ್ತು. ಎಲ್ಲಾ ಮಂತ್ರಿಗಳನ್ನು ಕರೆದು ರಾಜ್ಯದ ಶ್ರೇಷ್ಠ ವ್ಯಕ್ತಿಯನ್ನು ಸನ್ಮಾನಿಸಬೇಕು ಎಂದು ಪ್ರಕಟಣೆ ಹೊರಡಿಸಿದ. ರಾಜನ ಪ್ರಕಟಣೆ ಕೇಳಿದ್ದೇ ತಡ ರಾಜ್ಯದಲ್ಲಿರುವ ವೈದ್ಯರು, ಎಂಜಿನಿಯರ್‌ಗಳು, ಸಮಾಜ ಸುಧಾರಕರು, ಕ್ರೀಡಾಪಟುಗಳು, ಸಂಗೀತಗಾರರು, ನೃತ್ಯಪಟುಗಳು, ವ್ಯಾಪಾರಸ್ಥರು, ಜ್ಯೋತಿಷಿಗಳು, ಪರ್ವತಾರೋಹಿಗಳು, ಉದ್ಯಮಿಗಳು, ವಕೀಲರು, ಪೊಲೀಸರು ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ರಾಜನ ಆಸ್ಥಾನಕ್ಕೆ ಬಂದು ತಾವು ತಾವೇಕೆ ಶ್ರೇಷ್ಠ ವ್ಯಕ್ತಿಗಳು ಎಂದು ವಿವರಿಸಿ ಹೋದರು. ಆದರೆ, ಅಷ್ಟರಲ್ಲಿ ಆಸ್ಥಾನದಲ್ಲಿ ಒಂದು ಘಟನೆ ನಡೆದಿತ್ತು. ಅದು ರಾಜ ಮತ್ತು ಮಂತ್ರಿಗಳ ಗಮನಕ್ಕೂ ಬಂದಿರಲಿಲ್ಲ. ಹೌದು ಮೈಯೆಲ್ಲಾ ಕೆಸರು ಮಯವಾಗಿರುವ, ತಲೆಗೆ ಶಾಲು ಸುತ್ತಿದ್ದ ವ್ಯಕ್ತಿಯೊಬ್ಬ ಓಡುತ್ತ ಬಂದು ರಾಜನ ಆಸ್ಥಾನಕ್ಕೆ ಪ್ರವೇಶ ಮಾಡಲು ಯತ್ನಿಸಿದ್ದ. ಮೈಯಲ್ಲಾ ಕೆಸರುಮಯ ಆಗಿದ್ದನ್ನು ನೋಡಿ ಬಾಗಿಲ ಕಾವಲುಗಾರರು ರಾಜನ ಆಸ್ಥಾನದಲ್ಲಿ ಪ್ರವೇಶ ಮಾಡಲು ಅವಕಾಶವನ್ನೇ ನೀಡಲಿಲ್ಲ. ಏ ಭಿಕ್ಷುಕ, ನೀನು ಒಳಗೆ ಹೋಗಲು ಸಾಧ್ಯವಿಲ್ಲ ಎಂದು ಆತನನ್ನು ತಡೆದುಬಿಟ್ಟರು.

ನಾನು ಭಿಕ್ಷುಕನಲ್ಲ, ರೈತ. ಈ ರಾಜ್ಯದ ಎಲ್ಲರಿಗೂ ಬೇಕಾಗುವ ಆಹಾರ ಧಾನ್ಯಗಳನ್ನು ಬೆಳೆದುಕೊಡುವವನು ಎಂದು ಎಷ್ಟೇ ಹೇಳಿದರೂ ಕಾವಲುಗಾರರು ಆತನನ್ನು ಒಳಕ್ಕೆ ಬಿಡಲೇ ಇಲ್ಲ. ಇದರಿಂದ ಬೇಸರಗೊಂಡ ಆ ರೈತ ಮನೆಗೆ ಹೋಗಿ ಮಲಗಿಬಿಟ್ಟ. ಮುಂದಿನ ವರ್ಷ ರಾಜನ ಹುಟ್ಟು ಹಬ್ಬ ಬಂತು. ಶ್ರೇಷ್ಠ ವ್ಯಕ್ತಿಯನ್ನು ಸನ್ಮಾನ ಮಾಡಲು ರಾಜ ಸಿದ್ಧನಾಗಿ ಕುಳಿತಿದ್ದ. ರಾಜನಿಗೆ ಯಾರ್ಯಾರು ಶ್ರೇಷ್ಠವೆಂದು ಅರ್ಜಿ ಹಾಕಿದ್ದರೋ ಅವರೆಲ್ಲರನ್ನು ಆಹ್ವಾನಿಸಿ ಎಂದು ಮಂತ್ರಿಗಳಿಗೆ ಹೇಳಿದ. ಆದರೆ, ಎಂಜಿನಿಯರ್, ವೈದ್ಯ, ಪರ್ವತಾರೋಹಿ, ವಿದ್ವಾಂಸ, ಈಜುಗಾರ, ಸಮಾಜ ಸುಧಾ ರಕ, ಕ್ರೀಡಾಸಾಧಕ, ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ಯಾರೂ ಆಸ್ಥಾನದತ್ತ ಸುಳಿಯಲೇ ಇಲ್ಲ. ಇದರಿಂದಾಗಿ ಆಶ್ಚರ್ಯಚಕಿತರಾದ ರಾಜ ತನ್ನ ಹುಟ್ಟುಹಬ್ಬಗ್ಗೆ ಒಬ್ಬರೂ ಬರಲಿಲ್ಲವೇ..? ಕೂಡಲೇ ರಾಜ ಮಂತ್ರಿಯನ್ನು ಕರೆದು ಏಕೆ ಯಾರೂ ಬಂದಿಲ್ಲ ಎಂದು ಕೇಳಿದ. ತಕ್ಷಣವೇ ಬೇಹುಗಾರರನ್ನು ಕಳುಹಿಸಿ ವಿಷಯ ತಿಳಿದು ಕೊಂಡು ಬರಲು ಕಳುಹಿಸಿದಾಗ ನಿಜವಾದ ಸಂಗತಿ ಗೊತ್ತಾಯಿತು. ಕಳೆದ ಬಾರಿ ರಾಜನ ಆಸ್ಥಾನ ಪ್ರವೇಶಿಸಲು ಸಾಧ್ಯವಾಗದ್ದ ರಿಂದ ರೈತ ಮನೆಯಲ್ಲಿಯೇ ಮಲಗಿಬಿಟ್ಟಿದ್ದ. ಆತ ಮಲಗಿದ್ದರಿಂದ ಈ ವರ್ಷ ಆಹಾರಧಾನ್ಯದ ಉತ್ಪಾದನೆಯೇ ಆಗಿರಲಿಲ್ಲ. ಆಹಾರ ಇಲ್ಲದ್ದರಿಂದ ತಾವೇ ಶ್ರೇಷ್ಠ ಅಂದುಕೊಂಡಿದ್ದ ಯಾವುದೇ ವ್ಯಕ್ತಿಗೂ ರಾಜನ ಆಸ್ಥಾನಕ್ಕೆ ಬರುವಷ್ಟು ಶಕ್ತಿಯೇ ಇರಲಿಲ್ಲ. ಈ ವಿಷಯ ರಾಜನಿಗೆ ಗೊತ್ತಾದ ತಕ್ಷಣವೇ ತನ್ನ ರಾಜ್ಯದಲ್ಲಿ ಅತ್ಯುತ್ತಮ ಶ್ರೇಷ್ಠ ವ್ಯಕ್ತಿ ಬೇರಾರು ಅಲ್ಲ, ರಾಜ್ಯಕ್ಕೆ ಅನ್ನ ಕೊಡುವ ವ್ಯಕ್ತಿಯೇ ಶ್ರೇಷ್ಠ, ಅವನೇ ಅನ್ನದಾತನೆಂದುಕೊಂಡು ನೇರವಾಗಿ ರೈತನ ಮನೆಗೆ ಹೋಗಿ ಆತನನ್ನು ಸತ್ಕರಿಸಿದ. ಜೊತೆಗೆ ಕಳೆದ ಬಾರಿ ರಾಜಭಟರು ಅರಮನೆಗೆ ಪ್ರವೇಶ ನಿರಾಕರಿಸಿ ದ್ದಕ್ಕಾಗಿ ಕ್ಷಮೆಯನ್ನೂ ಕೋರಿದ. ಅನ್ನದಾತನಿದ್ದರೆ ಮಾತ್ರ ಅರಮನೆ ಎನ್ನುವುದು ಆ ರಾಜನಿಗೆ ಅರ್ಥವಾಗಿತ್ತು. ಅನ್ನದಾತ ಮುನಿದರೆ ಯಾರೂ ಯಾವುದೇ ಸಾಧನೆ ಮಾಡುವುದು ಅಸಾಧ್ಯ ಎನ್ನುವುದೂ ಆತನಿಗೆ ಗೊತ್ತಾಯಿತು. ಕೃಷಿ ಹಾಗೂ ರೈತನ ಅಗತ್ಯತೆ ಸಮಾಜಕ್ಕೆ ಎಷ್ಟಿದೆ ಎಂಬುದು ಈ ಕತೆಯಿಂದಲೇ ನಮಗೆ ತಿಳಿಯುತ್ತದೆ. ನೇಗಿಲ ತುದಿಯೊಳಗಡಗಿದೆ ಕರ್ಮ, ನೇಗಿಲ ಮೇಲೆ ನಿಂತಿದೆ ಧರ್ಮ ಎನ್ನುವ ರಾಷ್ಟ್ರಕವಿ ಕುವೆಂಪು ಅವರ ಕವನದ ಸಾಲುಗಳು ವೇದಿಕೆಗಳ ಮೇಲೆ ರಾಜಕಾರಣಿಗಳ ಬಾಯಲ್ಲಿ ಹರಿದಾಡುತ್ತಿದ್ದರೂ ರೈತರು ಇಂದಿಗೂ ಸಹ ತನ್ನ ಬೆಳೆಗೆ ಬೆಲೆ ನಿಗದಿ ಮಾಡದ ಪರಿಸ್ಥಿತಿಯಲ್ಲಿದ್ದಾನೆ. ರೈತನಿಂದ ಖರೀದಿ ಮಾಡಿದ ವ್ಯಾಪಾರಸ್ಥರು ಆ ಬೆಳೆಗೆ ಬೆಲೆ ಕಟ್ಟಿ ಅದನ್ನೇ ದುಬಾರಿ ಬೆಲೆಗೆ ರೈತನಿಗೆ ಮಾರುತ್ತಿರುವುದು ದುರ್ದೈವದ ಸಂಗತಿ.



# ಅಡುಗೆ ಮಾಡಲು ಈ 5 ಬಗೆಯ ಎಣ್ಣೆಗಳನ್ನು ಬಳಸಿದರೆ ಕೊಲೆಸ್ಟ್ರಾಲ್ ಹೆಚ್ಚಾಗಲ್ಲ- ಹೃದಯಕ್ಕೂ ತೊಂದರೆ ಆಗಲ್ಲ!

ಜಿಡ್ಡಿನಾಂಶದ ಆಹಾರ ಪದಾರ್ಥಗಳನ್ನು, ಕಡಿಮೆ ಗುಣಮಟ್ಟದ ಎಣ್ಣೆಯಲ್ಲಿ ಕರಿದಿರುವ ಆಹಾರಗಳನ್ನು ಹೆಚ್ಚಾಗಿ ಸೇವನೆ ಮಾಡುವುದ ರಿಂದ, ದೇಹದಲ್ಲಿ ಕೆಟ್ಟ ಕೊಲೆಸ್ಟ್ರಾಲ್ ಹೆಚ್ಚಾಗುವ ಸಾಧ್ಯತೆ ಹೆಚ್ಚಿರುತ್ತದೆ ಎಂಬುದು ನಮಗೆಲ್ಲಾ ಗೊತ್ತೇ ಇದೆ. ಹಾಗಾಗಿ ನಾವು ಇದರಲ್ಲಿ ಬದಲಾವಣೆ ತಂದು ಕೊಂಡರೆ ನಮ್ಮ ದೇಹದ ಕೊಲೆಸ್ಟ್ರಾಲ್ ತಾನಾಗಿಯೇ ಕಡಿಮೆಯಾಗುತ್ತದೆ. ಇದರ ಜೊತೆಗೆ ದೇಹದಲ್ಲಿ ಕೊಲೆಸ್ಟ್ರಾಲ್ ಇದ್ದಕ್ಕಿದಂತೆ ಹೆಚ್ಚಾಗಲು, ಸಾಮಾನ್ಯವಾದ ಕಾರಣವೆಂದರೆ ಟ್ರಾನ್ಸ್ ಕೊಬ್ಬು ಮತ್ತು ಸಂತೃಪ್ತ ಕೊಬ್ಬಿನ ಆಹಾರಗಳ ಅತಿಯಾದ ಸೇವನೆ ಮಾಡುವುದು, ಉಳಿದಂತೆ ನಾವು ಅನುಸರಿಸುತ್ತಿರುವ ಜಡಜೀವನಶೈಲಿ, ಸ್ಥೂಲಕಾಯ, ಮದ್ಯಪಾನ ಧೂಮಪಾನ ಹಾಗೂ ಅನುವಂಶಿಕ ಕಾರಣಗಳಿಂದ ಎದುರಾಗಬಹುದು. ಇನ್ನು ಉಳಿದಂತೆ ಮಧುಮೇಹ, ಹೈಪೋಥೈರಾಯ್ಡಿಸಂ, ಲಿವರ್ ಸಮಸ್ಯೆ ಇರುವವರಿಗೆ, ಹೀಗೆ ಮೊದಲಾದ ಅನಾರೋಗ್ಯಗಳೂ ಅಧಿಕ ಕೊಲೆಸ್ಟ್ರಾಲ್ ಸಂಗ್ರಹಕ್ಕೆ ಕಾರಣವಾಗಬಹುದು.ಆದರೆ ಇತ್ತೀಚಿನ ದಿನಗಳಲ್ಲಿ ದೇಹದಲ್ಲಿ ಕೊಲೆಸ್ಟ್ರಾಲ್ ಹೆಚ್ಚಾಗಲು ಅಡುಗೆ ಎಣ್ಣೆಗಳು ಕೂಡ ಪರೋಕ್ಷವಾಗಿ ಕಾರಣವಾಗುತ್ತಿದೆ ಎಂದು ಹೇಳಲಾಗುತ್ತದೆ?



**ಆಲಿವ್ ಎಣ್ಣೆ:** ಆರೋಗ್ಯಕಾರಿ ಎಣ್ಣೆಗಳ ಪಟ್ಟಿಯಲ್ಲಿ ಆಲಿವ್ ಎಣ್ಣೆಯೂ ಕೂಡ ಮೊದಲ ಸ್ಥಾನದಲ್ಲಿ ಬರುತ್ತದೆ. ಬೆಲೆಯಲ್ಲಿ ದುಬಾರಿ ಎನ್ನುವ ಒಂದೇ ಕಾರಣ ಬಿಟ್ಟರೆ, ಜಾಗತಿಕ ಮಟ್ಟದಲ್ಲಿ ಇದನ್ನು ಆರೋಗ್ಯಕಾರಿ ಎಣ್ಣೆಯೆಂದು ಗುರುತಿಸಲಾಗಿದೆ. ಪ್ರಮುಖವಾಗಿ ಈ ಎಣ್ಣೆಯನ್ನು ಅಡುಗೆಯಲ್ಲಿ ಬಳಸುವುದರಿಂದ, ದೇಹದಲ್ಲಿಒಳ್ಳೆಯ ಕೊಲೆಸ್ಟ್ರಾಲ್ ಮಟ್ಟವನ್ನು ಹೆಚ್ಚಿಸುವ, ಕೆಟ್ಟಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಿಸುತ್ತಾ ಹೃದಯದ ಆರೋಗ್ಯವನ್ನು ಕಾಪಾಡುವಲ್ಲಿಯೂ ಮಹತ್ತರ ಪಾತ್ರ ವಹಿಸುತ್ತದೆ.



**ಕಡಲೆಕಾಯಿ ಎಣ್ಣೆ:** ಕಡಲೆಕಾಯಿ ಎಣ್ಣೆ ಕೂಡ ಅಷ್ಟೇ ಆರೋಗ್ಯಕ್ಕೆ ತುಂಬಾನೇ ಒಳ್ಳೆಯದು ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ ಈ ಎಣ್ಣೆಯನ್ನು ಕೂಡ ಅಡುಗೆಗೆ ಬಳಸುವುದರಿಂದ, ದೇಹದಲ್ಲಿ ಒಳ್ಳೆಯ ಕೊಲೆಸ್ಟ್ರಾಲ್ ಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ಕೆಟ್ಟ ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಿಸುತ್ತಾ ಹೃದಯದ ಆರೋಗ್ಯವನ್ನು ಕಾಪಾಡುವಲ್ಲಿಯೂ ಮಹತ್ತರ ಪಾತ್ರವಹಿಸುತ್ತದೆ.

**ಕೋಲ್ಡ್‌ಪ್ರೆಸ್ ಮಾಡಿರುವ ಸಾಸಿವೆ ಎಣ್ಣೆ:** ಕೋಲ್ಡ್‌ಪ್ರೆಸ್ ಮಾಡಿರುವ ಸಾಸಿವೆ ಎಣ್ಣೆಯಲ್ಲಿ ಅಧಿಕ ಪ್ರಮಾಣದ ಮೊನೊ ಸಾಚುರೇಟೆಡ್ ಕೊಬ್ಬಿನಾಮ್ಲಗಳು ಉನ್ನತ ಪ್ರಮಾಣದಲ್ಲಿ ಕಂಡು ಬರುತ್ತದೆ ಜೊತೆಗೆ ಒಮೆಗಾ 3 ಫ್ಯಾಟಿ ಆಸಿಡ್ ಅಂಶ ಕೂಡ ಈ ಎಣ್ಣೆಯಲ್ಲಿ ಅಧಿಕಪ್ರಮಾಣದಲ್ಲಿ ಕಂಡು ಬರುವುದರಿಂದ, ದೇಹದಲ್ಲಿ ಕೆಟ್ಟ ಕೊಲೆ ಸ್ಟ್ರಾಲ್ ಮಟ್ಟವನ್ನು ನಿಯಂತ್ರಣ ಮಾಡಿ, ಹೃದಯದ ಆರೋಗ್ಯವನ್ನು ಕಾಪಾಡಲು ನೆರವಾಗುತ್ತದೆ.



**ಚಿಯಾ ಬೀಜಗಳ ಎಣ್ಣೆ :** ಚಿಯಾ ಬೀಜಗಳ ಆರೋಗ್ಯ ಪ್ರಯೋಜನಗಳ ಬಗ್ಗೆ ನಮಗೆಲ್ಲಾ ಗೊತ್ತೇ ಇದೆ. ಇದರ ಎಣ್ಣೆ ಕೂಡ ಅಷ್ಟೇ ಪ್ರಯೋಜನಕಾರಿ ಎನ್ನುತ್ತಾರೆ ತಜ್ಞರು! ಪ್ರಮುಖ ವಾಗಿ ಈ ಎಣ್ಣೆಯನ್ನು ಆಹಾರಪದ್ಧತಿಯಲ್ಲಿ ಸೇರಿಸಿಕೊಳ್ಳುವುದರಿಂದ ಕೆಟ್ಟ ಕೊಲೆಸ್ಟ್ರಾಲ್ ಪ್ರಮಾಣ ಸಾಕಷ್ಟು ಕಡಿಮೆಯಾಗುವುದರ ಜೊತೆಗೆ ಹೃದಯ ಆರೋಗ್ಯ ಸಮಸ್ಯೆಗಳು ಕೂಡ ನಮ್ಮಿಂದ ದೂರವಾಗುತ್ತದೆ ಎನ್ನಲಾಗುತ್ತದೆ. ಇದಕ್ಕೆ ಪ್ರಮುಖ ಕಾರಣ ಈ ಎಣ್ಣೆಯಲ್ಲಿ ಕಂಡು ಬರುವ ಆಲ್ಫಾ ಲಿನೋಲ್ನಿಕ್ ಆಮ್ಲ ಮತ್ತು ಹೃದಯಕ್ಕೆ ಸಹಕಾರಿ ಆದ ಒಮೆಗಾ 3 ಫ್ಯಾಟಿ ಆಮ್ಲಗಳು ಅಧಿಕ ಪ್ರಮಾಣದಲ್ಲಿ ಸಿಗುತ್ತದೆ.

**ಆವಕಾಡೊ ಎಣ್ಣೆ:** ಆವಕಾಡೊ ಹಣ್ಣಿನ ಪ್ರಯೋಜನಗಳ ಬಗ್ಗೆ ನಾವು ಹಲವಾರು ಬಾರಿ ನಮ್ಮ ಹಿಂದಿನ ಲೇಖನದಲ್ಲಿ ನೀಡಿದ್ದೇವೆ, ಈಗ ಈ ಹಣ್ಣಿನ ಎಣ್ಣೆಯ ಸರದಿ ಮಾರುಕಟ್ಟೆಯಲ್ಲಿ ಈ ಹಣ್ಣು ಸ್ವಲ್ಪ ದುಬಾರಿ ಆದರೂ ದೇಹದ ಕೊಲೆ ಸ್ಟ್ರಾಲ್ ಕಡಿಮೆ ಮಾಡಿ, ಹೃದಯದ ಆರೋಗ್ಯ ಕಾಪಾಡುವಲ್ಲಿ ಈ ಹಣ್ಣು ತುಂಬಾನೇ ಉಪಕಾರಿ. ಪ್ರಮುಖವಾಗಿ ಈ ಎಣ್ಣೆಯಲ್ಲ ಆಂಟಿ ಇನ್ಫ್ಲಮೆಟರಿ, ಆಂಟಿ ಆಕ್ಸಿಡೆಂಟ್ ಮತ್ತು ಹೃದಯಕ್ಕೆ ಸಂಬಂಧಪಟ್ಟ ಅದ್ಭುತವಾದ ಗುಣ ಲಕ್ಷಣಗಳನ್ನು ಒಳಗೊಂಡಿದೆ. ಹೀಗಾಗಿ ಅಡುಗೆಯಲ್ಲಿ ಈ ಎಣ್ಣೆಯನ್ನು ಬಳಸುವುದರಿಂದ, ದೇಹದಲ್ಲಿ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆಯಾಗಿ, ಹೃದಯದ ಆರೋಗ್ಯವು ಕೂಡ ಚೆನ್ನಾಗಿರುತ್ತದೆ.



# ಬೇಸಿಗೆಯಲ್ಲಿ ಹೆಣ್ಮಕ್ಕಳು ಈ ಬಗ್ಗೆ ಹೆಚ್ಚಿನ ಗಮನಹರಿಸಲೇ ಬೇಕು

ಈಗಾಗಲೇ ಬೇಸಿಗೆ ಕಾಲ ಆರಂಭವಾಗಿದೆ, ಈ ಋತುವಿನ ಒಂದಲ್ಲಾ ಒಂದು ರೀತಿಯ ಚರ್ಮಕ್ಕೆ ಸಂಬಂಧಿಸಿದ ಸಮಸ್ಯೆಗಳು ಕಾಡಲಾರಂಭಿಸುತ್ತವೆ. ಈ ಋತುವಿನಲ್ಲಿ ಜನರು ತಮ್ಮ ಚರ್ಮದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು. ಬೇಸಿಗೆಯಲ್ಲಿ, ಶಾಖದ ದದ್ದು, ಶಿಲೀಂಧ್ರ ಸೋಂಕು, ಚರ್ಮದ ದದ್ದು ಮತ್ತು ತುರಿಕೆ ಮುಂತಾದ ಸಮಸ್ಯೆಗಳು ಉಂಟಾಗುತ್ತವೆ. ಜನರು ತಮ್ಮ ಚರ್ಮದ ಆರೈಕೆಗಾಗಿ ನಾನಾ ರೀತಿಯ ಮನೆಮದ್ದು, ಬ್ಯೂಟಿ ಟಿಪ್ಸ್ ಗಳನ್ನು ಅನುಸರಿಸುತ್ತಿದ್ದರೂ, ಈ ಋತುವಿನಲ್ಲಿ ಇನ್ನೂ ಅನೇಕ ಜನರು ಚರ್ಮಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸಲು ಪ್ರಾರಂಭಿಸುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ, ಕೆಲವು ಪ್ರಮುಖ ವಿಷಯಗಳ ಕಡೆಗೆ ಗಮನ ಕೊಡುವುದು ಮುಖ್ಯ. ಈ ಮೂಲಕ ಬೇಸಿಗೆಯಲ್ಲಿಯೂ ಸಹ ನಿಮ್ಮ ಚರ್ಮವನ್ನು ಆರೋಗ್ಯಕರವಾಗಿ, ಹೊಳೆಯುವಂತೆ ಇರಿಸಬಹುದು.

**ಚರ್ಮದ ಆರೈಕೆ:** ಆರೋಗ್ಯಕರ ಚರ್ಮಕ್ಕೆ ಸರಿಯಾದ ಚರ್ಮದ ಆರೈಕೆ ಅತ್ಯಂತ ಮುಖ್ಯ. ಬೇಸಿಗೆಯಲ್ಲಿ ಸರಿಯಾದ ಚರ್ಮದ ಆರೈಕೆಯನ್ನು ಕೆಲವೇ ಹಂತಗಳಲ್ಲಿ ಮಾಡಬಹುದು. ಮೊದಲನೆಯದಾಗಿ ನಿಮ್ಮ ಮುಖವನ್ನು ಉತ್ತಮ ಕ್ಲೆನ್ಸರ್ ನಿಂದ ಸ್ವಚ್ಛಗೊಳಿಸಿ ನಂತರ ನಿಮ್ಮ ಮುಖವನ್ನು ತೊಳೆಯಿರಿ. ಈಗ ನೀವು ಬೇಸಿಗೆಯಲ್ಲಿ ನಿಮ್ಮ ಚರ್ಮವನ್ನು ಹೈಡ್ರೇಟ್ ಆಗಿಡಲು ಮಾಯಿಶ್ಚರೈಸರ್ ಬಳಸಬೇಕು. ಅದಕ್ಕಾಗಿ ಬೇಸಿಗೆಯಲ್ಲಿ ಹಗುರವಾದ ಮತ್ತು ಎಣ್ಣೆ ರಹಿತ ಮಾಯಿಶ್ಚರೈಸರ್‌ಗಳು ಉತ್ತಮ.



**ಮಾಯಿಶ್ಚರೈಸರ್ ಹಾಗೂ ಸನ್‌ಸ್ಕ್ರೀನ್:** ಹುಡುಗಿಯಾಗಲಿ ಅಥವಾ ಹುಡುಗರಾಗಲಿ, ಬೇಸಿಗೆಯಲ್ಲಿ ಕ್ಲೆನ್ಸರ್ ಮತ್ತು ಮಾಯಿಶ್ಚರೈಸರ್ ಬಳಸಬೇಕು, ಆದರೆ ಇವೆರಡನ್ನು ಮಾತ್ರ ಬಳಸುವುದು ಚರ್ಮದ ಆರೈಕೆಯ ಸರಿಯಾದ ಮಾರ್ಗವಲ್ಲ. ಸರಿಯಾದ ಚರ್ಮದ ಆರೈಕೆಗಾಗಿ ಬೇಸಿಗೆಯಲ್ಲಿ ಸೂರ್ಯನ ಬೆಳಕಿನಿಂದ ಚರ್ಮವನ್ನು ರಕ್ಷಿಸಲು ಸನ್‌ಸ್ಕ್ರೀನ್ ಬಳಸುವುದು ಬಹಳ ಮುಖ್ಯ. ಪ್ರತಿದಿನ ಬಿಸಿಲಿಗೆ ಹೋಗುವ ಮೊದಲು, ಕನಿಷ್ಠ 30 SPFಇರುವ ಸನ್‌ಸ್ಕ್ರೀನ್ ಬಳಸುವುದನ್ನು ಮರೆಯದಿರಿ.

**ಚರ್ಮವನ್ನು ಹೈಡ್ರೇಟ್ ಆಗಿರಿಸಿ:** ಬೇಸಿಗೆಯಲ್ಲಿ ಆರೋಗ್ಯಕರ ಚರ್ಮಕ್ಕಾಗಿ, ಸರಿಯಾದ ಆಹಾರವನ್ನು ತೆಗೆದುಕೊಳ್ಳುವುದು ಮತ್ತು ನಿಮ್ಮನ್ನು ಹೈಡ್ರೀಕರಿಸಿಕೊಳ್ಳುವುದು ಬಹಳ ಮುಖ್ಯ. ಈ ಋತುವಿನಲ್ಲಿ ಸಾಧ್ಯವಾದಷ್ಟು ನೀರು ಕುಡಿಯುವುದು ಅತಿ ಮುಖ್ಯ. ಇದರೊಂದಿಗೆ, ಹಣ್ಣುಗಳನ್ನು ತಿನ್ನುವುದು, ಮಜ್ಜಿಗೆ, ಮೊಸರು ಮತ್ತು ಸಲಾಡ್‌ನಂತಹ ಸರಿಯಾದ ಆಹಾರವನ್ನು ನಿಮ್ಮ ಆಹಾರದಲ್ಲಿ ಸೇರಿಸಿಕೊಳ್ಳಿ. ನೀವು ಎಳ ನೀರು, ಹಣ್ಣಿನ ಜ್ಯೂಸ್, ನಿಂಬೆ ಜ್ಯೂಸ್‌ನಂತಹ ಹೈಡ್ರೇಟಿಂಗ್ ಪಾನೀಯಗಳನ್ನು ಸಹ ಕುಡಿಯಬಹುದು. ಇವು ನಿಮ್ಮ ಚರ್ಮವನ್ನು ಒಳಗಿನಿಂದ ರಕ್ಷಿಸುತ್ತದೆ.




**ಮುಖವನ್ನು ಎಫ್ಫೋಲಿಯೇಟ್ ಮಾಡಿ:** ಶಾಖವು ಚರ್ಮವನ್ನು ಹಾನಿಗೊಳಿಸುತ್ತದೆ. ಆದ್ದರಿಂದ ಬೇಸಿಗೆಯಲ್ಲಿ ವಾರಕ್ಕೆ ಕನಿಷ್ಠ 1, 2 ಬಾರಿ ನಿಮ್ಮ ಮುಖವನ್ನು ಎಫ್ಫೋಲಿಯೇಟ್ ಮಾಡಿ. ಇದು ಚರ್ಮದಿಂದ ಸತ್ತ ಜೀವಕೋಶಗಳನ್ನು ತೆಗೆದುಹಾಕುತ್ತದೆ, ಚರ್ಮವನ್ನು ಹೊಳೆಯುವಂತೆ ಮಾಡುತ್ತದೆ. ಆದರೆ ನೀವು ಸೂರ್ಯನ ಬೆಳಕಿಗೆ ಹೋಗುವಾಗ ಚರ್ಮದ ಸಿಪ್ಪೆ ಸುಲಿಯುವುದನ್ನು ತಪ್ಪಿಸುವುದು ಮುಖ್ಯ. ಇದರೊಂದಿಗೆ, ಚರ್ಮದ ಮೇಲೆ ಏನನ್ನೂ ಬಳಸುವ ಮೊದಲು ನಿಮ್ಮ ಚರ್ಮದ ಪ್ರಕಾರವನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಸೂಕ್ತವಾದುದನ್ನೇ ಬಳಸಿ.

**ನೈರ್ಮಲ್ಯ ಕಾಪಾಡಿ:** ಬೇಸಿಗೆಯಲ್ಲಿ ನಿಮ್ಮ ನೈರ್ಮಲ್ಯದ ಬಗ್ಗೆ ನೀವು ವಿಶೇಷ ಕಾಳಜಿ ವಹಿಸಬೇಕು. ಬೇಸಿಗೆಯಲ್ಲಿ, ಬೆವರು, ಕೊಳಕಿನಿಂದಾಗಿ ದೇಹದ ಅಲರ್ಜಿಗಳು ಉಲ್ಬಣಗೊಳ್ಳುತ್ತವೆ. ಆದ್ದರಿಂದ ನಿಮ್ಮ ದೇಹ ಮತ್ತು ನೆತ್ತಿಯನ್ನು ಸರಿಯಾಗಿ ಸ್ವಚ್ಛಗೊಳಿಸುವುದು ಅವಶ್ಯಕ.

## ಸೇವೆಯಲ್ಲಿ ಸಾರ್ಥಕತೆ ಎಂಬ ಶೀರ್ಷಿಕೆಯಲ್ಲಿ ಆಯೋಜಿಸಲಾಗಿದ್ದ ಪ್ರಾಂತೀಯ ಸಮ್ಮೇಳನವನ್ನು ಉದ್ಘಾಟಿಸಿದ ಖ್ಯಾತ ಲೇಖಕರು, ಸಾಹಿತಿಗಳಾದ ಹಿರೇಮಗಳೂರು ಶ್ರೀ ಕಣ್ಣನ್

# ಸೌಂದರ್ಯಕ್ಕಿಂತ ದೇಶದ ಅಭಿವೃದ್ಧಿಯ ಕಡೆಗೆ ಮನಸ್ಸು ಮಾಡಬೇಕು

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಮನುಷ್ಯನಾದವನು ದೇಹದ ಸೌಂದರ್ಯಕ್ಕಿಂತ ದೇಶದ ಅಭಿವೃದ್ಧಿಯ ಕಡೆಗೆ ಮನಸ್ಸು ಮಾಡಬೇಕು ಎಂದು ಖ್ಯಾತ ಲೇಖಕರು, ಸಾಹಿತಿಗಳಾದ ಹಿರೇಮಗಳೂರು ಶ್ರೀ ಕಣ್ಣನ್ ಹೇಳಿದರು. ಲಯನ್ಸ್ ಇಂಟರ್ನ್ಯಾಷನಲ್ ಜಿಲ್ಲೆ 317ಎ ವತಿಯಿಂದ ಪ್ರಾಂತೀಯ 2ರ ಅಧ್ಯಕ್ಷರಾದ ಲಯನ್ ಎಸ್ ಮನೋಜ್ ಕುಮಾರ್ ರವರ ಅಧ್ಯಕ್ಷತೆಯಲ್ಲಿ ಸೇವೆಯಲ್ಲಿ ಸಾರ್ಥಕತೆ ಎಂಬ ಶೀರ್ಷಿಕೆಯಲ್ಲಿ ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣ ಭವನದಲ್ಲಿ ಆಯೋಜಿಸಲಾಗಿದ್ದ ಲಯನ್ಸ್ ಪ್ರಾಂತೀಯ 2ರ ಪ್ರಾಂತೀಯ ಸಮ್ಮೇಳನವನ್ನು ಖ್ಯಾತ ಲೇಖಕರು ಹಾಗೂ ಸಾಹಿತಿಗಳಾದ ಹಿರೇಮಗಳೂರು ಶ್ರೀ ಕಣ್ಣನ್, ಹರಟೆ ಮಲ್ಲಿ ಖ್ಯಾತಿಯ ಶ್ರೀಮತಿ ನಾಗ ಶ್ರೀತ್ಯಾಗರಾಜ್ ರವರು ಉದ್ಘಾಟಿಸಿದರು.

ಕಾರ್ಯಕ್ರಮದ ಕುರಿತು ಹಿರೇಮಗಳೂರು ಶ್ರೀ ಕಣ್ಣನ್ ರವರು ಮಾತನಾಡಿ, ದೇಹ ಎಷ್ಟು ಮುಖ್ಯವೋ ದೇಶವು ಅಷ್ಟೇ ಮುಖ್ಯ ಆ ದೃಷ್ಟಿಯಲ್ಲಿ ನಮ್ಮ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿ ದೇಶ ಚಿಂತನೆಯ ಮೂಲಕ ದೈಹಿಕವಾಗಿ, ಮಾನಸಿಕವಾಗಿ ಆರೋಗ್ಯವಾಗಿದ್ದರೆ ಆಗ ಪ್ರಜಾಪ್ರಭುತ್ವದ ಉಳಿವು ಸಾಧ್ಯ. ಇಂಥ ದೇಶ ಪ್ರೇಮವನ್ನು ಎಲ್ಲರೂ ಅಳವಡಿಸಿಕೊಂಡಿದ್ದಲ್ಲಿ ನಮ್ಮ ದೇಶ, ನಮ್ಮ ಸಮಾಜ, ನಮ್ಮ ಸಂಸ್ಕೃತಿ ದಿಗ್ ದಿಗಂತದ ಎತ್ತರಕ್ಕೆ ಏರಲು ಸಾಧ್ಯವಾಗುತ್ತದೆ ಅಲ್ಪ ಮಾನವರಾಗದೆ ವಿಶ್ವ ಮಾನವರಾಗುವ ಪ್ರಯತ್ನವನ್ನು ನಾವು ಮಾಡಬೇಕು ಎಂದರು.

**ದೇಹ ಎಷ್ಟು ಮುಖ್ಯವೋ ದೇಶವು ಅಷ್ಟೇ ಮುಖ್ಯ**

ಬಳಿಕ ಲಯನ್ ಎಸ್ ಮನೋಜ್ ಕುಮಾರ್ ಅವರು ಮಾತನಾಡಿ ಸೇವೆಯನ್ನು ಆತ್ಮ ತೃಪ್ತಿ ಮತ್ತು ಮನಃಸಂತೋಷಕ್ಕಾಗಿ ಮಾಡುತ್ತೇವೆ. ಲಯನ್ಸ್ ಕ್ಲಬ್ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದವರ ಸೇವೆಯ ಜೊತೆಗೆ ಬಡ ವಿದ್ಯಾರ್ಥಿ, ರೋಗಿಗಳಿಗೆ ಸಹಾಯ ಮಾಡುತ್ತದೆ. ಆ ಮೂಲಕ ನಿಸ್ವಾರ್ಥ ದೃಷ್ಟಿಯಿಂದ ಮಾಡುವುದೇ ನಿಜವಾದ ಸಮಾಜ ಸೇವೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದಲೇ ಸೇವೆ ಯಲ್ಲಿ ಸಾರ್ಥಕತೆ ಎಂಬ ಶೀರ್ಷಿಕೆಯಲ್ಲಿ ಈ ಸಮ್ಮೇಳ ನವನ್ನು ಆಯೋಜಿಸಲಾಗಿದೆ ಈ ಕಾರ್ಯಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು ಅರ್ಪಿಸುತ್ತೇನೆ ಎಂದರು.

ಸೇವಾ ಚಟುವಟಿಕೆಯಾಗಿ ವಿದ್ಯಾರ್ಥಿಗಳಿಗೆ ಮೂರು ಲ್ಯಾಪ್ಟಾಪ್, ಎರಡು ಹೊಲಿಗೆ ಯಂತ್ರ, ನರ್ಸರಿ ಯಿಂದ ಏಳನೇ ತರಗತಿಯ ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸೂರ್ಯ ಕಿರಣ ಫೌಂಡೇಶನ್ 25000, 10 ಶ್ರವಣೋಪಕರಣ ಗಳನ್ನು ಕೊಡುಗೆಯಾಗಿ ನೀಡಲಾಯಿತು.

ಈ ವೇಳೆ ಸೇವೆಯಲ್ಲಿ ಸಾರ್ಥಕತೆ ಎಂಬ ವಿಷಯದ ಕುರಿತು ಹಿರೇಮಗಳೂರು ಶ್ರೀ ಕಣ್ಣನ್, ಶ್ರೀಮತಿ ನಾಗಶ್ರೀ ತ್ಯಾಗರಾಜ್ ರವರು ಹಾಸ್ಯ ಚಟಾಕಿಯ ಮೂಲಕ ಉಪನ್ಯಾಸ ನೀಡಿದರು.

**ಲಯನ್ಸ್ ಸಂಸ್ಥೆಯ ಮೂಲಕ ಈ ಕಾರ್ಯಕ್ರಮದ ರೂವಾರಿ ಮನೋಜ್ ಕುಮಾರ್‌ರವರು ಇಂತಹ ಒಳ್ಳೆಯ ಚಿಂತನೆಯಲ್ಲಿ ಅದ್ಭುತವಾದ ಕಾರ್ಯಕ್ರಮವನ್ನು ಆಯೋಜಿಸಿ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕವಾಗಿ ಅವರು ಇಂದು ತೋರಿಸಿ ಕೊಟ್ಟಂತಹ ಹಾದಿ ಎಲ್ಲರಿಗೂ ಆದರ್ಶವಾಗಲಿ ಎಂಬುದೇ ಪೂಜಾರಪ್ಪನ ಅಂತರಂಗದ ಕಳಕಳಿ**

**-ಹಿರೇಮಗಳೂರು ಶ್ರೀ ಕಣ್ಣನ್**

ಲಯನ್ಸ್ ಇಂಟರ್ನ್ಯಾಷನಲ್ ಜಿಲ್ಲೆ 317ಎ ಜಿಲ್ಲಾ ರಾಜ್ಯಪಾಲರಾದ ಎನ್ ಮೋಹನ್ ಕುಮಾರ್, ಪ್ರಾಂತಿಯ 2ರ ಅಧ್ಯಕ್ಷರಾದ ಎಸ್ ಮನೋಜ್ ಕುಮಾರ್, ಲಯನ್ ಅಜಂತಾ ಎಸ್ ರಂಗಸ್ವಾಮಿ, ಲಯನ್ ಜಿ ಪಿ ದಿವಾಕರ್, ಶಿವನಂಜಯ, ರಾಮಕೃಷ್ಣಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ನಾಯಿಗಳು ಕಡಿತದಿಂದ ಅನೇಕ ಮಕ್ಕಳಲ್ಲಿ ಭಯ: ಕಡಿವಾಣಕ್ಕೆ ಪುರಸಭೆ ವಿಫಲ

• ಉದಯವಾಹಿನಿ, ಚಿಂಚೋಳಿ

ಅವಳಿ ಪಟ್ಟಣಗಳಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಅನೇಕ ಮಕ್ಕಳಿಗೆ ಹಿರಿಯರಿಗೆ ಕಚ್ಚುತ್ತಿರುವುದರಿಂದ ಸರ್ಕಾರಿ ಆಸ್ಪತ್ರೆಯಲ್ಲಿ ಅನೇಕರು ಚಿಕಿತ್ಸೆ ಪಡೆದುಕೊಂಡಿದ್ದಾರೆ ಆದರೆ ನಾಯಿಗಳು ಕಡಿವಾಣ ಹಾಕುವಲ್ಲಿ ಸಂಪೂರ್ಣವಾಗಿ ಪುರಸಭೆ ವಿಫಲವಾಗಿದೆ ಎಂದು ಸಮಾಜ ಸೇವಕ ಕೆ.ಎಂ ಬಾರಿ ತಿಳಿಸಿದ್ದಾರೆ.

ಪಟ್ಟಣದಲ್ಲಿ ಪ್ರತಿಯೊಂದು ವಾರ್ಡ್‌ಗಳಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಅನೇಕ ಬಾರಿ ಪುರಸಭೆ ಮುಖ್ಯಾಧಿಕಾರಿಗಳಿಗೆ ಮೌಖಿಕವಾಗಿ ಹೇಳಿದರೂ ಯಾವುದೇ ಕ್ರಮಕೈಗೊಳ್ಳದೆ ನಾಮಕೆವಾಸ್ತೆ ನಾಯಿಗಳ ಕಡಿವಾಣ ಹಾಕುತ್ತೇವೆಂದು ಬರೀ ಆಶ್ವಾಸನೆ ನೀಡುತ್ತಾ ಬರುತ್ತಿದ್ದಾರೆ ಆದರೆ ಕೆಲಸ ಮಾಡುವುದು ಶೂನ್ಯವಾಗಿದೆ.

ಪಟ್ಟಣದ ಬಡಿದರ್ಗಾ, ಬೈರ್ ಗಲ್ಲಿ, ಕುರುಬರ ಗಲ್ಲಿ, ಛೋಟಿ ದರ್ಗಾ, ಗಡಿ ಏರಿಯಾ, ಹರಿಜನವಾಡ ಸೇರಿದಂತೆ ಚಂದಾಪೂರದ ಪಟೆಲ ಕಾಲೋನಿ, ಮದೀನಾ ಕಾಲೋನಿ, ರಾಮನಗರ, ಬೆಳ್ಳಿ ಬೆಳಕು ವಾರ್ಡ್‌ಗಳಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಮಕ್ಕಳು ಹಿರಿಯರು ಮನೆ ಹೊರಗೆ ಬರಲು ಭಯಪಡುತ್ತಿದ್ದಾರೆ ಕಳೆದ 15 ದಿನಗಳ ಒಳಗೆ 10ಕ್ಕೂ ಹೆಚ್ಚು ಜನರಿಗೆ ನಾಯಿಗಳು ಕಚ್ಚಿದ್ದು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ಎಎಂಓ ಡಾ.ಸಂತೋಷ ಪಾಟೀಲ್ ತಿಳಿಸಿದ್ದಾರೆ ಆದರೆ ಅನೇಕ ಬಾರಿ ಪುರಸಭೆ ಅಧಿಕಾರಿಗಳಿಗೆ ಮಾಹಿತಿ ನೀಡಿದರೂ ಗಾಢ ನಿದ್ರೆಯಲ್ಲಿದ್ದಾರೆ ಎಂದು ಪ್ರೇಮ್ ಕಟ್ಟಿ ಚಂದಾಪೂರ ಆಕ್ರೋಶ ವ್ಯಕ್ತಪಡಿಸಿದರು. ಅವಳಿ ಪಟ್ಟಣದ ಹೆಚ್ಚಾದ ನಾಯಿಗಳ ಹಾವಳಿಯನ್ನು ತಡೆಗಟ್ಟಬೇಕು ಇಲ್ಲಾದಿದ್ದರೆ ಮಾದಿಗ ದಂಡೋರ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ಪುರಸಭೆ ಕಛೇರಿಗೆ ಬೀಗ ಜಡೆದು ಪ್ರತಿಭಟನೆ ಮಾಡಲಾಗುವುದು ಎಂದು ಅಧ್ಯಕ್ಷ ಪ್ರೇಮ ಕಟ್ಟಿ ತಿಳಿಸಿದ್ದಾರೆ.


☛ ಉದಯವಾಹಿನಿ ಚಿತ್ರ


☛ ಉದಯವಾಹಿನಿ ಚಿತ್ರ

## ಅಂಬೇಡ್ಕರ್ ಬರೆದ ಸಂವಿಧಾನದಿಂದ ಸರ್ವಜನಾಂಗಕ್ಕೆ ನ್ಯಾಯ ದೊರಕಿದೆ: ಗೌತಮ್ ಬೋಮ್ನಳ್ಳಿ

# ಅಂಬೇಡ್ಕರ್ ಜನ್ಮದಿನವನ್ನು ವಿಶ್ವಸಂಸ್ಥೆಯು ವಿಶ್ವಜ್ಞಾನ ದಿನಾಚರಣೆಯಾಗಿ ಘೋಷಿಸಿದೆ

• ಉದಯವಾಹಿನಿ, ಚಿಂಚೋಳಿ

ಡಾ.ಬಿ.ಆರ್.ಅಂಬೇಡ್ಕರ್ 1891ರಲ್ಲಿ ಹುಟ್ಟಿ ಅನೇಕ ಕಷ್ಟದುಃಖಗಳು ಅನುಭವಿಸಿ ಅಂತರಾಷ್ಟ್ರೀಯಕ್ಕೆ ಹೋಗಿ ಉನ್ನತ ಮಟ್ಟದ ಶಿಕ್ಷಣ ಪಡೆದು ಸಾಮಾಜಿಕ ಸಮಾನತೆ ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಟ ಮಾಡಿ, ಸರ್ವ ಜನಾಂಗಕ್ಕೆ ಸಮಾನತೆ ಹಕ್ಕನ್ನು ನೀಡಲು ಅಂಬೇಡ್ಕರ್ ವಿಶ್ವದಲ್ಲಿಯೆ ಅತ್ಯಂತ ದೊಡ್ಡ ಸಂವಿಧಾನ ಭಾರತದ ಸಂವಿಧಾನವನ್ನು ಬರೆದರು ಎಂದು ಸಮಾಜದ ಮುಖಂಡ ಗೌತಮ್ ಬೋಮ್ನಳ್ಳಿ ಹೇಳಿದರು.

ಪಟ್ಟಣದಲ್ಲಿ ತಾಲ್ಲೂಕಾಡಳಿತ, ತಾಪಂ. ಸಮಾಜ ಕಲ್ಯಾಣ, ಪುರಸಭೆ ವತಿಯಿಂದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರ 134ನೇ ಜಯಂತ್ಯೋತ್ಸವದ ವೇದಿಕೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, ಸ್ವಾತಂತ್ರ್ಯ ಪೂರ್ವ ಜಾತೀಯಾತತೆ ಅಸಮಾನತೆ ದೇಶದಲ್ಲಿ ತುಂಬಿತುಳುಕುತ್ತಿತ್ತು ವರ್ಣಸಮಾ ಪದ್ಧತಿ ಜಾರಿಯಲ್ಲಿತ್ತು, ಗುಡಿಗೋಪುರದಲ್ಲಿ ಶೂದ್ರರಿಗೆ ಅವಕಾಶವಿಲ್ಲವೆಂದು ಬರೆಯಲಾಗುತ್ತಿತ್ತು, ಆದರೆ ದಲಿತರು ಗುಡಿಗಳಲ್ಲಿ ಹೋಗುತ್ತಿರಲಿಲ್ಲ, ಶೂದ್ರರು ಎಂದರೆ ಆಗಿನ ಕಾಲದಲ್ಲಿ ಓಬಿಸಿ ಜನರಿಗೆ ಶೂದ್ರರು ಹೇಳಲಾಗುತ್ತಿತ್ತು, ಸಾರ್ವಜನಿಕ ಎಂಬ ಪದವನ್ನು ಅಂಬೇಡ್ಕರ್ ಸಂವಿಧಾನ ಮೂಲಕ ಕೊಟ್ಟಿದ್ದರು ಸರ್ವರಿಗೂ ಸಮಾನತೆ ಹಕ್ಕು ಸಿಗಲು ಸಾರ್ವಜನಿಕ ಶಿಕ್ಷಣ ಇಲಾಖೆ, ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಹೀಗೆ ಜನರಿಗೆ ಸಮಾನತೆ ಹಕ್ಕು ಅಂಬೇಡ್ಕರ್ ನೀಡಿದರು.

**ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಟ**

1841ತನಕ ಕಗ್ಗತ್ತಲ್ಲಿದ ದೇಶದಲ್ಲಿ ಅಸಯ ಸೂಚಕವಿರುವ ಹೆಸರು ಇಟ್ಟುಕೊಳ್ಳಬೇಕು, ಮಹಿಳೆಯರು ವಸ್ತ್ರಗಳನ್ನು ತೊಡಲು ಸರ್ಕಾರಕ್ಕೆ ತೆರಿಗೆ ಪಾವತಿ ಮಾಡಬೇಕಿದ ಪದ್ಧತಿ ಜಾರಿಯಲ್ಲಿತ್ತು, ಅಂಬೇಡ್ಕರ್ ಬರೆದ ಸಂವಿಧಾನದಿಂದ ಇಂಥಹ ಪದ್ಧತಿಗೆ ತೊಲಗಿಸಿದರು, ವಯಸ್ಕ ಪದ್ಧತಿ, ಶಿಕ್ಷಣ, ಉದ್ಯೋಗ ಸಂವಿಧಾನ ಮೂಲಕ ದೊರಕಿಸಿಕೊಟ್ಟರು, 1830ರಲ್ಲಿ ದುಂಡು ಮೇಜಿನ ಸಭೆ ನಡೆಯಿತು, ನಾಸಿಕ್ ರಾಮಮಂದಿರಕ್ಕಾಗಿ 3-4ವರ್ಷ ಕಾನೂನು ಹೋರಾಟದ ಮೂಲಕ ಅಂಬೇಡ್ಕರ್ ಗೆಲುವು ಸಾಧಿಸಿದರು, 1932ರಲ್ಲಿ ಮತದಾನದ ಹಕ್ಕು ಅಂಬೇಡ್ಕರ್ ತಂದುಕೊಟ್ಟಿದರು, ಸ್ವಾತಂತ್ರ್ಯ ಪೂರ್ವ ಮೇಲ್ವರ್ಗದವರ ಮನೆ ಮುಂದೆಯಿಂದ ಹಿಂದುಳಿದ ವರ್ಗದವರು ಹೋಗಬೇಕಾದರೆ ಬಹಳಷ್ಟು ಕಷ್ಟವಿತ್ತು, ದಲಿತರು ಗ್ರಾಮದ ಹೊರಗಡೆ ಇರುತ್ತಿದ್ದರೂ ಐದು ಸಾವಿರ ವರ್ಷಗಳ ಕಾಲ ಗುಲಾಮರಂತೆ ಬದುಕುತ್ತಿದ್ದ ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಕ್ರಿಶ್ಚಿಯನರು, ದಲಿತರು, ಸ್ವಾತಂತ್ರ್ಯ ಹಕ್ಕು ಮತದಾನದ ಹಕ್ಕು, ಶಿಕ್ಷಣ ಹಕ್ಕು, ನೀಡಿದ್ದು ಅಂಬೇಡ್ಕರ್, 1953 ಮತ್ತು 1957ರಲ್ಲಿ ಎರಡು ಬಾರಿ ಅಂಬೇಡ್ಕರ ಅವರಿಗೆ ಸೋಲಿಸುತ್ತಾರೆ ಅಂಬೇಡ್ಕರ್ ಆಪ್ತ ಸಹಾಯಕ ಕರ ಜೋಳಕರ್ 7ನೇ ತರಗತಿ ಉತ್ತೀರ್ಣವಾದವನಿಗೆ ಚುನಾವಣೆಯಲ್ಲಿ ಸ್ಪರ್ಧಿಸಿ ಅಂಬೇಡ್ಕರಗೆ ಸೋಲಿಸುತ್ತಾರೆ, ಆದರೆ ಸಂವಿಧಾನ ಸಮಿತಿ ಚುನಾವಣೆ ನಡೆಯುವಾಗ ಮುಸ್ಲಿಮರು ದಲಿತರು ಸೇರಿ ಅಂಬೇಡ್ಕರ್‌ಗೆ ಗೆಲ್ಲಿಸಿಕೊಡುತ್ತಾರೆ, ಈಗಿನ ಸರ್ಕಾರಗಳು ಜೈಲಿನ ಕೈದಿಗಳಿಗೆ ದಿನಕ್ಕೆ 350ರೂ.ನೀಡುತ್ತಿದೆ ಆದರೆ ವಿದ್ಯಾರ್ಥಿಗಳು ವಸತಿ ನಿಲಯದಲ್ಲಿದ್ದು ವಿಧ್ಯಾಭ್ಯಾಸ ಮಾಡುವವರಿಗೆ ದಿನಕ್ಕೆ 200ರೂ.ಕೊಡುತ್ತಿದ್ದಾರೆ ಎಂದರು.

ಕಾರ್ಯಕ್ರಮವನ್ನು ತಹಶೀಲ್ದಾರ್ ಸುಬ್ಬಣ್ಣ ಜಮುಖಂಡಿ ಉಧ್ಘಾಟಿಸಿ ಮಾತನಾಡಿದರು, ಪುರಸಭೆ ಅಧ್ಯಕ್ಷ ಆನಂದ ಟೈಗರ್, ಸಮಾಜದ ಹಿರಿಯ ಮುಖಂಡ ರಮೇಶ ಯಾಕಾಪೂರ, ತಾಪಂ.ಇಓ ಶಂಕರ ರಾಠೋಡ್ ಮಾತನಾಡಿದರು.

ಪುರಸಭೆ ಮುಖ್ಯಾಧಿಕಾರಿ ಕಾಶಿನಾಥ ಧನ್ನಿ ಸ್ವಾಗತಿಸಿದರು, ಅಕ್ಷರ ದಾಸೋಹ ಎಡಿ ಜಯಪ್ಪ ಚಾಪಲ್ ನಿರೂಪಿಸಿ ವಂದಿಸಿದರು.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರಿಗೆ ಮತ್ತು ಪಿಯುಸಿ ಹಾಗೂ ಹತ್ತನೇ ತರಗತಿಯಲ್ಲಿ ಉನ್ನತಮಟ್ಟದಲ್ಲಿ ಉತ್ತೀರ್ಣರಾದವರಿಗೆ ಸನ್ಮಾನಿಸಿ ಗೌರವಿಸಿದರು.




☛ ಉದಯವಾಹಿನಿ ಚಿತ್ರ

> ಹತ್ತು ವಿಶ್ವವಿದ್ಯಾಲಯಗಳ ಜ್ಞಾನಶಕ್ತಿ ಅಂಬೇಡ್ಕರ್ ಹತ್ತಿವಿತ್ತು, ಅರ್ಥಶಾಸ್ತ್ರ ಜ್ಞಾನವುಳ್ಳ ಅಂಬೇಡ್ಕರ್ ಆರ್.ಬಿಐ ಬ್ಯಾಂಕ್‌ಗಳು ದೇಶದಲ್ಲಿ ಪ್ರಾರಂಭಿಸಿದರು, ಆದರೆ ಹಣದ ನೋಟಿನ ಮೇಲೆ ನಾಣ್ಯದ ಮೇಲೆ ಅಂಬೇಡ್ಕರ್ ಭಾವಚಿತ್ರ ಇರಬೇಕಿತ್ತು ಇಲ್ಲ ನೋವಿನ ಸಂಗತಿ ಎಂದರು -ಅಶೋಕ ಹೂವಿನಬಾವಿ, ಶಿಕ್ಷಣ ಸಂಯೋಜಕ

### ಅಂಬೇಡ್ಕರ್ ಜಯಂತಿಗೆ ಶಾಸಕ ಡಾ.ಅವಿನಾಶ ಜಾಧವ ಗೈರು: ಪುರಸಭೆ ಅಧ್ಯಕ್ಷ ಟೈಗರ್ ಖಂಡನೆ

**ಪಟ್ಟಣದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಣೆ ಮಾಡುತ್ತಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯಲ್ಲಿ ಸ್ಥಳೀಯ ಶಾಸಕ ಡಾ.ಅವಿನಾಶ ಜಾಧವ ಗೈರಾಗಿದ್ದು ಖಂಡನೀಯವಾಗಿದೆ. ಪರಿಶೀಷ್ಟ ಜಾತಿ ಮೀಸಲು ವಿಧಾನಸಭಾ ಮತಕ್ಷೇತ್ರದಿಂದ ಗೆಲುವು ಸಾಧಿಸಿದ ಶಾಸಕರು ಅಂಬೇಡ್ಕರ್ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದೆ ಅಂಬೇಡ್ಕರ್ ಅವರಿಗೆ ಅಗೌರವ ತೋರಿದ್ದಾರೆ, ಶಾಸಕರ ಅಧ್ಯಕ್ಷತೆಯಲ್ಲಿ ನಡೆಯಬೇಕಾದ ಜಯಂತಿ ಅವರು ಗೈರಾಗಿರುವುದರಿಂದ ಅವರ ನಡತೆ ತೋರಿಸುತ್ತದೆ, ಪ್ರತಿಯೋಬ್ಬರ ಮಹಾಪುರುಷರ ಜಯಂತಿಗಳಲ್ಲಿ ಶಾಸಕರು ಭಾಗಿಯಾಗಿ ಮಹಾಪುರುಷರ ಆದರ್ಶ ತತ್ವಗಳನ್ನು ಜನಸಾಮಾನ್ಯರಿಗೆ ಹೇಳಬೇಕಾದ ಶಾಸಕರೆ ಜಯಂತ್ಯೋತ್ಸವ ಕಾರ್ಯಕ್ರಮಗಳಿಂದ ದೂರವಿರುವುದು ಖಂಡನೀಯವಾಗಿದೆ.**

**- ಆನಂದಕುಮಾರ ಟೈಗರ್, ಅಧ್ಯಕ್ಷರು, ಪುರಸಭೆ ಚಿಂಚೋಳಿ.**

ಈ ಸಂದರ್ಭದಲ್ಲಿ ಗ್ರೇಡ್2 ತಹಶೀಲ್ದಾರ್ ವೆಂಕಟೇಶ ದುಗ್ಗನ್, ಸಮಾಜದ ಸಂಚಾಲಕ ರೇವಣಸಿದ್ದಪ್ಪ ಸುಬೇದಾರ, ವಿಶ್ವನಾಥ ಧೂಳಪ್ಪ, ಪ್ರಭುಲಿಂಗ ವಾಲಿ, ವೀರಶೇಟ್ಟಿ ರಾಠೋಡ್, ಸವಿತಾ ಮಡಿವಾಳ, ಲಕ್ಷ್ಮಯ್ಯ, ರಾಜಕುಮಾರ, ನಾಗೇಂದ್ರಪ್ಪ, ಬಸವರಾಜ ಬೆನೂರ, ಶ್ರೀಮಂತ ಕಟ್ಟಿಮನಿ, ಲಕ್ಷ್ಮಣ ಆವುಂಟಿ, ಕೆಎಂ ಬಾರಿ, ಗಣಪತರಾವ, ಜಗನ್ನಾಥ ಗಂಜಗಿರಿ, ಮಾರುತಿ ಗಂಜಗಿರಿ, ಸಂಜುಕುಮಾರ ಮೇತ್ರಿ, ರಾಜೇಂದ್ರ ವರ್ಮಾ, ಶಾಮರಾವ ಮಾಸ್ಟರ್, ಅಮರ ಲೋಡನೂರ, ಅನ್ವರ್ ಖತೀಬ್, ಓಮನರಾವ ಕೊರವಿ, ಹಣಮಂತ ಪೂಜಾರಿ, ಸುರೇಶ ಕೊರವಿ, ಯಲ್ಲಾಲಿಂಗ, ಅಂಕೀತಾ, ಅಜರ್ ಎಂಎಂಕೆ, ಅನೇಕರಿದ್ದರು.

## ಕಾಮಗಾರಿ ನಡೆದ 2 ದಿನದಲ್ಲಿ ಚರಂಡಿ ಆವರಣಗೋಡೆ ಕುಸಿತ


☛ ಉದಯವಾಹಿನಿ ಚಿತ್ರ

• ಉದಯವಾಹಿನಿ, ಪುತ್ತೂರು

ಪುತ್ತೂರು ನಗರದ ಮಹಾಲಿಂಗೇಶ್ವರ ದೇವಳಕ್ಕೆ ಸೇರಿದ ಜಾಗದ ಮೂಲಕವಾಗಿ ಡ್ರೈನೇಜ್ ಕಾಮಗಾರಿಗಳು ನಡೆಯುತ್ತಿದ್ದು, ವೆಂಕಟ್ರಮಣ ದೇವಳ ಬಳಿಯ ಪಕ್ಕದಲ್ಲಿ ನಿರ್ಮಾಣ ಮಾಡಲಾದ ಚರಂಡಿ ಬದಿಯ ಆವರಣಗೋಡೆ ಕುಸಿದು ಬಿದ್ದಿದೆ. ಅಲ್ಲದೆ ಆ ಭಾಗದ ಚರಂಡಿ ಬದಿಯ ಆವರಣಗೋಡೆಯೂ ಬಿರುಕು ಕಾಣಿ ಬಿರುಕುಬಿಟ್ಟಿದ್ದು, ಕಾಮಗಾರಿ ಸಂಪೂರ್ಣವಾಗಿ ಕಳಪೆ ಎಂಬ ಆರೋಪ ವ್ಯಕ್ತವಾಗಿದೆ. ಪುತ್ತೂರು ನಗರ ಸಭೆಯ ವತಿಯಿಂದ ನಗರೋತ್ಥಾನ ಯೋಜನೆಯಡಿ ಮಳೆನೀರು ಮತ್ತು ಕೊಳಚೆ ನೀರು ಹರಿದು ಹೋಗಲು ಚರಂಡಿ ನಿರ್ಮಾಣ ಕಾಮಗಾರಿ ನಡೆಸಲಾಗುತ್ತಿದ್ದು, ಗುತ್ತಿಗೆದಾರರು ಕಾಮಗಾರಿಯನ್ನು ಕಳಪೆಯಾಗಿ ನಿರ್ವಹಿಸಿದ್ದಾರೆ. ಹಾಗಾಗಿ ಕಾಮಗಾರಿ ನಡೆದ ಎರಡೇ ದಿನಗಳಲ್ಲಿ ಚರಂಡಿ ಬದಿ ನಿರ್ಮಿಸಲಾದ ಆವರಣಗೋಡೆ ಕುಸಿದಿದೆ ಎನ್ನುವುದು ಸಾರ್ವಜನಿಕರ ಆರೋಪ.

ಸಂಬಂಧಪಟ್ಟ ಎಂಜಿನಿಯರ್ ಮತ್ತು ಗುತ್ತಿಗೆದಾರರ ವಿರುದ್ಧ ತಕ್ಷಣ ಕ್ರಮಕೈಗೊಳ್ಳಬೇಕು. ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಶಾಸಕರನ್ನು ಆಗ್ರಹಿಸಿದ್ದಾರೆ. ಇಂತಹ ಕಳಪೆ ಕಾಮಗಾರಿಯ ವಿರುದ್ಧ ನಾವೆಲ್ಲರೂ ಧ್ವನಿ ಎತ್ತಬೇಕು. ತಕ್ಷಣ ಜಿಲ್ಲಾಧಿಕಾರಿಗಳ ಗಮನಕ್ಕೆ ತರುವ ಕೆಲಸ ಆಗಬೇಕು ಎಂಬ ಅಭಿಪ್ರಾಯಗಳನ್ನು ದೇವಳದ ಭಕ್ತರು ವ್ಯಕ್ತಪಡಿಸಿದ್ದಾರೆ.

### ಕಳಪೆ ಕಾಮಗಾರಿ ವಿರುದ್ಧ ಆಕ್ರೋಶ

**ದೇವಳದ ಸುತ್ತಲೇ ಇಂತಹ ಕಳಪೆ ಕಾಮಗಾರಿ ನಿರ್ವಹಿಸುತ್ತಿದ್ದಾರೆ ಎಂದರೆ ಬೇರೆ ಕಡೆಗಳಲ್ಲಿ ಯಾವ ರೀತಿ ಮಾಡಬಹುದು ಎಂದು ಪ್ರಶ್ನಿಸಿರುವ ಭಕ್ತರು ಕಳಪೆ ಕಾಮಗಾರಿ ನಡೆಸಿರುವ ಎಂಜಿನಿಯರ್ ಮತ್ತು ಕಾಮಗಾರಿ ಗುತ್ತಿಗೆದಾರರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.**

## ಧರಣಿ ನಿರತರಿಂದ ಬಾಬಾ ಸಾಹೇಬ್ ಅಂಬೇಡ್ಕರ್ 134 ನೇ ಜಯಂತಿ ಆಚರಣೆ


☛ ಉದಯವಾಹಿನಿ ಚಿತ್ರ

• ಉದಯವಾಹಿನಿ ಕಾರಟಗಿ

ತಹಶೀಲ್ದಾರರ ಕಾರ್ಯಾಲಯದ ಮುಂದೆ ಸಿಂಗನಾಳ ಗ್ರಾಮದ ಸರಕಾರಿ ಭೂಮಿಯಲ್ಲಿ ಸಾಗುವಳಿ ಮಾಡುವವರಿಗೆ ಸಾಗುವಳಿದ ಚಿಟಿ ಪಹಣಿ ನೀಡಲು ಒತ್ತಾಯಿಸಿ ಅನಿರ್ದಿಷ್ಟ ದರಣಿ ನಡೆಯುವ ಸ್ಥಳದಲ್ಲಿ ಡಾ. ಬಿ ಅಂಬೇಡ್ಕರ್ ರವರ 134ನೇ ಜಯಂತಿಯನ್ನು ಜಗಜೀವನ್ ರಾಮ್ ಜಯಂತಿಯನ್ನು ಮಾಡಲಾಯಿತು ಈ ಸಂದರ್ಭದಲ್ಲಿ ಓಬಸವರಾಜ ಊಗಂಗಾಧರಯ್ಯ, ಹುಸೇನಪ್ಪ ಏ ರಮೇಶ ಬಡಿಗೇರ್ ಕರಿಯಪ್ಪ ಸಿಂಗನಾಳ ಕನಕರಾಯ ಜೂರಟಗಿ ಮರಿಯಪ್ಪ ದುರುಗಮ್ಮ ಬಸಿರಿ ಹಾಳ ನಾಗಮ್ಮ ಮುದು ಕಮ್ಮ ಅಮಿನಾಭೀ ಹುಲ್ಲೇಶ ಕರಿಯಪ್ಪ ಮುಖರತನಾಳ ಸೇರಿದಂತೆ ಮತ್ತಿತರರು ಇದ್ದರು.

## ಅಂಬೇಡ್ಕರ್ ಅರಿಯಲು ಪಂಚತೀರ್ಥ ಸ್ಥಳ ಅಭಿವೃದ್ಧಿ ಮಾಡಿದ್ದು ಪ್ರಧಾನಿ ಮೋದಿ: ಎ.ಎಸ್ ಪಾಟೀಲ್ ನಡಹಳ್ಳಿ

• ಉದಯವಾಹಿನಿ, ಮುದ್ದೇಬಿಹಾಳ

ಸಂವಿದಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ತಾಣಗಳನ್ನು ಪಂಚತೀರ್ಥಗಳಾಗಿ ಗುರುತಿಸಿ ಅಭಿವೃದ್ಧಿ ಮಾಡುವ ಮೂಲಕ ಪ್ರತಿಯೊಬ್ಬ ಭಾರತೀಯರು ಅಂಬೇಡ್ಕರ್ ಅವರ ಬಗ್ಗೆ ಅರಿಯುವಂತೆ ಮಾಡಿದ್ದು ಪ್ರಧಾನಮಂತ್ರಿ ನರೇಂದ್ರ ಮೋದಿ ಎಂದು ಬಿಜೆಪಿ ರೈತ ಮೋರ್ಚಾ ರಾಜಾಧ್ಯಕ್ಷ ಎ.ಎಸ್ ಪಾಟೀಲ್ ನಡಹಳ್ಳಿ ಹೇಳಿದರು ಅವರು ಸೋಮವಾರ ಅಂಬೇಡ್ಕರ್ ಅವರ 134 ಜಯಂತಿ ಅಂಗವಾಗಿ ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾಧ್ಯಮದ ಜೊತೆ ಮಾತನಾಡಿದರು.

ಅಂಬೇಡ್ಕರ್ ಅವರ ಜನ್ಮಸ್ಥಳ, ಯುಕೆಯಲ್ಲಿ ಅಧ್ಯಯನ ಮಾಡುವಾಗ ತಂಗಿದ್ದ ಸ್ಥಳ, ಅವರು ಶಿಕ್ಷಣ ಪಡೆದ ನಾಗಪುರದ ದೀಕ್ಷಾ ಭೂಮಿ, ದೆಹಲಿಯ ಮಹಾಪರಿನಿರ್ವಾಣ ಸ್ಥಳ ಮತ್ತು ಮುಂಬಯಿ ಚೈತ್ಯ ಭೂಮಿ ಪಂಚತೀರ್ಥ ಸ್ಥಳಗಳಾಗಿವೆ ಎಂದ ನಡಹಳ್ಳಿ ಅವರು 140 ಕೋಟಿ ಭಾರತೀಯರಿಗೆಲ್ಲಾ ಒಂದೇ ಸಮಾನದ ಹಕ್ಕನ್ನು ಸಂವಿಧಾನದ ಮೂಲಕ ಅಂಬೇಡ್ಕರ್ ಅವರು ನೀಡಿದ್ದಾರೆ ನಾವೆಲ್ಲರೂ ಭಾರತೀಯರು ನಮ್ಮ ಮೈಯಲ್ಲಿ ಹರಿಯುತ್ತಿರುವುದು ಭಾರತೀಯ ರಕ್ತವಾಗಿದೆ ನಮ್ಮ ರಾಷ್ಟ್ರನಿರ್ಮಾಣಕ್ಕೆ ನಮ್ಮನ್ನು ನಾವು ಅರ್ಪಿಸಿಕೊಳ್ಳೋಣವೆಂದು ಕರೆ ನೀಡಿದರು. ಈ ವೇಳೆ ಹರೀಶ ನಾಟಿಕಾರ, ಜಗದೀಶ್ ಪಂಪಣ್ಣನವರ, ಮಲ್ಲಿಕಾರ್ಜುನ ತಂಗಡಗಿ, ಪ್ರೇಮಸಿಂಗ್ ಚವ್ಹಾಣ, ಪರಶುರಾಮ ನಾಲತವಾಡ, ರವೀಂದ್ರ ಬಿರಾದಾರ, ನಾಗೇಶ ಕವಡಿಮಟ್ಟಿ ಸಂಜು ಬಾಗೇವಾಡಿ, ಶೇಖರ ಢವಳಗಿ, ಎಸ್ ಆರ್ ಕಟ್ಟಿಮನಿ, ಶೇಖರ ಆಲೂರ, ಸಂಗನಗೌಡ ಪಾಟೀಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು


☛ ಉದಯವಾಹಿನಿ ಚಿತ್ರ


## 14.60 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು

• ಉದಯವಾಹಿನಿ, ಕಲಬುರಗಿ

ಮನೆ ಬೀಗ ಮುರಿದು 14.60 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿರುವ ಘಟನೆ ಇಲ್ಲಿನ ಭಾಗ್ಯವಂತಿ ನಗರದಲ್ಲಿ ನಡೆದಿದೆ.

ಶಂಕರಗೌಡ ಬಮಶೆಟ್ಟಿ ಎಂಬುವವರ ಮನೆ ಬೀಗ ಮುರಿದು ಕಳ್ಳರು 50 ಗ್ರಾಂ.ನ ಬಂಗಾರದ ಗುಂಡಿನ ಸರ, 53 ಗ್ರಾಂ.ನ ಬಂಗಾರದ ಮಂಗಳಸೂತ್ರ, 50 ಗ್ರಾಂ.ಬಂಗಾರದ ಪಾಟ್ಲಿ, 20 ಗ್ರಾಂನ ಬಂಗಾರದ ಚೈನ್, 30ಗ್ರಾಂನ ಬಂಗಾರದ ಬ್ರಾಸಲೈಟ್, 50 ಗ್ರಾಂನ ಬಂಗಾರದ ಕಡಗ, 10 ಗ್ರಾಂನ ಬಂಗಾರದ ಪಾಟ್ಲಿ, 10 ಗ್ರಾಂನ ಬಂಗಾರದ ಕಡಗ, 05 ಗ್ರಾಂನ ಎರಡು ಬಂಗಾರದ ಕಡಗ ಒಟ್ಟು 10 ಗ್ರಾಂ, 20 ಗ್ರಾಂನ ಎರಡು ಬಂಗಾರದ ರಿಂಗ್ ಒಟ್ಟು 40 ಗ್ರಾಂ, 10 ಗ್ರಾಂ ಇರುವ ಬಂಗಾರದ ಎರಡು ಕಿವಿಯೊಲೆಗಳು ಮತ್ತು 10 ಗ್ರಾಂನ ಒಂದು ಬಂಗಾರದ ಕರಿಮಣಿ ಸೇರಿ ಒಟ್ಟು 13 ಲಕ್ಷ ರೂ.ಮೌಲ್ಯದ 343 ಗ್ರಾಂನ ಬಂಗಾರದ ಆಭರಣಗಳು, 10 ಸಾವಿರ ರೂ.ಮೌಲ್ಯದ 40 ಗ್ರಾಂನ ಬೆಳ್ಳಿಯ ಹಾಲಗಡಗ ಹಾಗೂ 1.50 ಲಕ್ಷ ರೂ. ನಗದು ಹಣ ಸೇರಿ ಒಟ್ಟು 14,60,000 ರೂ. ಮೌಲ್ಯದ ನಗನಾಣ್ಯ ದೋಚಿಕೊಂಡು ಹೋಗಿದ್ದಾರೆ.

## ಅಗ್ನಿಶಾಮಕ ಇಲಾಖೆಯಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿ


☛ ಉದಯವಾಹಿನಿ ಚಿತ್ರ

• ಉದಯವಾಹಿನಿ ಕಾರಟಗಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ 134 ನೇ ಜಯಂತಿ ಹಾಗೂ ಏಪ್ರಿಲ್ -14 ರಿಂದ 20 ರವರೆಗೆ ಅಗ್ನಿ ಶಾಮಾಕ ಸೇವಾ ಸಪ್ತಾಹ ದಿನಾಚರಣೆಯನ್ನು ಪಟ್ಟಣದ ನವಲಿ ರಸ್ತೆಯ ಅಗ್ನಿಶಾಮಕ ಇಲಾಖೆಯಲ್ಲಿ ಪ್ರಭಾರ ಠಾಣಾಧಿಕಾರಿ ರಾಘವೇಂದ್ರ, ಇಳಿಗೇರ್ ನೇತೃತ್ವದಲ್ಲಿ ಸಿಬ್ಬಂದಿಗಳ ಸಹಯೋಗದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪಟ್ಟಣದ ವಿವಿಧ ಬೀದಿಗಳಲ್ಲಿ ಅಗ್ನಿ ಅವಘಡಗಳಿಂದ ಆಗುವ ಅನಾಹುತಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಸಿದರು. ಈ ವೇಳೆ ಅಗ್ನಿ ಶಾಮಕ ಇಲಾಖೆ ಅಧಿಕಾರಿಗಳು ಸಿಬ್ಬಂದಿ ವರ್ಗ ಇದ್ದರು.

## ಧಾರಾಕಾರ ಮಳೆ, ವಿದ್ಯುತ್ ವ್ಯತ್ಯಯ

• ಉದಯವಾಹಿನಿ, ಶೃಂಗೇರಿ

ತಾಲ್ಲೂಕಿನ ಪಟ್ಟಣ ಮತ್ತು ಗ್ರಾಮೀಣ ಭಾಗದಲ್ಲಿ ಸೋಮವಾರ ಆಲಿಕಲ್ಲು ಸಹಿತ ಧಾರಾಕಾರ ಮಳೆಯಾಗಿದೆ. ರಭಸದ ಗಾಳಿಯಿಂದ ಹಲವು ಕಡೆ ಅಡಿಕೆ, ತೆಂಗಿನ ಮರಗಳು ನೆಲಕ್ಕೆ ಉರುಳಿದೆ. ಮನೆಯ ಮೇಲೆ ಮರಗಳು ಬಿದ್ದು. ಮನೆಗಳಿಗೆ ಹಾನಿ ಸಂಭವಿಸಿದೆ. 15ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿವೆ. ಕೆಲವು ಕಡೆ ವಿದ್ಯುತ್ ತಂತಿಯ ಮೇಲೆ ಮರ ಬಿದ್ದು, ತಂತಿ ತುಂಡಾಗಿದೆ. ಕೊಚ್ಚವಳ್ಳಿ, ಗುಂಡ್ರೆ, ಹಾಲಂದೂರು, ಹೊನ್ನವಳ್ಳಿ, ಮಸಿಗೆ, ಹುಲಗಾರು ಸಮೀಪ ಮರಗಳು ಬಿದ್ದಿವೆ. ಕಚಿಗೆಯಲ್ಲಿ 33 ಕೆ.ವಿ ವಿದ್ಯುತ್ ತಂತಿಯ ಮೇಲೆ ಮರ ಬಿದ್ದು ವಿದ್ಯುತ್ ವ್ಯತ್ಯಯ ಉಂಟಾಗಿದೆ.

## ಡಾ.ಬಿ ಆರ್ ಅಂಬೇಡ್ಕರ್, ಡಾ.ಬಾಬು ಜಗಜೀವನ್ ರಾಮ್ ಜನ್ಮದಿನಾಚರಣೆ

• ಉದಯವಾಹಿನಿ ಅರಸೀಕೆರೆ

ಅರಸೀಕೆರೆ. ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಮತ್ತು ನಗರಸಭೆ ಅರಸೀಕೆರೆ ಇವರ ಸಂಯುಕ್ತ ಆಶ್ರಯದಲ್ಲಿ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ. ಬಿಆರ್ ಅಂಬೇಡ್ಕರ್ ರವರ 134 ನೇ ಜನ್ಮದಿನಾಚರಣೆ ಮತ್ತು ಹಸಿರು ಕ್ರಾಂತಿಯ ಹರಿಕಾರ ಹಾಗೂ ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ರವರ 118ನೇ ಜನ್ಮ ದಿನಾಚರಣೆಯನ್ನು ಹಳೆ ಮಾಧ್ಯಮಿಕ ಶಾಲೆ ಆವರಣದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.

ತಾಲ್ಲೂಕು ಕಚೇರಿಯಲ್ಲಿ ಮಹನೀಯರುಗಳಿಗೆ ಪುಷ್ಪ ನಮನ ಸಲ್ಲಿಸಿ, ಅದ್ದೂರಿ ಮೆರವಣಿಯೊಂದಿಗೆ ಅಂಬೇಡ್ಕರ್ ಅವರಿಗೆ ಜೈಯಕಾರ ಹಾಕುತ್ತಾ ನೀಲಿ ಶಾಲುಗಳನ್ನು ಹಾಕಿಕೊಂಡು ಬಾವುಟಗಳನ್ನು ಹಿಡಿದಿದ್ದ ಸಾವಿರಾರು ಅಭಿಮಾನಿಗಳೊಂದಿಗೆ ಕ್ಷೇತ್ರದ ಶಾಸಕ ಕೆ.ಎಂ ಶಿವಲಿಂಗೇಗೌಡರು ಹಾಗೂ ನಗರಸಭೆ ಅಧ್ಯಕ್ಷರಾದ ಶಮಿವುಲ್ಲಾ ಇತರ ಗಣ್ಯರು ಸಭಾ ಕಾರ್ಯಕ್ರಮದವರೆಗೂ ಕಾಲ್ನಡಿಗೆಯಲ್ಲಿ ಆಗಮಿಸಿದರು. ಮಧ್ಯೆ ಪಿಪಿ ವೃತ್ತದಲ್ಲಿ ಹೊಸದಾಗಿ ಅಳವಡಿಸಿರುವ ಡಿಜಿಟಲ್ ಬೋರ್ಡ್ ಉದ್ಘಾಟನೆಗೊಳಿಸಿದರು.

ನಂತರ ಹಾಸನ ವೃತ್ತದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನೂತನವಾಗಿ ನಿರ್ಮಾಣಗೊಂಡಿರುವ100 ಅಡಿ ಎತ್ತರದ ಬೃಹತ್ ಧ್ವಜಸ್ತಂಬವನ್ನ ಉದ್ಘಾಟನೆಗೊಳಿಸಿ ಭಾರತದ ರಾಷ್ಟ್ರ ಧ್ವಜವನ್ನು ಆರಿಸಿ ರಾಷ್ಟ್ರಗೀತೆಯೊಂದಿಗೆ ನಮನ ಸಲ್ಲಿಸಿದರು. ನಂತರ ಹಳೆ ಪ್ರಾಥಮಿಕ ಶಾಲಾ ಆವರಣದಲ್ಲಿ ಸಭಾ ಕಾರ್ಯಕ್ರಮ ಜರಗಿತು.

ಕಾರ್ಯಕ್ರಮದಲ್ಲಿ ಅರಸೀಕೆರೆ ಕ್ಷೇತ್ರದ ಶಾಸಕರಾದ ಕೆ ಎಂ ಶಿವಲಿಂಗೇಗೌಡ ಮಾತನಾಡಿ ಧೀನ ದಲಿತರು, ಶೋಷಿತರು, ಮಹಿಳೆಯರು ಸೇರಿದಂತೆ ಎಲ್ಲಾ ಜನಸಮುದಾಯದ ಅಭಿವೃದ್ಧಿಗೆ ವಿಶ್ವದಲ್ಲೇ ಅತ್ಯುತ್ತಮವಾದ ಸಂವಿಧಾನವನ್ನು ರಚಿಸಿದಂತ ಮಹಾನ್ ಮಾನವತಾವಾದಿ ಡಾ. ಬಿ ಆರ್ ಅಂಬೇಡ್ಕರ್ ಹಾಗೂ ಹಸಿರು ಕ್ರಾಂತಿಯ ಹರಿಕಾರ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಮ್‌ಅವರ ಜನ್ಮದಿನಾಚರಣೆಯನ್ನು ನಾವೆಲ್ಲ ಸಂಭ್ರಮದಿಂದ ಆಚರಿಸಲಾಗುತ್ತಿದೆ ಎಂದು ಹೇಳಿದರು. ನಾವೆಲ್ಲರೂ ಅವರ ತತ್ವ ಆದರ್ಶಗಳನ್ನು ಪಾಲಿಸುವ ಮೂಲಕ ಅವರಿಗೆ ಗೌರವಿಸಬೇಕೆಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಎಂ ಸಮಿಉಲ್ಲಾ, ತಹಶೀಲ್ದಾರ್ ಎಂ ಜಿ ಸಂತೋಷ್ ಕುಮಾರ್, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಎಚ್ ಕೆ ಸತೀಶ್, ಅರಸೀಕೆರೆ ಉಪ ವಿಭಾಗ ಆರಕ್ಷಕ ಉಪಧೀಕ್ಷಕರಾದ ಜೆ ಲೋಕೇಶ್, ನಗರಸಭಾ ಪೌರಾಯುಕ್ತ ಎಚ್ ಟಿ ಕೃಷ್ಣಮೂರ್ತಿ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಸಹಾಯಕ ನಿರ್ದೇಶಕರು ಗ್ರೇಡ್- 1 ಎಸ್ ಪರಶಿವಮೂರ್ತಿ ಗ್ಯಾರಂಟಿ ಯೋಜನೆಯ ಅಧ್ಯಕ್ಷ ಧರ್ಮಶೇಖರ್ ಹಾಗೂ ಕಾಂಗ್ರೆಸ್ ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ವೆಂಕಟೇಶ್ ಗುತ್ತಿನಕೆರೆ ಶಿವಮೂರ್ತಿ ನಗರಸಭಾ ಸದಸ್ಯ ಭಾಸ್ಕರ್ ಚಂದ್ರಯ್ಯ ಜಯಕುಮಾರ್ ಸಂಕೋಡನಹಳ್ಳಿ ಮಂಜು. ಮಾಡಳು ರಂಗನಾಥ್ ಇನ್ನಿತರ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಸಹಸ್ರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಉಪಸ್ಥಿತರಿದ್ದರು.


☛ ಉದಯವಾಹಿನಿ ಚಿತ್ರ

**ಹಸಿರು ಕ್ರಾಂತಿಯ ಹರಿಕಾರ**

## ಕಾಯಕಲ್ಪಕ್ಕಾಗಿ ಕಾಯುತ್ತಿರುವ ಸ್ಮಾರಕಗಳು

• ಉದಯವಾಹಿನಿ, ಕನಕಗಿರಿ

ಮೌರ್ಯರು ಹಾಗೂ ವಿಜಯನಗರ ಕಾಲದಿಂದಲೂ ಪಾಳೆಯಗಾರಿಕೆಯಲ್ಲಿ ಒಂದಾಗಿದೆ. ದೊರೆಗಳ ರಾಜಕೀಯ, ಸಾಂಸ್ಕೃತಿಕ ಪ್ರೇಮಕ್ಕೆ ಸಾಕ್ಷಿಯಾಗಿ ಅನೇಕ ಸ್ಮಾರಕಗಳು ಕಾಣ ಸಿಗುತ್ತವೆ. ಆದರೆ ದೊರೆಗಳು ನಿರ್ಮಿಸಿದ ಸ್ಮಾರಕಗಳು ಇಂದು

ಪಟ್ಟಣದ ಎಪಿಎಂಸಿ ಆವರಣದಲ್ಲಿರುವ ವೆಂಕಟಚಲಪತಿ ಭಾವಿ ಅಥವಾ ರಾಣಿಸ್ನಾನಗೃಹ, ಪುಷ್ಕರಣಿ, ಕನಕಾಚಲಪತಿ ದೇಗುಲ, ಪ್ರವಾಸಿ ಮಂದಿರದಲ್ಲಿರುವ ಭಾವಿ, ಅಚ್ಚಮ್ಮ ಬಾವಿ. ಹೀಗೆ ಅನೇಕ ಸ್ಮಾರಕಗಳು ಇಲ್ಲಿವೆ. ವೆಂಕಟಚಲಪತಿಬಾವಿ ಅಥವಾ ರಾಣಿಸ್ನಾನಗೃಹ ಎಂದು ಕರೆಯುವ ಈ ಸ್ಮಾರಕದ ಅಭಿವೃದ್ಧಿಗೆ ಯಾವ ಸರ್ಕಾರ ಸಹ ಪ್ರಯತ್ನ ಮಾಡುತ್ತಿಲ್ಲ ಎನ್ನುತ್ತಾರೆ ಸ್ಥಳೀಯರು.

ರಾಣಿ ಗೌರಮ್ಮ ಅವರು ನಿರ್ಮಿಸಿದ ಈ ಬಾವಿ ಕಲಾತ್ಮಕ ಕೆತ್ತನೆಯಿಂದ ಕೂಡಿದೆ. ಬಾವಿಯೊಳಗೆ ದೇಗುಲಗಳಿದ್ದು ಅವುಗಳ ಅಂದ ಹೆಚ್ಚಿಸಲು ಬಾಗಿಲ ಹತ್ತಿರವೇ ಅಂದವಾದ ಚಿತ್ರಗಳನ್ನು ಕಲ್ಲಿನಿಂದ ಕೆತ್ತಲಾಗಿದೆ. ಪಕ್ಕದಲ್ಲಿಯೆ ನಾಗರಮೂರ್ತಿಗಳಿದ್ದು ಈ ಭಾಗದಲ್ಲಿ ಬಂಗಾರ ಇರುತ್ತದೆ ಎಂಬ ಭಾವನೆಯಿಂದ ನಿಧಿಚೋರರರು ಗೋಡೆಯನ್ನು ಅಗೆದಿದ್ದಾರೆ. ಬಾವಿಯೊಳಗೆ ಶಿವಲಿಂಗವಿದ್ದು ಅದನ್ನು ಸಹ ನಿಧಿಗಾಸೆಗಾಗಿ ಕಿಡಿಗೇಡಿಗಳು ಭಗ್ನಗೊಳಿಸಿದ್ದಾರೆ.

ಸಿಂಹದ ಬಾವಿಯೊಳಗೆ ಕಲ್ಲಿನಗುಂಡಿದ್ದು ಅದು ತಿರುಗುವಂತೆ ಕೆತ್ತನೆ ಮಾಡಲಾಗಿದೆ. ನಿಧಿಗಳ್ಳರು ಗುಂಡುಗಳನ್ನು ಧ್ವಂಸ ಮಾಡಿದ್ದಾರೆ. ಅಪರೂಪದ ಬಾವಿಯಾದ ವೆಂಕಟಚಲಪತಿ ಬಾವಿ ನೋಡುಗರನ್ನು ಆಕರ್ಷಿಸುತ್ತದೆ. ಆದರೆ ರಕ್ಷಣೆ ಕೊರತೆಯಿಂದ ನಲುಗಿ ಹೋಗಿದೆ ಎಂದು ಸ್ಥಳೀಯ ಕನಕರೆಡ್ಡಿ ಕೆರಿ ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಅನಾಥವಾದ ಪುಷ್ಕರಣೆ: ಬಸ್ ನಿಲ್ದಾಣದಿಂದ ಸರ್ಕಾರಿ ಪಿಯು ಕಾಲೇಜಿಗೆ ತೆರಳುವ ಮಾರ್ಗದಲ್ಲಿ ಪುಷ್ಕರಣಿ ಅಥವಾ ನರಸಿಂಹ ತೀರ್ಥಕೊಂಡ ಎಂಬ ಸ್ಮಾರಕವಿದ್ದು, ಅಭಿವೃದ್ಧಿಗಾಗಿ ಕಾದು ಕುಳಿತಿದೆ. ಈ ಪ್ರದೇಶವನ್ನು ಎರಡನೆಯ ತಿರುಪತಿ, ಬಡವರ ತಿರುಪತಿ ಎಂದು ಕರೆಯಲಾಗುತ್ತಿದ್ದು ಭಕ್ತರು ಇಲ್ಲಿ ಸಹ ತಲೆಮುಡಿ ಕೊಡುತ್ತಾರೆ.


☛ ಉದಯವಾಹಿನಿ ಚಿತ್ರ

# ಮುಗಿಯದ ಕಾಮಗಾರಿ: ಮೃತ್ಯುಕೂಪವಾದ ಹೆದ್ದಾರಿ

## • ಮಳೆಗಾಲ ಆರಂಭವಾದರೆ ಇಲ್ಲಿನ ಪರಿಸ್ಥಿತಿ ಬಿಗಡಾಯಿಸಲಿದೆ

• ಉದಯವಾಹಿನಿ, ಉಡುಪಿ

ಮುಗಿಯದ ಕಾಮಗಾರಿಗಳು, ಅವೈಜ್ಞಾನಿಕ ರಸ್ತೆಗಳು, ವಾಹನಗಳ ಅತಿ ವೇಗದ ಚಾಲನೆಯಿಂದಾಗಿ ಜಿಲ್ಲೆಯ ಹಲವು ಹೆದ್ದಾರಿಗಳು ಮೃತ್ಯುಕೂಪವಾಗಿ ಪರಿಣಮಿಸುತ್ತಿದೆ. ಕಳೆದೊಂದು ತಿಂಗಳಲ್ಲೇ ಬ್ರಹ್ಮಾವರ ಸೇರಿದಂತೆ ವಿವಿಧೆಡೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಭವಿಸಿದ ಅಪಘಾತಗಳಲ್ಲಿ ದ್ವಿಚಕ್ರ ಸವಾರರು ಪ್ರಾಣ ಕಳೆದುಕೊಂಡಿದ್ದಾರೆ.

ಮಳೆಗಾಲ ಸನ್ನಿಹಿತವಾದರೂ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳು ದಡಮುಟ್ಟುವ ಯಾವುದೇ ಸೂಚನೆಗಳು ಕಂಡು ಬರುತ್ತಿಲ್ಲ. ಸಂತೆಕಟ್ಟೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆಯುತ್ತಿರುವ ಅಂಡರ್‌ಪಾಸ್ ಕಾಮಗಾರಿ ಇನ್ನೂ ಮುಗಿದಿಲ್ಲ. ಇಲ್ಲಿ ಸರ್ವಿಸ್ ರಸ್ತೆಗಳಲ್ಲಿ ವಾಹನಗಳು ಸಂಚರಿಸುತ್ತಿದ್ದರೂ ಮಳೆಗಾಲ ಆರಂಭವಾದರೆ ಇಲ್ಲಿನ ಪರಿಸ್ಥಿತಿ ಬಿಗಡಾಯಿಸಲಿದೆ ಎನ್ನುತ್ತಾರೆ ವಾಹನ ಸವಾರರು. ಇಂದ್ರಾಳಿಯ ರೈಲ್ವೆ ಮೇಲ್ಸೇತುವೆ ಕಾಮಗಾರಿಯು ಶೀಘ್ರ ಮುಗಿಯುವ ಯಾವುದೇ ಲಕ್ಷಣಗಳು ಗೋಚರವಾಗುತ್ತಿಲ್ಲ. ಮುಂಬರುವ ಮಳೆಗಾಲದಲ್ಲೂ ಇಲ್ಲಿ ವಾಹನ ಸವಾರರು ಸಂಕಷ್ಟ ಅನುಭವಿಸಬೇಕಾದೀತು ಎನ್ನುತ್ತಾರೆ ಸ್ಥಳೀಯರು. ಅಂಬಲಪಾಡಿಯಲ್ಲಿ ಮೇಲೇತುವೆ ಕಾಮಗಾರಿ ನಡೆಯುತ್ತಿರುವುದರಿಂದ ಹೆದ್ದಾರಿಯ ವಾಹನಗಳು ಸರ್ವಿಸ್ ರಸ್ತೆಗಳಲ್ಲೇ ಸಂಚರಿಸುತ್ತಿವೆ. ಈ ಸರ್ವಿಸ್ ರಸ್ತೆಗಳು ಅಲ್ಲಲ್ಲಿ ಕಿತ್ತು ಹೋಗಿದ್ದು, ದ್ವಿಚಕ್ರ ವಾಹನ ಸವಾರರಿಗೆ ಅಪಾಯ ಆಹ್ವಾನಿಸುತ್ತಿವೆ. ಮಳೆ ಆರಂಭವಾಗುವುದಕ್ಕೆ ಮೊದಲು ಈ ಸರ್ವಿಸ್ ರಸ್ತೆಗೆ ತೇಪೆ ಹಾಕುವ ಕೆಲಸವಾದರೂ ಮಾಡದಿದ್ದರೆ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಗಬಹುದು ಎನ್ನುತ್ತಾರೆ ಸ್ಥಳೀಯ ನಿವಾಸಿಗಳು. ವಿವಿಧ ಕಾಮಗಾರಿಗಳಿಗಾಗಿ ಮಣ್ಣು ಸಾಗಿಸುವ ಟಿಪ್ಪರ್ ಲಾರಿಗಳ ಅತಿವೇಗದ ಸಂಚಾರ ಕೂಡ ದ್ವಿಚಕ್ರ ವಾಹನ ಸವಾರರಿಗೆ ಆಪತ್ತು ತರುತ್ತಿವೆ.

ಅವುಗಳ ಅತಿವೇಗಕ್ಕೆ ಸಂಬಂಧಪಟ್ಟವರು ಕಡಿವಾಣ ಹಾಕಬೇಕು ಎಂದು ಜನರು ಒತ್ತಾಯಿಸುತ್ತಿದ್ದಾರೆ. ಮಣಿಪಾಲ ವ್ಯಾಪ್ತಿಯ ಕೆಳಪರ್ಕಳದ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರಂತರ ಅಪಘಾತಗಳು ಸಂಭವಿಸುತ್ತಲೇ ಇವೆ. ಇಲ್ಲಿರುವ ನಗರ ಸಭೆಯ ಪಂಪ್‌ಹೌಸ್ ಸಮೀಪ ಹಲವು ಬಾರಿ ಕಾರುಗಳು ನಿಯಂತ್ರಣ ತಪ್ಪಿ ಮಗುಚಿವೆ. ಅಪಘಾತ ತಡೆಗೆ ಕ್ರಮ ವಹಿಸಬೇಕು ಎಂಬುದು ಜನರ ಆಗ್ರಹವಾಗಿದೆ.


☛ ಉದಯವಾಹಿನಿ ಚಿತ್ರ

### ಅವೈಜ್ಞಾನಿಕ ಹೆದ್ದಾರಿಗಳಿಂದ ಆಪತ್ತು

**ಉಡುಪಿ ಮಂಗಳೂರು ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಗಳು ಅತ್ಯಂತ ಅವೈಜ್ಞಾನಿಕವಾಗಿವೆ. ಮಾತ್ರವಲ್ಲ ಹೆದ್ದಾರಿ ನಿರ್ಮಿಸುವಾಗ ರಸ್ತೆಯ ಬದಿಯಲ್ಲಿ ಪಾದಚಾರಿಗಳಿಗೆ ಸ್ವಲ್ಪವೂ ಕೂಡ ದಾರಿ ಬಿಟ್ಟಿಲ್ಲ. ಜನಸಾಮಾನ್ಯರ ಬಗ್ಗೆಯಾಗಲಿ ಅವರ ಜೀವದ ಬಗ್ಗೆಯಾಗಲಿ ಗಮನ ಹರಿಸದೇ ಇರುವುದನ್ನು ಕಾಣಬಹುದು ಎಂದು ಎಂಜಿಎಂ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ನಿವೃತ್ತ ಮುಖ್ಯಸ್ಥ ಕೊಕ್ಕರ್ಣೆ ಸುರೇಂದ್ರನಾಥ ಶೆಟ್ಟಿ ಹೇಳಿದ್ದಾರೆ. ಬೈಂದೂರಿನಿಂದ ಮಂಗಳೂರಿನ ತನಕ ಮಲ್ಪೆಯಿಂದ ಆಗುಂಬೆಯ ತನಕ ಎಲ್ಲಿಯೂ ಪಾದಚಾರಿಗಳು ರಸ್ತೆ ದಾಟಲು ಜೀಬ್ರಾ ಕ್ರಾಸ್ ಆಗಲಿ ಸಿಗ್ನಲ್ ವ್ಯವಸ್ಥೆಯಾಗಲಿ ಸುರಕ್ಷಿತವಾಗಿ ದಾಟಿ ಹೋಗಲು ಅಂಡರ್ ಪಾಸ್ ದಾರಿಯಾಗಲಿ ಇಲ್ಲ ಎಂದಿದ್ದಾರೆ.**

## 2ನೇ ಹಂತದ ನೀರಾವರಿ ಯೋಜನೆಗೆ 77 ಕೋಟಿ ಅನುದಾನ: ಎ. ಮಂಜು

• ಉದಯವಾಹಿನಿ, ಅರಕಲಗೂಡು

ದೊಡ್ಡಬೆಮ್ಮತ್ತಿ ಮತ್ತು ಸುತ್ತಮುತ್ತಲ ಗ್ರಾಮಗಳ ಕೆರೆ, ಕಟ್ಟೆಗಳಿಗೆ ಕಟ್ಟೆಪುರ ಎರಡನೇ ಹಂತದ ನೀರಾವರಿ ಯೋಜನೆಯಲ್ಲಿ ನೀರು ಹರಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಶಾಸಕ ಎ. ಮಂಜು ತಿಳಿಸಿದರು.

ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿ ದೊಡ್ಡಬೆಮ್ಮತ್ತಿ ಗ್ರಾಮದ ದಲಿತ ಕಾಲೋನಿಯಲ್ಲಿ ಗ್ರಾಮ ವಾಸ್ತವ್ಯದ ಪ್ರಯುಕ್ತ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿ, ತಾವು ಸಚಿವರಾಗಿದ್ದ ವೇಳೆ ಕೊಣನೂರು ಮತ್ತು ಕಣಿಯಾರು ಏತನೀರಾವರಿ ಯೋಜನೆಗಳಿಗೆ ಮುಂಗಡ ಪತ್ರದಲ್ಲಿ ಒಪ್ಪಿಗೆ ಪಡೆಯಲಾಗಿತ್ತು. ನಂತರದ ದಿನಗಳಲ್ಲಿ ಇದನ್ನು ಕೈಬಿಡಲಾಗಿತ್ತು. ಈಗ ಸರ್ಕಾರ 77 ಕೋಟಿ ಅನುದಾನ ನೀಡಿದ್ದು, 2026ರಲ್ಲಿ ಈ ಭಾಗದ ಕೆರೆಕಟ್ಟೆಗಳಿಗೆ ನೀರು ಹರಿಸಲಾಗುವುದು' ಎಂದರು. ಅಲ್ಲಾಪಟ್ಟಣದ ಗ್ರಾಮದ ಬಳಿ 180 ಕೋಟಿ ವೆಚ್ಚದಲ್ಲಿ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರ ತೆರೆಯಲಾಗುತ್ತಿದೆ. ಅಲ್ಲದೆ ಕೇರಾಳಾಪುರ, ಗುಡ್ಡನಕೊಪ್ಪಲು, ಸಿದ್ದಾಪುರ ಗೇಟ್, ಸಂತೆಮರೂರಲ್ಲಿ 66 ಕೆವಿ ವಿದ್ಯುತ್ ವಿತರಣಾ ಕೇಂದ್ರಗಳನ್ನು ತೆರೆಯಲು ಕ್ರಮ ಕೈಗೊಂಡಿದ್ದು ಕಾರ್ಯಾರಂಭಗೊಂಡರೆ ತಾಲ್ಲೂಕಿನಲ್ಲಿ ವಿದ್ಯುತ್ ಸಮಸ್ಯೆ ಇರುವುದಿಲ್ಲ' ಎಂದರು.


☛ ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ಆಶಾವಾದಿಗಳಾಗಿರಿ ಮತ್ತು ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು ಮತ್ತು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ.

**ವೃಷಭ** ತಿಳಿಯದೆ ನಿಮ್ಮ ಅಭಿಪ್ರಾಯಗಳು ಬೇರೊಬ್ಬರ ಭಾವನೆಗಳಿಗೆ ಧಕ್ಕೆಯುಂಟು ಮಾಡಬಹುದು. ಹಣ ನಿಮಗೆ ಅಗತ್ಯವಾಗಿದೆ ಆದರೆ ನಿಮ್ಮ ಸಂಬಂಧಗಳನ್ನು ಹಾಳುಮಾಡುವಷ್ಟು ಹಣದ ಬಗ್ಗೆ ಗಂಭೀರವಾಗಬೇಡಿ.

**ಮಿಥುನ** ಜನರಲ್ಲಿ ಬೆರೆಯುವ ಭಯ ನಿಮ್ಮನ್ನು ಧೈರ್ಯಗೆಡಿಸಬಹುದು. ಇದನ್ನು ತೆಗೆದುಹಾಕಲು ನಿಮ್ಮ ಸ್ವಾಭಿಮಾನವನ್ನು ಪ್ರೋತ್ಸಾಹಿಸಿ. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ.

**ಕರ್ಕಾಟಕ** ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿ, ನಿಮ್ಮ ಬಗ್ಗೆ ನೀವೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ ಇದನ್ನು ದಿನವೂ ಮಾಡುವುದನ್ನು ರೂಢಿ ಮಾಡಿಕೊಳ್ಳಿ.

**ಸಿಂಹ** ನೀವು ಅತುರದ ನಿರ್ಣಯಗಳನ್ನು ಕೈಗೊಂಡರೆ , ಅನಗತ್ಯ ಕ್ರಮಗಳನ್ನು ಕೈಗೊಂಡರೆ ಈ ದಿನ ನಿಮ್ಮನ್ನು ನಿರಾಸೆಗೊಳಿಸುತ್ತದೆ. ನಿಮ್ಮ ಸಂಗಾತಿ ಅಸಾಧಾರಣವಾದದ್ದೇನಾದರೂ ಮಾಡಬಹುದು.

**ಕನ್ಯಾ** ಸಂತೃಪ್ತಿಯ ಜೀವನಕ್ಕಾಗಿ ನಿಮ್ಮ ಮಾನಸಿಕ ದೃಢತೆಯನ್ನು ಸುಧಾರಿಸಿ. ಇಂದಿನವರೆಗೂ ಹಣವನ್ನು ಯೋಚಿಸದೆ ಖರ್ಚು ಮಾಡುತ್ತಿದ್ದ ಜನರು, ಅವರಿಗೆ ಇಂದು ಹಣದ ತುಂಬಾ ಅಗತ್ಯವಿರಬಹುದು.

**ತುಲಾ** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ , ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ.

**ವೃಶ್ಚಿಕ** ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಹಣಕಾಸಿನಲ್ಲಿ ಸುಧಾರಣೆ ದೀರ್ಘಕಾಲದಿಂದ ಬಾಕಿಯಿರುವ ನಿಮ್ಮ ಬಾಕಿಗಳು ಮತ್ತು ಬಿಲ್ಲುಗಳನ್ನು ಪಾವತಿಸುವುದನ್ನು ಅನುಕೂಲಕರವಾಗಿಸುತ್ತದೆ.

**ಧನಸ್ಸು** ಅನಾವಶ್ಯಕವಾಗಿ ವಾದ ಮಾಡಿ ಶಕ್ತಿಯನ್ನು ವ್ಯರ್ಥ ಮಾಡಬೇಡಿ. ಒಂದು ವಾದದಿಂದ ಏನನ್ನೂ ಪಡೆಯದಿದ್ದರೂ ಏನಾದರೂ ಕಳೆದುಕೊಳ್ಳುತ್ತೀರೆಂದು ನೆನಪಿಟ್ಟುಕೊಳ್ಳಿ. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ.

**ಮಕರ** ನಿಮ್ಮ ಜೀವನ ಸಂಗಾತಿಯು ಈ ಅಗತ್ಯದ ಕಾಲದಲ್ಲಿ ಅವರ ಕುಟುಂಬದ ಸದಸ್ಯರಿಗೆ ಹೋಲಿಸಿದರೆ ನಿಮ್ಮ ಕುಟುಂಬದ ಸದಸ್ಯರಿಗೆ ಕಡಿಮೆ ಕಾಳಜಿ ಮತ್ತು ಪ್ರಾಮುಖ್ಯತೆಯನ್ನು ನೀಡಬಹುದು.

**ಕುಂಭ** ನೀವು ಹೆಚ್ಚೇನೂ ಮಾಡದೇ ಇತರರ ಗಮನ ಸೆಳೆಯಲು ಇದೊಂದು ಪರಿಪೂರ್ಣ ದಿನ. ನೀವು ಮತ್ತು ನಿಮ್ಮ ಪ್ರೀತಿ ಸಂಗಾತಿ ಪ್ರೀತಿಯ ಸಾಗರದಲ್ಲಿ ತೇಲುತ್ತೀರಿ ಮತ್ತು ಪ್ರೀತಿಯ ಔನ್ನತ್ಯವನ್ನು ಅನುಭವಿಸುತ್ತೀರಿ.

**ಮೀನ** ಇತ್ತೀಚಿಗೆ ನಿಮಗೆ ಹತಾಶೆಯೆನಿಸುತ್ತಿದ್ದಲ್ಲಿ , ಇಂದು ಸರಿಯಾದ ಆಲೋಚನೆಗಳು ಹಾಗೂ ಕಾರ್ಯಗಳು ನಿಮಗೆ ಅಗತ್ಯವಿರುವ ಸಮಾಧಾನವನ್ನು ತರುತ್ತವೆ ಎಂದು ನೀವು ನೆನಪಿಡಬೇಕು.

## ಜಾನಪದ ಉತ್ಸವ ಎಲ್ಲಾ ಕಾಲೇಜುಗಳಲ್ಲಿ ಕಡ್ಡಾಯವಾಗಲಿ


ಉದಯವಾಹಿನಿ ಚಿತ್ರ



**ಮುಖ್ಯಮಂತ್ರಿ ಸಿದ್ದರಾಮಯ್ಯನವರೊಂದಿಗೆ ಚರ್ಚಿಸಿ ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಬಾಣಾವರದಲ್ಲಿ ನಡೆದ ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆಯ ಪ್ರತೀಕವಾದ ಜಾನಪದ ಉತ್ಸವ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಇನ್ನು ಮುಂದೆ ನಡೆಸಿಕೊಂಡು ಹೋಗುವಂತೆ ಸರ್ಕಾರದ ಗಮನ ಸೆಳೆದು ವಿಶೇಷವಾಗಿ ಬಾಣಾವರ ಕಾರ್ಯಕ್ರಮವನ್ನು ಮಾದರಿಯಾಗಿಟ್ಟುಕೊಂಡು ಸರ್ಕಾರದ ಮಟ್ಟದಲ್ಲಿ ಆದೇಶ ಮಾಡಿಸುವುದಾಗಿ ಇದಕ್ಕೆ ಮುಖ್ಯಮಂತ್ರಿಗಳ ಹಾಗೂ ಸರ್ಕಾರದ ಗಮನ ಸೆಳೆಯುವುದಾಗಿ ಅರಸೀಕೆರೆ ಕ್ಷೇತ್ರದ ಶಾಸಕ ಹಾಗೂ ಗೃಹ ಮಂಡಳಿ ಅಧ್ಯಕ್ಷರಾದ ಕೆಎಂ ಶಿವಲಿಂಗೇಗೌಡ ಪ್ರತಿಕ್ರಿಸಿದರು.**

• ಉದಯವಾಹಿನಿ ಅರಸೀಕೆರೆ

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜರುಗಿದ ಜಾನಪದ ಉತ್ಸವ ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ ಎಂಬ ಧ್ಯೇಯವಾಕ್ಯದಡಿಯಲ್ಲಿ ಅದ್ದೂರಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮಾನ್ಯ ಕಳೆದ ಒಂದು ವಾರದಿಂದ ಕಾಲೇಜಿನಲ್ಲಿ ಚೌಕಾಬಾರ, ಕುಂಟೋಬಿಲ್ಲೆ, ರಂಗೋಲಿ, ಮಡಕೆ ಒಡೆಯುವುದು ಮುಂತಾದ ಜನಪದ ಶೈಲಿಯ ಆಟಗಳನ್ನು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕಲಾ ತಂಡಗಳ ಅದ್ದೂರಿ ಮೆರವಣಿಗೆ ಮಾಡಲಾಯಿತು.

ಮೆರವಣಿಗೆಯಲ್ಲಿ ಭಾಗವಹಿಸಿದ ಶಾಸಕರು ವಿದ್ಯಾರ್ಥಿಗಳೊಟ್ಟಿಗೆ ಹೆಜ್ಜೆ ಹಾಕಿದ್ದು ವಿಶೇಷ. ಕಾರ್ಯಕ್ರಮ ಕುರಿತು ಮಾತನಾಡಿದ ಅರಸೀಕೆರೆ ಕ್ಷೇತ್ರದ ಶಾಸಕರರು ಕರ್ನಾಟಕ ರಾಜ್ಯ ಗೃಹ ಮಂಡಳಿ ಅಧ್ಯಕ್ಷರಾದ ಶಿವಲಿಂಗೇಗೌಡರು ಜನಪದ ನಮ್ಮ ಉಸಿರು ಸಂಸ್ಕೃತಿ ಅರಿತೆ ಸಂಸ್ಕಾರ ಬೆಳೆಯಲು ಸಹಕಾರಿಯಾಗುತ್ತದೆ ಎಂದರು. ಮುಂದಿನ ದಿನಗಳಲ್ಲಿ ನಮ್ಮ ಜನಪದ ಶೈಲಿಯನ್ನು ಕಾಲೇಜು ವಿದ್ಯಾರ್ಥಿಗಳಿ ಕಲಿಸುವ ಒಂದ ಭಾಗವಾಗುವಂತೆ ಸರ್ಕಾರದ ಗಮನ ಸೆಳೆಯುವುದಾಗಿ ಹೇಳಿದರು. ಕಾರ್ಯಕ್ರಮದಲ್ಲಿ ಮುಖಂಡರಾದ ಶ್ರೀನಿವಾಸ್ ಅವರು ಮಾತನಾಡಿ ಈ ಕಾರ್ಯಕ್ರಮ ನಮ್ಮ ಊರಿಗೆ ಮಾದರಿ ಎಂದರು. ಸಿಡಿಸಿ ಅಧ್ಯಕ್ಷರಾದ ಪ್ಯಾರೇಜಾನ್. ಬಾಣಾವರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು ಅರಸೀಕೆರೆ ತಾಲ್ಲೂಕು ಬಗರ್ ಹುಕುಂ ಕಮಿಟಿ ಸದಸ್ಯರಾದ ಬಿ ಎಂ ಜಯಣ್ಣ ಮಾತನಾಡಿದರು.

ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಪದಕ ಪುರಷ್ಕತರಾದ ಪಿ ಎಸ್ ಐ ಸುರೇಶ್ ಅವರನ್ನು ಗೌರವಿಸಲಾಯಿತು. ಜನಪದ ಗಾಯಕ ದೇವಾನಂದ್ ವರಪ್ರಸಾದ್. ತಾಲ್ಲೊಕು ಜನಪದ ಪರಿಷತ್‌ನ ಬಿ ಪರಮೇಶ್ , ಯುವ ಮುಖಂಡರಾದ ಸಂಜಯ್, ಪೃಥ್ವಿನಾಯಕ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಪ್ರಾಂಶುಪಾಲರಾದ ಡಾ.ದೊರೇಶ್ ಬಿಳಿಕೆರ ಹಾಗೂ ಎಲ್ಲಾ ಬೋಧಕ ಬೋಧಕೇತರ ವರ್ಗ ಕಾರ್ಯಕ್ರಮದಲ್ಲಿ ಇದ್ದರು..

## ಪೂರ್ವಸಿದ್ಧತಾ ಕಾರ್ಯ ವೀಕ್ಷಿಸಿದ ಜಿಲ್ಲಾಧಿಕಾರಿ

• ಉದಯವಾಹಿನಿ ಕಲಬುರಗಿ


ಉದಯವಾಹಿನಿ ಚಿತ್ರ

ಕಲಬುರಗಿ ನಗರದ ಕೆ.ಸಿ.ಟಿ. ಕಾಲೇಜಿನಲ್ಲಿ ಇದೇ ಏಪ್ರಿಲ್ 16 ರಂದು ಕಲಬುರಗಿ ವಿಭಾಗ ಮಟ್ಟದ ಉದ್ಯೋಗ ಮೇಳ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸೋಮವಾರ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಕೆ.ಸಿ.ಟಿ ಕಾಲೇಜಿಗೆ ಭೇಟಿ ನೀಡಿ ಅಂತಿಮ ಸಿದ್ಧತಾ ಕಾರ್ಯ ವೀಕ್ಷಿಸಿದರು.

ವೇದಿಕೆ, ಮಧ್ಯಾಹ್ನದ ಊಟ, ಪಾರ್ಕಿಂಗ್, ಸಂದರ್ಶನ ಕೊಠಡಿ, ಗಣ್ಯರ ತಂಗುವಿಕೆಯ ಗ್ರೀನ್ ರೂಂ ಸೇರಿದಂತೆ ಇಡೀ ಕ್ಯಾಂಪಸ್ ಸುತ್ತಾಡಿ ಸ್ಥಳ ಪರಿಶೀಲಿಸಿದರು.

ಅಭ್ಯರ್ಥಿಗಳ ನೋಂದಣಿಗೆ 40 ಕೌಂಟರ್ ಸ್ಥಾಪಿಸಬೇಕು. ಬಿಸಿಲು ಹೆಚ್ಚಿರುವ ಕಾರಣ ನೆರಳಿನ ವ್ಯವಸ್ಥೆ ಮಾಡಬೇಕು. ವಾಹನ ಪಾರ್ಕಿಂಗ್ ವ್ಯವಸ್ಥೆ, ನೊಂದಣಿ, ಸಂದರ್ಶನ ಸ್ಥಳಗಳ ಕುರಿತು ಅಲ್ಲಲ್ಲಿ ಸೈನೇಜ್ ಬೋರ್ಡ್ ಅಳವಡಿಸಬೇಕೆಂದು ಇವೆಂಟ್ ಮ್ಯಾನೇಜರ್ ಗಳಿಗೆ ಸೂಚಿಸಿದರು. ವಿಶೇಷವಾಗಿ ಅಭ್ಯರ್ಥಿಗಳಿಗೆ ಕುಡಿಯುವ ನೀರು, ಬೆಳಗಿನ ಉಪಹಾರ, ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಬೇಕು. ಊಟಕ್ಕೆ 30 ಕೌಂಟರ್ ಸ್ಥಾಪಿಸಬೇಕು. ಉದ್ಯೋಗದಾತರು ಸಂದರ್ಶನ ನಡೆಸಲು ಅನುಕೂಲವಾಗುವಂತೆ ಕಾಲೇಜಿನ' ಕೊಠಡಿ ಕಾಯ್ದಿರಿಸಿ ಎಲ್ಲಾ ರೀತಿಯ ಮೂಲಸೌಕರ್ಯ ಕಲ್ಪಿಸಬೇಕು ಎಂದರು.

ಕಾರ್ಯಕ್ರಮ ಸುಲಲಿತವಾಗಿ ನಡೆಯುವ ದೃಷ್ಠಿಯಿಂದ ಎನ್.ಸಿ.ಸಿ., ಎನ್.ಎಸ್.ಎಸ್. ಹಾಗೂ ಐ.ಟಿ.ಐ ವಿದ್ಯಾರ್ಥಿಗಳನ್ನು ಸ್ವಯಂ ಸೇವಕರನ್ನಾಗಿ ನೇಮಿಸಿ ಅವರಿಗೆ ತರಬೇತಿ ನೀಡಿ ಕಾರ್ಯಕ್ರಮ ದಿನದಂದು ಆಯಾ ಕಟ್ಟಿನ ಸ್ಥಳದಲ್ಲಿ ನಿಯೋಜಿಸಬೇಕೆಂದರು.

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಪವನ್ ಮತ್ತು ಇವೆಂಟ್ ಮ್ಯಾನೇಜರ್ ಪ್ರತಿನಿಧಿ ಗೌಡ ಮತ್ತು ವೈಷ್ಣವಿ ಅವರು ಇದುವರೆಗೆ ಕೈಗೊಂಡ ಸಿದ್ಧತಾ ಕಾರ್ಯದ ಕುರಿತು ಡಿ.ಸಿ. ಅವರಿಗೆ ಮಾಹಿತಿ ನೀಡಿದರು.

### ಮೌಢ್ಯತೆ ಕಂದಾಚಾರದಿಂದ ಆಚೆ ಬನ್ನಿ , ಶಿಕ್ಷಣದಿಂದ ಸಮಾನತೆ ಸಾಧ್ಯ ; ನಾಡಗೌಡ

## ಏಕರೂಪ ಕಾನೂನು ಜಾರಿಗೆ ಬರಲಿ: ಶಾಂತಗೌಡ


ಉದಯವಾಹಿನಿ ಚಿತ್ರ

**ಅಂದಿನ ಪ್ರಧಾನಿ ನೆಹರು ಅವರಿಗೆ ಅಂಬೇಡ್ಕರ್ ಅವರು ಧರ್ಮಾದರಿತ ಮೀಸಲಾತಿ ಬೇಡ ದೇಶದಲ್ಲಿ ಕಾಮನ್ ಸಿವಿಲ್ ಕೂಡ್ ಜಾರಿಗೆ ತರಬೇಕೆಂದು ಹೇಳಿದಾಗ ಅದಕ್ಕೆ ಕವಡೆಕಾಸಿನ ಕಿಮ್ಮತ್ತು ಸಿಗಲಿಲ್ಲ ಕಾಶ್ಮೀರದ 370 ವಿರೋಧಿಸಿದ್ದು ಅಂಬೇಡ್ಕರ್ ಅವರು , ಜಾತಿ ಧರ್ಮ ಆಧರಿತ ಮತದಾನದಿಂದ ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಬೀಳುತ್ತದೆ ಹೇಳಿದ್ದರು ದೇಶದಲ್ಲಿ ಏಕರೂಪ ಕಾನೂನು ಜಾರಿಗೆ ಬರಬೇಕು ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಎಲ್ಲರಿಗೂ ಉಚಿತ ಶಿಕ್ಷಣ ಸಿಗಬೇಕು** -ಶಾಂತಗೌಡ ಪಾಟೀಲ್ ನಡಹಳ್ಳಿ

• ಉದಯವಾಹಿನಿ ಮುದ್ದೇಬಿಹಾಳ

ದೇವರ ಹೆಸರಿನಲ್ಲಿ ಮೌಢ್ಯತೆ ಕಂದಾಚರ ಕೈ ಬಿಡಬೇಕು ದೇವರ ಹೆಸರಿನಲ್ಲಿ ಪ್ರಾಣಿ ಬಲಿ ವಿರುದ್ಧ ಅಂಬೇಡ್ಕರ್ ಅವರು ಇದ್ದರು ಎಂದು ಕೆ ಎಸ್ ಡಿ ನಿಗಮದ ಅಧ್ಯಕ್ಷ ಶಾಸಕ ಸಿ.ಎಸ್ ನಾಡಗೌಡ ಅಪ್ಪಾಜಿ ಹೇಳಿದರು.

ಅವರು ಸೋಮವಾರ ಸಂವಿಧಾನ ಶಿಲ್ಪಿ ಡಾ.ಬಿ ಆರ್ ಅಂಬೇಡ್ಕರ್ ಅವರ 134 ನೇ ಜಯಂತೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಬೇಕು ಶಿಕ್ಷಣದಿಂದ ಸಮಾನತೆ , ಉನ್ನತ ಸ್ಥಾನ ಪಡೆಯಲು ಸಾಧ್ಯ ಇಂದು ವಿಜ್ಞಾನದಲ್ಲಿ ನಾವು ಮುಂದೆವರೆದಿದ್ದರೂ ಹಿಂದುಳಿದ ,ದಲಿತ , ಅಲ್ಪಸಂಖ್ಯಾತ ವರ್ಗದ ಜನರು ದೇವರ ಹೆಸರಿನಲ್ಲಿ ಬ್ಯಾಟಿಗಳನ್ನು ಮಾಡುತ್ತಾರೆ ಈ ಮೌಢ್ಯತೆ ಬಿಡಬೇಕು ಬಸವಣ್ಣನವರು ಒಳ್ಳೆಯ ಸಂಸ್ಕಾರ ನೀಡಿ ಜಾತಿ ರಹಿತ ಕಾಯಕ ಸಮಾಜ ನಿರ್ಮಾಣ ಮಾಡಿದ್ದಾರೆ ಎಂದರು.

**ಸಂವಿಧಾನ ತಿದ್ದುಪಡಿ ಮಾಡಬಾರದು ಸಂವಿಧಾನ ತಿದ್ದುಪಡಿಯಾದರೆ ಅಷ್ಟಾವರಣ ಪದ್ಧತಿ ವರ್ಣಾಶ್ರಮ ಮರಳಿ ಗೋಚರಿಸುತ್ತವೆ ಇದು ದೇಶಕ್ಕೆ ಮಾರಕ ,ದಲಿತ ವರ್ಗದ ರಾಜಕೀಯ ಮೀಸಲಾತಿ ತಗೆಯಬಾರದು ಇದು ನನ್ನ ಅಭಿಪ್ರಾಯ** - ಸಿ.ಎಸ್ ನಾಡಗೌಡ

ಸಮಾಜ ಸೇವಕ ಶಾಂತಗೌಡ ಪಾಟೀಲ್ ನಡಹಳ್ಳಿ ಮಾತನಾಡಿ ಬ್ರಿಟಿಷ್ ಆಡಳಿತದಲ್ಲಿ ಸಂಸತ್ತು ಪ್ರವೇಶಿಸಿದ್ದ ಅಂಬೇಡ್ಕರ್ ಅವರನ್ನು ಕಾನೂನು ಮಂತ್ರಿಯಾಗಿ ಸಂಸತ್ತಿಗೆ ಬರದಂತೆ ತಡೆಯಲು ಯತ್ನ ಮಾಡಲಾಗಿತ್ತು ಅವರು ಪಕ್ಷಾತೀತವಾಗಿ ಚುನಾವಣೆಗೆ ನಿಂತಾಗ ಅವರ ಆಪ್ತಸಹಾಯಕನನ್ನು ಅವರ ವಿರುದ್ಧ ನಿಲ್ಲಿಸಿ ಸೋಲಿಸಲಾಯಿತು ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಲಿಲ್ಲ, ಸಂವಿಧಾನ ತಿದ್ದುಪಡಿ ಮಾಡುತ್ತಾರೆ ಎಂದರೆ ಸಂವಿಧಾನ ಬದಲಾವಣೆ ಮಾಡುತ್ತಾರೆ ಎನ್ನುತ್ತಾರೆ ಅಂಬೇಡ್ಕರ್ ಅವರು ಸಂವಿಧಾನ ತಿದ್ದುಪಡಿ ಮಾಡಬೇಡಿ ಎಂದು ಎಲ್ಲೂ ಹೇಳಿಲ್ಲ ಇಂದು ಕೆಲ ವಿಷಯಗಳಲ್ಲಿ ಸಂವಿಧಾನದ ತಿದ್ದುಪಡಿ ಅವಶ್ಯಕವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಬಸಂತಿ ಮಠ ಮಾತನಾಡಿದರು ಪ್ರಾಸ್ತಾವಿಕವಾಗಿ ಹರೀಶ ನಾಟಿಕಾರ, ಅಂಬೇಡ್ಕರ್ ಕುರಿತು ಉಪನ್ಯಾಸ ಆರ್‌ಎಸ್ ಸಜ್ಜನ ಮಾಡಿದರು. ಈ ವೇಳೆ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಪುರಸಭೆಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ಪುಸ್ತಕ ವಿತರಿಸಲಾಯಿತು, ಅಂಬೇಡ್ಕರ್ ಜಯಂತಿ ನಿಮಿತ್ತ ರಕ್ತದಾನ ಶಿಬಿರ ಏರ್ಪಡಿಸಿ ರಕ್ತದಾನ ಮಾಡಿದ ದಾನಿಗಳಿಗೆ ಪ್ರಮಾಣ ಪತ್ರ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಗೌರವ ಸ್ಮರಣಿಕೆಗಳನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ತಹಶೀಲ್ದಾರ ಬಲರಾಮ ಕಟ್ಟಿಮನಿ, ತಾಪಂ ಇಒ ನಿಂಗಪ್ಪ ಮಸಳಿ, ಬಿಇಒ ಬಿ ಎಸ್ ಸಾವಳಗಿ, ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ,ಗುರು ತಾರನಾಳ,ಪ್ರೀತಿ ದೇಗಿನಾಳ, ಸತೀಶ್ ಓಸ್ವಾಲ್, ಎಸ್ ಎಸ್ ಮಾಲಗತ್ತಿ, ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ ಕಾಮರಾಜ ಬಿರಾದಾರ ದಲಿತ ಮುಖಂಡ ಡಿ ಬಿ ಮುದೂರ, ರೇವಣಪ್ಪ ಹರಿಜನ,ಸಿಪಿಐ ಮಹಮ್ಮದ್ ಫಸಿಯುದ್ದಿನ ಸೇರಿದಂತೆ ಪುರಸಭೆ ಸದಸ್ಯರು ,ನಾಮನಿರ್ದೇಶಿತ ಸದಸ್ಯರು ವಿವಿಧ ಸಮಾಜದ ಮುಖಂಡರು ಗಣ್ಯರು ದಲಿತಪರ ಪದಾಧಿಕಾರಿಗಳು ಭಾಗವಹಿಸಿದ್ದರು. ಟಿ ಡಿ ಲಮಾಣಿ ಸಂವಿಧಾನ ಪೀಠಿಕೆ ಭೋದಿಸಿದರು ಸಂಗಮೇಶ ಶಿವಣಗಿ ಬಳಗ ನಾಡಗೀತೆ ಹಾಡಿದರು, ವೈ ಹೆಚ್ ವಿಜಯಕರ ಸ್ವಾಗತಿಸಿದರು ಪರಶುರಾಮ ಕಣ್ಣೂರ ನಿರೂಪಿಸಿ ವಂದಿಸಿದರು.

## ಮಹಿಳಾ ಕುಲಕ್ಕೆ ಅಕ್ಕಮಹಾದೇವಿ ಸ್ಫೂರ್ತಿ: ಜಿ.ವಿ.ಮಂಜುನಾಥ


ಉದಯವಾಹಿನಿ ಚಿತ್ರ

• ಉದಯವಾಹಿನಿ ಭಾಲ್ಕಿ

12ನೆಯ ಶತಮಾನದ ಶರಣೆ ಅಕ್ಕಮಹಾದೇವಿ ಇಂದಿನ ಆಧುನಿಕ ಕಾಲದ ಮಹಿಳಾ ಕುಲಕ್ಕೆ ಸ್ಫೂರ್ತಿಯ ಸೆಲೆ ಮತ್ತು ಹೊಸ ಬೆಳಕು ಎಂದು ಚಿಕ್ಕಮಗಳೂರಿನ ಜಿ.ವಿ.ಮಂಜುನಾಥ ಹೇಳಿದರು. ತಾಲ್ಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲದ ಕದಳಿ ವಸತಿ ವಿಭಾಗದ ಎದುರಿನ ಅಕ್ಕಮಹಾದೇವಿ ವೃತ್ತದಲ್ಲಿ ಆಯೋಜಿಸಿದ್ದ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಅಕ್ಕ ಮಹಾದೇವಿ ಸಾಮಾನ್ಯ ಮಹಿಳೆ ಆಗಿರಲಿಲ್ಲ. ಅವರು ಮಹಿಳಾ ಸ್ವಾತಂತ್ರ್ಯ ಮತ್ತು ಜಾಗೃತಿಗೆ ಸಕ್ಷಿಪ್ರಜ್ಞೆ. ಅಭಿವ್ಯಕ್ತಿ ಸಂಸ್ಕೃತಿಯ ಸಂಕೇತ. ಅವರು ತೋರಿದ ದಾರಿಯಲ್ಲಿ ಎಲ್ಲರೂ ಸಾಗಬೇಕು ಎಂದು ತಿಳಿಸಿದರು. ಕದಳಿ ವಸತಿ ವಿಭಾಗದ ಮುಖ್ಯಸ್ಥ ಪ್ರೇಮಾ, ಇಂದುಮತಿ ತಂಡದವರು ತೊಟ್ಟಿಲು ಕಾರ್ಯಕ್ರಮ ನಡೆಸಿ ಕೊಟ್ಟರು.

ಈ ಸಂದರ್ಭದಲ್ಲಿ ಚನ್ನಬಸವೇಶ್ವರ ಪ್ರೌಢ ಶಾಲೆಯ ಮುಖ್ಯಗುರು ಮಹೇಶ ಮಹಾರಾಜ, ಪ್ರಾಥಮಿಕ ವಿಭಾಗದ ಮುಖ್ಯಗುರು ಮಹೇಶ ಕುಲಕರ್ಣಿ, ದತ್ತು ಕೇಂದ್ರದ ಮುಖ್ಯಸ್ಥ ಅನಿಲಕುಮಾರ ಹಾಲಕೂಡೆ, ದೈಹಿಕ ನಿರ್ದೇಶಕ ಅನಿಲಕುಮಾರ ಪಾಟೀಲ್ ಸೇರಿದಂತೆ ಹಲವರು ಇದ್ದರು.

## ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿ ಪರಿಶೀಲನೆ ವೇಳೆ ಗಾಂಜಾ ಪತ್ತೆ

• ಉದಯವಾಹಿನಿ ಸುಳ್ಯ



ಚಾಲಕನ ನಿಯಂತ್ರಣ ತಪ್ಪಿ ದೇವರ ಕೊಲ್ಲಿಯಲ್ಲಿ ಕಾರು ಅಪಘಾತವಾಗಿದ್ದು ಕಾರು ಪರಿಶೀಲನೆ ವೇಳೆ ಕಾರಿನಲ್ಲಿ ಗಾಂಜಾ ಪತ್ತೆಯಾಗಿದೆ.

ಪಿರಿಯಾಪಟ್ಟಣದಿಂದ ಮಡಿಕೇರಿ ಮಾರ್ಗವಾಗಿ ಪುತ್ತೂರಿಗೆ ತೆರಳುತ್ತಿದ್ದ ಕಾರು ಮಾರ್ಗಮಧ್ಯದ ದೇವರಕೊಲ್ಲಿಯಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡು ಪಲ್ಟಿಯಾಗಿದೆ. ಈ ಸಂದರ್ಭ ನೆರವಿಗೆ ಧಾವಿಸಿ ಬಂದ ಸ್ಥಳೀಯರಿಗೆ ಕಾರಿನಲ್ಲಿ ಗಾಂಜಾ ಪ್ಯಾಕೇಟ್‌ಗಳು ಪತ್ತೆಯಾಗಿವೆ. ಕೂಡಲೇ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಸ್ಥಳಕ್ಕೆ ತೆರಳಿ ಕಾರಿನಲ್ಲಿದ್ದ ಪುತ್ತೂರು ನಿವಾಸಿಗಳಾದ ಫಜ್ರುದ್ದೀನ್, ಮುಸ್ತಾಕ್, ಜಾಬಿರ್ ಎಂಬುವವರನ್ನು ಮತ್ತು ಗಾಂಜಾ ಪ್ಯಾಕೇಟ್ ಗಳನ್ನು ವಶಕ್ಕೆ ಪಡೆದುಕೊಂಡು ಕ್ರಮ ಕೈಗೊಂಡಿದ್ದಾರೆ.

## ಸಮುದ್ರದ ಅಲೆಗೆ ಸಿಲುಕಿ ನೀರು ಪಾಲಾಗುತ್ತಿದ್ದ ನಾಲ್ವರು ಮಹಿಳೆಯರ ರಕ್ಷಣೆ

• ಉದಯವಾಹಿನಿ ಉಳ್ಳಾಲ

ಕುತ್ತಾರು ಕೊರಗಜ್ಜನ ಕ್ಷೇತ್ರಕ್ಕೆ ಭೇಟಿ ನೀಡಿ ಉಳ್ಳಾಲದ ಸಮುದ್ರ ತೀರಕ್ಕೆ ವಾಯು ವಿಹಾರಕ್ಕೆಂದು ತೆರಳಿದ್ದ ಐವರು ಮಹಿಳೆಯರ ಪೈಕಿ ನಾಲ್ವರು ಮಹಿಳೆಯರು ಸಮುದ್ರ ಪಾಲಾಗಿದ್ದು, ಸ್ಥಳೀಯ ಈಜುಗಾರರು ರಕ್ಷಿಸಿದ ಘಟನೆ ನಡೆದಿದೆ. ಬೆಂಗಳೂರಿನ ಹಳ್ಳಿಯ ಸವಿತಾ(38), ಸೌಮ್ಯ(39), ಬಿಂದು(20), ಪದ್ಮಿನಿ(38) ಮತ್ತು ಮಂಜುಳ (35) ಎಂಬ ಐವರು ಮಹಿಳೆಯರು ಇಮದು ಬೆಳಿಗ್ಗೆ ಕುತ್ತಾರುವಿನ ಕೊರಗಜ್ಜನ ಆದಿ ಕ್ಷೇತ್ರಕ್ಕೆ ಭೇಟಿ ನೀಡಿ ಮಧ್ಯಾಹ್ನ ವೇಳೆ ಉಳ್ಳಾಲ ಬೀಚ್‌ಗೆ ತೆರಳಿದ್ದರು. ಈ ಐವರು ಯುವತಿಯರು ಸಮುದ್ರ ತೀರದಲ್ಲಿ ಕುಳಿತ್ತಿದ್ದ ವೇಳೆ ಬೃಹತ್ ಗಾತ್ರದ ಅಲೆಯೊಂದು ತೀರಕ್ಕೆ ಅಪ್ಪಳಿಸಿದೆ. ಪರಿಣಾಮ ಸವಿತಾ, ಸೌಮ್ಯ, ಬಿಂದು, ಪದ್ಮಿನಿ ನೀರು ಪಾಲಾಗಿದ್ದಾರೆ. ಕೂಡಲೇ ಸ್ಥಳೀಯ ಈಜುಗಾರರು ನಾಲ್ವರು ಯುವತಿಯರನ್ನ ಮೇಲಕ್ಕೆತ್ತಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ರಕ್ಷಿಸಲಾದ ಮಹಿಳೆಯರ ಪೈಕಿ ಪದ್ಮಿನಿ ಸ್ಥಿತಿ ಸ್ವಲ್ಪ ಗಂಭೀರವಾಗಿದ್ದು, ದೇರಳಕಟ್ಟೆಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ನು ಉಳಿದವರು ಚೇತರಿಸಿಕೊಂಡಿದ್ದಾರೆ ಎಂದು ವರದಿಯಾಗಿದೆ.

## ಡಾ.ಬಾಬಾಸಾಹೇಬ್ ಅಂಬೇಡ್ಕರ್ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು: ಕಿರಣ್ ಕುಮಾರ


• ಉದಯವಾಹಿನಿ ಹೊಸಪೇಟೆ

ಸಾಮಾಜಿಕ ಸಮಾನತೆ, ದಲಿತೋದ್ಧಾರ ಸೇರಿದಂತೆ ದೇಶದ ಭವಿಷ್ಯ ಪ್ರಗತಿಗಾಗಿ ದುಡಿದ ಮಹಾನಾಯಕ ಡಾ.ಅಂಬೇಡ್ಕರ್, ಅವರ ಆದರ್ಶಗಳನ್ನು ನಾವು ಮೈಗೂಡಿಸಿಕೊಳ್ಳಬೇಕು ಎಂದು ಪತಂಜಲಿ ಯೋಗ ಸಮಿತಿಯ ರಾಜ್ಯ ಯುವ ಪ್ರಭಾರಿ ಕಿರಣ್ ಕುಮಾರ ಹೇಳಿದರು. ಹೊಸಪೇಟೆಯ ಪತಂಜಲಿ ಪರಿವಾರ ಫ್ರೀಡಂ ಪಾರ್ಕ್‌ನಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ ತಾವು ಬಾಲ್ಯದಲ್ಲಿ ಕಂಡ ಸಾಮಾಜಿಕ ಆಚರಣೆಗಳು, ಅದರಿಂದ ದಲಿತ ವರ್ಗ ಅನುಭವಿಸಿದ ನೋವುಗಳನ್ನು ಗಮನದಲ್ಲಿಟ್ಟು ಸ್ವಾತಂತ್ರ್ಯ ನಂತರ ಮೊದಲ ಕಾನೂನು ಸಚಿವರಾಗಿ ಸಂವಿಧಾನಶಿಲ್ಪಿಯಾಗಿ ಭವ್ಯ ಭಾರತದ ಭವಿಷ್ಯ ರೂಪಿಸುವಲ್ಲಿ ತಮ್ಮದೆ ಆದ ಶೈಲಿಯಲ್ಲಿ ಕೊಡುಗೆಯನ್ನು ಹಾಗೂ ನೊಂದ ದಲಿತವರ್ಗದ ಅಭಿ ವೃದ್ಧಿಗೆ ಶ್ರಮವಹಿಸಿದ್ದಾರೆ ಅವರ ಕೊಡುಗೆಗೆ ನಾವು ಅವುಗಳನ್ನು ಮೈಗೂಡಿಸಿಕೊಂಡು ನಿಜವಾಗಿ ಅರ್ಥಪೂರ್ಣ ಕೃತಜ್ಞತೆ ಸಲ್ಲಿಸಬೇಕಾಗಿದೆ ಎಂದರು.


ಉದಯವಾಹಿನಿ ಚಿತ್ರ

## ಯರಗಟ್ಟಿ ತಾಲ್ಲೂಕಿಗೆ ನೂತನ ನೌಕರರ ಸಂಘದ ಕುರಿತು ಒತ್ತಾಯ

• ಉದಯವಾಹಿನಿ ಬೆಳಗಾವಿ


ಉದಯವಾಹಿನಿ ಚಿತ್ರ

ಸವದತ್ತಿ ತಾಲ್ಲೂಕಿನ ನೂತನವಾಗಿ ರಚನೆಯಾದ ಯರಗಟ್ಟಿ ತಾಲ್ಲೂಕಿಗೆ ಶೀಘ್ರವಾಗಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಘಟಕವನ್ನು ರಚನೆ ಮಾಡುವಂತೆ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಸಿ ಎಸ್ ಷಡಾಕ್ಷರಿ ಅವರಲ್ಲಿ ಒತ್ತಾಯಿಸಲಾಯಿತು.

ರಾಮದುರ್ಗ ತಾಲ್ಲೂಕಿನ ಬಾಗೋಜಿಕೊಪ್ಪ ಗ್ರಾಮದಲ್ಲಿ ಕಾರ್ಯಕ್ರಮ ಒಂದರಲ್ಲಿ ಭಾಗವಹಿಸಲು ಆಗಮಿಸುವ ಸಂದರ್ಭದಲ್ಲಿ ಯರಗಟ್ಟಿ ಪ್ರವಾಸಿ ಮಂದಿರದಲ್ಲಿ ಯರಗಟ್ಟಿ ತಾಲ್ಲೂಕಿನ ನೌಕರರು ಸದರಿಯವರನ್ನ ಆತ್ಮೀಯವಾಗಿ ಬರಮಾಡಿಕೊಂಡರು.

ನಂತರ ಪ್ರಾಥಮಿಕ ಶಾಲಾ ಪತ್ತಿನ ಸಂಘದ ತಾಲ್ಲೂಕ ಅಧ್ಯಕ್ಷರಾದ ಮಂಜುನಾಥ ಕಂಬಾರ್ , ಸಿ ಎಸ್ ಷಡಕ್ಷರಿ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷರಾದ ಈಶ್ವರ್ ಕಲ ಗೌಡರ ,ಮುಖಂಡರಾದ ಎಂ.ಸಿ ಹಡಪದ್ ,ಪವಾಡಿಗೌಡರ, ಭಜಂತ್ರಿ ಸರ್, ಇಲಾಖಾ ಸಂಘದವರು ನೂತನ ಯರಗಟ್ಟಿ ತಾಲ್ಲೂಕಿನ ನೌಕರರು ಸದರಿಯರಲ್ಲಿ ಆದಷ್ಟು ಬೇಗನೆ ಯರಗಟ್ಟಿ ತಾಲ್ಲೂಕಿಗೆ ಸಂಬಂಧಿಸಿದಂತೆ ನೌಕರರ ಸಂಘದ ಘಟಕವನ್ನು ಸ್ಥಾಪನೆ ಮಾಡುವಂತೆ ಮನವಿ ಮಾಡಿಕೊಂಡರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ

ರಾಜ್ಯಾಧ್ಯಕ್ಷರಾದ ಸಿ ಎಸ್ ಷಡಾಕ್ಷರಿಯವರು ನೂತನ ತಾಲ್ಲೂಕಿನ ಬಗ್ಗೆ ನೌಕರ ಜೊತೆ ಸಮಗ್ರವಾಗಿ ಚರ್ಚಿಸಿ ಮಾಹಿತಿಯನ್ನು ಸಂಗ್ರಹಿಸಿದರು. ಆದಷ್ಟು ಬೇಗ ಈ ಕುರಿತು ಒಳ್ಳೆಯ ನಿರ್ಣಯವನ್ನು ಕೈಕೊಳ್ಳುವದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸಂಘದ ಕಾರ್ಯಾಧ್ಯಕ್ಷರಾದ ಮಲ್ಲಿಕಾರ್ಜುನ್ ಬಳ್ಳಾರಿ, ಬೆಳಗಾವಿ ಜಿಲ್ಲೆಯ ಪ್ರಧಾನ ಕಾರ್ಯದರ್ಶಿಗಳಾದ ಶಂಕರ್ ಗೋಕಾವಿ, ನೌಕರರ ಮುಖಂಡರಾದ ಆನಂದ್ ಕುಮಾರ್ ಮೂಗಬಸವ ಶಿವಾನಂದ ಕುಡ ಸೋಮನ್ನವರ ಖಜಾಂಚಿಗಳಾದ ಶ್ರವಣಕುಮಾರ್ ರಾಣವಗೋಳ, ಮುಂತಾದವರು ಉಪಸ್ಥಿತರಿದ್ದರು.

### ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಧಿಕಾರಿ ಡಾ.ರೇಣುಪ್ರಸಾದ್ ಚಾಲನೆ

## ಸಮುದಾಯ ಆರೋಗ್ಯಾಧಿಕಾರಿಗಳಿಂದ ಆರೋಗ್ಯ ಜಾಗೃತಿ ಜಾಥಾ

• ಉದಯವಾಹಿನಿ ಚಿತ್ರದುರ್ಗ


ಉದಯವಾಹಿನಿ ಚಿತ್ರ

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಧಿಕಾರಿಗಳ ಕಛೇರಿಯ ಮುಂಭಾಗದಿಂದ ಪ್ರಾರಂಭಗೊಂಡ ಜಾಥವು ನಗರದ ಮದಕರಿವೃತ್ತ, ಅಂಬೇಡ್ಕರ್ ವೃತ್ತ, ಪ್ರವಾಸಿಮಂದಿರ, ಒನಕೆ ಓಬವ್ವ ವೃತ್ತ ಸೇರಿದಂತೆ ಹಲವು ರಸ್ತೆಗಳಲ್ಲಿ ಸಂಚರಿಸಿ ಸಮುದಾಯ ಆರೋಗ್ಯಾಧಿಕಾರಿಗಳು ಜನರಲ್ಲಿ ಅರೋಗ್ಯದ ಬಗ್ಗೆ ಜಾಗೃತಿ ಮೂಡಿಸಿದರು.**

ಡಾ. ಬಿ ಆರ್ ಅಂಬೇಡ್ಕರ್ ಹಾಗು ಜಗಜೀವನ್ ರಾಮ್‌ರವರ ಜನ್ಮ ದಿನಾಚರಣೆ ಮತ್ತು ಆಯುಷ್ಮಾನ್ ಆರೋಗ್ಯ ಮಂದಿರದ 7ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಚಿತ್ರದುರ್ಗ ಜಿಲ್ಲೆಯ ಸಮಸ್ತ ಸಮುದಾಯ ಆರೋಗ್ಯ ಅಧಿಕಾರಿಗಳ ಸಹಯೋಗದಲ್ಲಿ ಚಿತ್ರದುರ್ಗ ನಗರದಲ್ಲಿ ಸೋಮವಾರ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಗಿತ್ತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಪ್ರಸಾದ್ ಹಸಿರು ನಿಶಾನೆ ತೋರಿಸುವುದರೊಂದಿಗೆ ಜಾಥಕ್ಕೆ ಚಾಲನೆ ನೀಡಿದರು ಇದಕ್ಕೂ ಮೊದಲು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಮ್‌ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು ಆಯುಸ್ಮಾನ್ ಆರೋಗ್ಯ ಮಂದಿರಗಳಲ್ಲಿ ದೊರೆಯುವ ಸೇವೆಗಳನ್ನು ಗ್ರಾಮೀಣ ಭಾಗದ ಜನರ ಮನೆ ಬಾಗಿಲಿಗೆ ತಲುಪಿಸುತ್ತಿರುವ ಸಮುದಾಯ ಆರೋಗ್ಯಾಧಿಕಾರಿಗಳ ಸೇವೆ ಅಮೂಲ್ಯವಾದದ್ದು ಗ್ರಾಮೀಣ ಭಾಗದ ಜನರು ಈ ಸೇವೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕು ಮತ್ತು ಜಿಲ್ಲೆಯನ್ನು ರೋಗ ಮುಕ್ತಗೊಳಿಸಬೇಕು ಎಂದರು. ಜಾಥಾ ಕಾರ್ಯಕ್ರಮದಲ್ಲಿ ಜಿಲ್ಲಾ ಸರ್ವೆಕ್ಷಣಧಿಕಾರಿ ಡಾ. ಚಂದ್ರಶೇಖರ್ RCH ಅಧಿಕಾರಿ ಡಾ. ಅಭಿನವ್. ಹಾಗು ಸಮುದಾಯ ಆರೋಗ್ಯಾಧಿಕಾರಿಗಳ ಜಿಲ್ಲಾ ಸಂಘದ ಅಧ್ಯಕ್ಷ ಮಂಜುನಾಥ್ ಪ್ರಧಾನ ಕಾರ್ಯದರ್ಶಿ ಯಶಸ್ವಿನಿ ಖಜಾಂಚಿ ಪ್ರದೀಪ್. ರಾಜ್ಯ ಪ್ರತಿನಿಧಿ ರಾಕೇಶ್ ಮಹಿಳಾ ಪ್ರತಿನಿಧಿ ಹಿಮಬಿಂದು ಹಾಗು ಜಿಲ್ಲಾ ಮತ್ತು ತಾಲೂಕು ಸಂಘಟನೆಯ ಎಲ್ಲಾ ಪದಾಧಿಕಾರಿಗಳು ಹಾಗು ಸಮಸ್ತ ಸಮುದಾಯ ಆರೋಗ್ಯ ಅಧಿಕಾರಿಗಳು ಹಾಜರಿದ್ದರು.

## ಅಕ್ಕಮಹಾದೇವಿಯಿಂದ ವಚನಗಳ ಮೂಲಕ ಸಮಾಜ ತಿದ್ದುವ ಕೆಲಸ

• ಉದಯವಾಹಿನಿ ಗುಳೇದಗುಡ್ಡ

ಸಮಾಜದಲ್ಲಿ ಮಹಿಳೆಯರಿಗೆ ಪುರುಷರಷ್ಟೇ ಸರಿಸಮಾನ ಸ್ಥಾನಮಾನ ಕಲ್ಪಿಸಬೇಕೆಂದು 12ನೇ ಶತಮಾನದಲ್ಲಿಯೇ ಹೋರಾಟ ಮಾಡಿದ ಧೀರ ವನಿತೆ ಅಕ್ಕಮಹಾದೇವಿ. ಅಕ್ಕಮಹಾದೇವಿ ತನ್ನ ವಚನಗಳ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿ, ಇಂದಿನ ಮಹಿಳೆಯರಿಗೆ ಆದರ್ಶವಾಗಿದ್ದಾಳೆ ಎಂದು ಅಕ್ಕಮಹಾದೇವಿ ದೇವಸ್ಥಾನದ ಕಸ್ತೂರಿಬಾಯಿ ಶರಣಮ್ಮನವರು ಹೇಳಿದರು.

ಪಟ್ಟಣದ ಚೌ ಬಜಾರದಲ್ಲಿನ ಅಕ್ಕಮಹಾದೇವಿಯ ದೇವಸ್ಥಾನದಲ್ಲಿ ನಡೆದ ಅಕ್ಕಮಹಾದೇವಿಯ ಜಯಂತಿಯ ಅಂಗವಾಗಿ ತೊಟ್ಟಿಲೋತ್ಸವ, ಅಕ್ಕಮಹಾದೇವಿ ಮೂರ್ತಿಗೆ ಪೂಜೆ ಸಲ್ಲಿಸಿ, ಮಾತನಾಡಿ, ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಅಕ್ಕಮಹಾದೇವಿಯು ಚಿಕ್ಕ ವಯಸ್ಸಿನಲ್ಲಿಯೇ ರಾಜನನ್ನು ಮದುವೆಯಾದರೂ ವೈಭೋಗದ ಜೀವನ ಬಿಟ್ಟು ಸಮಾಜದಲ್ಲಿದ್ದ ದೇವದಾಸಿ, ವಿಧವಾ ಪದ್ಧತಿ, ಸತಿಸಹಗಮನ ಪದ್ಧತಿಗಳಂತಹ ಅನಿಷ್ಠ ಪದ್ಧತಿಗಳನ್ನು ಹೋಗಲಾಡಿಸಲು ಕಲ್ಯಾಣಕ್ರಾಂತಿಯ ಮೂಲಕ ಹೋರಾಟಕ್ಕಿಳಿದರು ಎಂದರು. ಅಕ್ಕಮಹಾದೇವಿ ಜಯಂತಿ ಅಂಗವಾಗಿ ಐದುದಿನಗಳ ವರೆಗೆ ಕಸ್ತೂರಿಬಾಯಿ ಶರಣಮ್ಮನವರು ಪ್ರವಚನ ನೀಡಿದರು. ಕಾರ್ಯಕ್ರಮದ ಬಳಿಕ ಅನ್ನಸಂತರ್ಪಣೆ ನಡೆಯಿತು. ಅನ್ನಪೂರ್ಣ ವಸ್ತ್ರದ, ಸರೋಜಾ ಅಂಗಡಿ, ಕಸ್ತೂರಿ ನಾಯನೇಗಲಿ, ದ್ರಾಕ್ಷಾಯಿಣಿ ತೆಗ್ಗಿ, ಪ್ರೇಮಾ ಶೆಲ್ಲಿಕೇರಿ, ನೀಲಕ್ಕ ಎಳೆಮೇಲಿ ಮತ್ತಿತರಿದ್ದರು.

### 2025 ಕೋಟಿ ರೂ. ಮೂಲಸೌಕರ್ಯ ಕಾಮಗಾರಿಗೆ ಏ.16ರಂದು ಸಿಎಂ ಚಾಲನೆ: ಈಶ್ವರ ಬಿ.ಖಂಡ್ರೆ

## ಬೀದರ್ ವಿಮಾನಯಾನಕ್ಕೆ ಪ್ರಸಕ್ತ ವರ್ಷಕ್ಕೆ 14 ಕೋಟಿ ರೂ. ಮೀಸಲು

• ಉದಯವಾಹಿನಿ ಬೀದರ

ಕೇಂದ್ರ ಸರ್ಕಾರ ಉಡಾನ್ ಸಬ್ಸಿಡಿ ನಿಲ್ಲಿಸಿದ ಹಿನ್ನೆಲೆಯಲ್ಲಿ ಸ್ಥಗಿತಗೊಂಡಿದ್ದ ಬೀದರ್ - ಬೆಂಗಳೂರು ನಾಗರಿಕ ವಿಮಾನಯಾನ ಪುನಾರಂಭಿಸಲು ಕೆಕೆಆರ್‌ಡಿಬಿಯಿಂದ ಈ ವರ್ಷ 14 ಕೋಟಿ ರೂ. ಮೀಸಲಿಡಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಜಿಲ್ಲಾ ಪಂಚಾಯತ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಏ.16ರಂದು ಸಂಜೆ 4 ಗಂಟೆಗೆ ಬೀದರ್ ವಿಮಾನ ನಿಲ್ದಾಣಕ್ಕೆ ಆಗಮಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿಮಾನ ನಿಲ್ದಾಣದ ಹೊರಗೆ ನಡೆಯುವ ಕಾರ್ಯಕ್ರಮದಲ್ಲಿ 17ರಂದು ಬೆಳಗ್ಗೆ ಬೀದರ್‌ನಿಂದ ಬೆಂಗಳೂರಿಗೆ ತೆರಳಲಿರುವ ಆಯ್ದ 5 ಪ್ರಯಾಣಿಕರಿಗೆ ಬೋರ್ಡಿಂಗ್ ಪಾಸ್ ವಿತರಿಸುವ ಮೂಲಕ ನಾಗರಿಕ ವಿಮಾನಯಾನ ಸೇವೆಯ ಪುನಾರಂಭಕ್ಕೆ ವಿಧ್ಯುಕ್ತ ಚಾಲನೆ ನೀಡಲಿದ್ದಾರೆ ಎಂದರು. ಬೀದರ್ ಜಿಲ್ಲೆಯಲ್ಲಿ ಸುಮಾರು 200 ಕೋಟಿ ರೂ.ಗೂ ಅಧಿಕ ವೆಚ್ಚದಲ್ಲಿ ಹಲವು ಪೂರ್ಣಗೊಂಡಿದ್ದು, ಈ ಪೈಕಿ 10 ಕಾಮಗಾರಿ ಮತ್ತು ಯೋಜನೆಗಳಾದ ಔರಾದ್ ನ ನಾಗೂರ್, ಸಂತಪೂರ್ ನಲ್ಲಿ 220 ಕೆ.ವಿ. ಉಪಕೇಂದ್ರಗಳ ಉದ್ಘಾಟನೆ (114 ಕೋಟಿ ರೂ.), ಬೀದರ್ ನಗರಸಭೆ ಮತ್ತು ಭಾಲ್ಕಿ ಪುರಸಭೆ ವ್ಯಾಪ್ತಿಯ ವಿವಿಧ ಕಾಮಗಾರಿಗಳು (49 ಕೋಟಿ ರೂ.), ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಭಾಲ್ಕಿಯಲ್ಲಿ 400 ಮನೆಗಳ ಹಸ್ತಾಂತರ (23 ಕೋಟಿ ರೂ.), ಬ್ರಿಮ್ಸ್ ನಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಮತ್ತು ಕ್ಯಾಥ್ ಲ್ಯಾಬ್ (15.11 ಕೋಟಿ ರೂ.) ಹಾಗೂ ಜೊತೆಗೆ ವಿದ್ಯಾರ್ಥಿ ನಿಲಯ, ಅಂಗನವಾಡಿ ಕೇಂದ್ರ, ಶಾಲೆ ಮತ್ತು ಆರೋಗ್ಯ ಕೇಂದ್ರ ಕಟ್ಟಡ ಸೇರಿದಂತೆ ವಿವಿಧ ಕಾಮಗಾರಿಗಳ ಲೋಕಾರ್ಪಣೆ ಮಾಡಲಿದ್ದಾರೆ ಎಂದು ತಿಳಿಸಿದರು. ಇದರ ಜೊತೆಗೆ ಭಾಲ್ಕಿ ತಾ. ಮೆಹಕರ್ ಏತನೀರಾವರಿ ಯೋಜನೆ ಹಾಗೂ ಔರಾದ್ ತಾ. 36 ಕೆರೆ ತುಂಬಿಸುವ ಯೋಜನೆ (ಒಟ್ಟು ಮೊತ್ತ 582 ಕೋಟಿ ರೂ.), ಬೀದರ್ ತಾ. ಬಗದಲ್ ಹಾಗೂ ಇತರ 104 ಜನವಸತಿ ಮತ್ತು ಚಿಟಗುಪ್ಪಾ ತಾ.ಮನ್ನಾಖೇಳಿ ಹಾಗೂ 32 ಜನವಸತಿಗಳಿಗೆ ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆ -(330 ಕೋಟಿ ರೂ.), ಬೀದರ್ ನಗರಸಭೆ, ಬಸವಕಲ್ಯಾಣ, ಭಾಲ್ಕಿ, ಹುಮನಾಬಾದ್, ಚಿಟಗುಪ್ಪ ಮತ್ತು ಔರಾದ್ ಪುರಸಭೆ ವ್ಯಾಪ್ತಿಯಲ್ಲಿ ಜಲಮೂಲಗಳ ಪುನಶ್ಚೇತನ ಮತ್ತು ಉದ್ಯಾನ ಅಭಿವೃದ್ಧಿ (100 ಕೋಟಿ ರೂ.), ನಗರಸಭೆ, ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಮಾಹಿತಿ ನೀಡಿದರು.


ಉದಯವಾಹಿನಿ ಚಿತ್ರ

**ಇದೇ ಶುಭ ಸಂದರ್ಭದಲ್ಲಿ 2025 ಕೋಟಿ ರೂ. ಮೌಲ್ಯದ ವಿವಿಧ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿ ಮತ್ತು ಯೋಜನೆಗಳ ಶಂಕುಸ್ಥಾಪನೆ ಮತ್ತು ಪೂರ್ಣಗೊಂಡ ಕಾಮಗಾರಿಗಳ ಉದ್ಘಾಟನೆಯನ್ನೂ ಮಾನ್ಯ ಮುಖ್ಯಮಂತ್ರಿಯವರು ನೆರವೇರಿಸಲಿದ್ದಾರೆ.**

### ಕರುನಾಡಿಗೆ ಕಿರೀಟ ಪ್ರಾಯ ಬೀದರ್ ಜಿಲ್ಲೆ

**ಸರ್ವಧರ್ಮ ಸಮನ್ವಯದ ನಾಡು. ಜಿಲ್ಲೆಯಲ್ಲಿ ಇತಿಹಾಸ ಪ್ರಸಿದ್ಧ ಬಸವಕಲ್ಯಾಣದ ಅನುಭವ ಮಂಟಪ, ಝರಣಿ ನರಸಿಂಹಸ್ವಾಮಿ ಕ್ಷೇತ್ರ, ಪಾಪನಾಶ, ನಾನಕ್ ಝೀರಾ ಗುರುದ್ವಾರ, ಮಹಮದ್ ಗವಾನ್ ಮದರಸಾ ಹಾಗೂ ಮೆಥೋಡಿಸ್ಟ್ ಚರ್ಚ್ ಇದೆ. ಈಗ ಹೊನ್ನಿಕೇರಿ ಅರಣ್ಯ ಪ್ರದೇಶವನ್ನು ಪರಿಸರ ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿ ಪಡಿಸುತ್ತಿದ್ದು, ಬೀದರನಲ್ಲಿ ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶವಿದೆ. ಹೀಗಾಗಿ ಈ ವಿಮಾನಯಾನ ಸೇವೆ ಮುಂದಿನ ದಿನಗಳಲ್ಲಿ ದೇಶ ವಿದೇಶಗಳ ಪ್ರವಾಸಿಗರಿಗೆ ನೆರವಾಗಲಿದೆ. ನಾಗರಿಕ ವಿಮಾನಯಾನ ಸೇವೆ ಪುನಾರಂಭಕ್ಕೆ ಸಹಕರಿಸಿದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಮೂಲಸೌಕರ್ಯಾಭಿವೃದ್ಧಿ ಸಚಿವರು ಹಾಗೂ ಸಚಿವ ಸಂಪುಟದ ಎಲ್ಲಾ ಸಹೋದ್ಯೋಗಿಗಳಿಗೆ ಧನ್ಯವಾದ ಅರ್ಪಿಸುವುದಾಗಿ ಖಂಡ್ರೆ ತಿಳಿಸಿದರು.**

ಮಿನಿ ನ್ಯೂಸ್

# ಉಕ್ರೇನ್‌ಗೆ ಬಂದು ನಮ್ಮ ಪರಿಸ್ಥಿತಿ ನೋಡಿ: ಝೆಲೆನ್ಸ್ಕಿ

**ಉಕ್ರೇನ್:** ಅಧ್ಯಕ್ಷ ಮಾಡಿಕೊಂಡ ಒಂದೇ ಒಂದು ಸಣ್ಣ ತಪ್ಪು ಆ ದೇಶವನ್ನೇ ಪೂರ್ತಿ ಮುಳುಗಿಸಿ ಹಾಕಿದೆ. ರಷ್ಯಾ ವಿರುದ್ಧ ಶಾಂತಿ ಮಾತುಕತೆ ಮೂಲಕ ಯುದ್ಧ ನಿಲ್ಲಿಸಬಹುದು ಎಂಬ ಸಲಹೆ ನೀಡಿದರೂ, ತನ್ನ ದುರಹಂಕಾರ ದಡ್ಡತನದ ಪರಿಣಾಮ ವೊಲೊಡಿಮಿರ್ ಝೆಲೆನ್ಸ್ಕಿ ಉಕ್ರೇನ್ ದೇಶವನ್ನೇ ಬಲಿ ನೀಡಿದ್ದಾರೆ ಎಂಬ ಗಂಭೀರ ಆರೋಪ ಇದೆ.

ಹೀಗಿದ್ದಾಗ ದಿಢೀರ್ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಳಿ ಏನಂತಾ ಮನವಿ ಮಾಡಿದ್ದಾರೆ ಗೊತ್ತಾ ಈ ಝೆಲೆನ್ಸ್ಕಿ ಅಮೆರಿಕ ಹಣ ಕೊಡದೆ ಉಕ್ರೇನ್ ಸೇನೆಯ ಪಾಡು ಯಾರಿಗೂ ಬೇಡವಾಗಿದೆ. ಯಾಕಂದ್ರೆ, ರಷ್ಯಾ ರೀತಿಯ ಬಲಿಷ್ಠ ದೇಶದ ವಿರುದ್ಧ ಹೋರಾಟ ನಡೆಸಲು ಆಗದೆ ಉಕ್ರೇನ್ ಒದ್ದಾಡಿದೆ. ಹಾಗೇ ರಷ್ಯಾ ಸೇನೆ ನಿಧಾನವಾಗಿ ಉಕ್ರೇನ್ ಒಳಗೆ ನುಗ್ಗುತ್ತಾ, ಬಹುತೇಕ ಉಕ್ರೇನ್ ನೆಲದ ಮೇಲೆ ತನ್ನ ಹಿಡಿತ ಸಾಧಿಸಿದೆ.



ಹೀಗಿದ್ದಾಗ ಅಮೆರಿಕ ನೀಡುತ್ತಿದ್ದ ಅನುದಾನ ಕೂಡ ಬಂದ್ ಆಗಿದ್ದು, ವಿಲವಿಲ ಒದ್ದಾಡಿ ಹೋಗಿದೆ ಉಕ್ರೇನ್. ಯುರೋಪ್ ದೇಶಗಳು ಮಾಡುತ್ತಿರುವ ಸಹಾಯವೇ ಇದೀಗ ಉಕ್ರೇನ್‌ಗೆ ಆಧಾರವಾಗಿದೆ.

ಹೌದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಳಿ ಉಕ್ರೇನ್ ಅಧ್ಯಕ್ಷನಾದ ವೊಲೊಡಿಮಿರ್ ಝೆಲೆನ್ಸ್ಕಿ ಮಹತ್ವದ ಮನವಿ ಮಾಡಿದ್ದಾರೆ.

**ಟ್ರಂಪ್ ಬಳಿ ಮನವಿ**

ಈ ಮೂಲಕ ಉಕ್ರೇನ್ ಪರಿಸ್ಥಿತಿಯನ್ನು ನೀವು ಖುದ್ದಾಗಿ ನೋಡಿ, ರಷ್ಯಾ ದಾಳಿ ಹಿನ್ನೆಲೆಯಲ್ಲಿ ಉಕ್ರೇನ್ ಭಾರಿ ದೊಡ್ಡ ಸಮಸ್ಯೆಗೆ ಸಿಲುಕಿ ಒದ್ದಾಡಿ ಹೋಗಿದೆ. ಹೀಗಾಗಿ ನೀವೆ ಉಕ್ರೇನ್‌ಗೆ ಬಂದು ಪರಿಸ್ಥಿತಿ ನೋಡಿ ಎಂದು ಟ್ರಂಪ್‌ರ ಬಳಿ ಬೇಡಿದ್ದಾರೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ. ಅಂತಾರಾಷ್ಟ್ರೀಯ ಮಾಧ್ಯಮಕ್ಕೆ ಸಂದರ್ಶನ ನೀಡಿರುವ ವೊಲೊಡಿಮಿರ್ ಝೆಲೆನ್ಸ್ಕಿ, ನಾನು ಅಮೆರಿಕ ಅಧ್ಯಕ್ಷರಾದ ಟ್ರಂಪ್ ಅವರ ಬಳಿ ವಿನಂತಿಸುತ್ತೇನೆ. ದಯವಿಟ್ಟು ಉಕ್ರೇನ್ ದೇಶಕ್ಕೆ ಭೇಟಿ ನೀಡಿ ರಷ್ಯಾ ಮಾಡಿರುವ ಕೃತ್ಯ ನೋಡಿ. ಪರಿಸ್ಥಿತಿ ತುಂಬಾ ಕಠಿಣವಾಗಿದೆ, ಯುದ್ಧ ಭೀಕರತೆಗೆ ಉಕ್ರೇನ್ ನಲುಗಿ ಹೋಗಿದೆ ಎಂದು ಜಗತ್ತಿನ ಎದುರು ಕಂಬನಿ ಮಿಡಿದಿದ್ದಾರೆ. ಈ ನಡುವೆ ಡೊನಾಲ್ಡ್ ಟ್ರಂಪ್ ಕೂಡ ಯುದ್ಧ ನಿಲ್ಲಿಸಲು ಎಲ್ಲಾ ರೀತಿಯ ಪ್ರಯತ್ನ ಮಾಡ್ತಾ ಇದ್ದಾರೆ.

## ಟ್ರಂಪ್ ಕೊಲ್ಲಲು ಹಣಬೇಕೆಂದು ಹೆತ್ತವರನ್ನೇ ಕೊಂದ ಬಾಲಕ

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಹತ್ಯೆ ಮಾಡಲು 17 ವರ್ಷದ ಬಾಲಕ ನಿಕಿತಾ ಕ್ಯಾಸಪ್ ಎಂಬಾತ ಯೋಜನೆ ರೂಪಿಸಿದ್ದ ಎನ್ನುವ ಆತಂಕಕಾರಿ ವಿಚಾರ ಬಹಿರಂಗಗೊಂಡಿದೆ. ಡೊನಾಲ್ಡ್ ಟ್ರಂಪ್ ಕೊಲ್ಲಲು ಸಾಕಷ್ಟು ಹಣ ಖರ್ಚು ಮಾಡಬೇಕಾಗಬಹುದು ಎನ್ನುವ ಕಾರಣಕ್ಕೆ ತನ್ನ ಹೆತ್ತವರನ್ನೇ ಕೊಂದು ಅವರ ಹಣವನ್ನು ದೋಚಿ ಈತ ಪರಾರಿಯಾಗಿದ್ದ. ಟ್ರಂಪ್ ಅವರನ್ನು ಹತ್ಯೆ ಮಾಡಿ ಸರ್ಕಾರವನ್ನು ಉರುಳಿಸುವ ಗುರಿಯೊಂದಿಗೆ, ಅವನು ಮೊದಲು ತನ್ನ ಹೆತ್ತವರನ್ನು ಕೊಲೆ ಮಾಡಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಫೆಬ್ರವರಿ 11 ರಂದು ವೌಕೇಶಾದಲ್ಲಿ ತನ್ನ ತಾಯಿ 35 ವರ್ಷದ ಟಟಿಯಾನಾ ಕಾಸಾಪ್ ಮತ್ತು ಮಲತಂದೆ 51 ವರ್ಷದ ಡೊನಾಲ್ಡ್ ಮೇಯರ್ ಅವರನ್ನು ಗುಂಡು ಹಾರಿಸಿ ಕ್ಯಾಸಪ್ ಹತ್ಯೆಗೈದಿದ್ದಕ್ಕಾಗಿ ಮಾರ್ಚ್‌ನಲ್ಲಿ ಬಂಧಿಸಲಾಗಿತ್ತು ಎಂದು ಫೆಡರಲ್ ಅಧಿಕಾರಿಗಳು ತಿಳಿಸಿದ್ದಾರೆ, ಅವರಿಬ್ಬರ ಮೃತದೇಹಗಳಲ್ಲಿ ಗುಂಡೇಟುಗಳಿದ್ದವು. ವಾರಂಟ್‌ನಲ್ಲಿ ಈ ಆಘಾತಕಾರಿ ವಿಷಯವನ್ನು ಬಹಿರಂಗಪಡಿಸಲಾಗಿದೆ. ಬಾಲಕನ ಮೇಲೆ ತನ್ನ ಹೆತ್ತವರನ್ನು ಕೊಲೆ ಮಾಡಿದ ಆರೋಪ ಹೊರಿಸಲಾಗಿದೆ. ಫೆಬ್ರವರಿಯಲ್ಲಿ ಮಿಲ್ವಾಕಿ ಅವರ ನಿವಾಸದಲ್ಲಿ ಕ್ಯಾಸಪ್ ಇಬ್ಬರನ್ನು ಗುಂಡಿಕ್ಕಿ ಕೊಲೆ ಮಾಡಿ ಕೊಳೆತ ದೇಹದೊಂದಿಗೆ ವಾರಗಳ ಇದ್ದು ನಂತರ 14,000ಡಾಲರ್ ನಗದು ಮತ್ತು ಪಾಸ್ ಪೋರ್ಟ್ ನಾಯಿಯೊಂದಿಗೆ ಪರಾರಿಯಾಗಿದ್ದ ಅಧಿಕಾರಿಗಳು ಆತನನ್ನು ಕಾನ್ಸಾಸ್‌ನಿಂದ ಬಂಧಿಸಿದ್ದರು.

### ಜಿಪಿಎಸ್ ಸಿಗ್ನಲ್‌ಗಳ ಸ್ಪೂಫಿಂಗ್ ಸೈಬರ್ ದಾಳಿಗೆ ತುತ್ತಾಗುವ ಐಎಎಫ್ ವಿಮಾನಗಳು

## ಸೈಬರ್ ದಾಳಿಗೆ ತುತ್ತಾದ ಮಯನ್ಮಾರ್: ಆಪರೇಷನ್ ಬ್ರಹ್ಮ ಹೆಸರಿನ ಮಾನವೀಯ ನೆರವು

**ಹೊಸದಿಲ್ಲಿ:** ಆಪರೇಷನ್ ಬ್ರಹ್ಮ ಅಡಿಯಲ್ಲಿ ಕಳೆದ ಮಾ.29ರಿಂದ ಮಯನ್ಮಾರ್ ಭೂಕಂಪ ಸಂತ್ರಸ್ತರಿಗೆ ಮಾನವೀಯ ನೆರವು ಒದಗಿಸುತ್ತಿರುವ ಭಾರತೀಯ ವಾಯುಸೇನೆ(ಐಎಎಫ್)ಯ ವಿಮಾನಗಳು, ಸೈಬರ್ ದಾಳಿಗೆ ತುತ್ತಾಗಿವೆ ಎಂಬ ಆಘಾತಕಾರಿ ಅಂಶ ಬಯಲಾಗಿದೆ.

ವಾಯು ಮಾರ್ಗವನ್ನೇ ಬದಲಿಸಬಲ್ಲ ಜಿಪಿಎಸ್ ಸಿಗ್ನಲ್‌ಗಳ ಸ್ಪೂಫಿಂಗ್ ಎಂಬ ಸೈಬರ್ ದಾಳಿಯನ್ನು ಈ ವಿಮಾನಗಳು ಎದುರಿಸುತ್ತಿದ್ದು, ವಾಯುಸೇನೆ ಕಟ್ಟೆಚ್ಚರವಹಿಸಿದೆ.

ಈ ಕುರಿತು ಮಾಹಿತಿ ನೀಡಿರುವ ಐಎಎಐಫ್ ಅಧಿಕಾರಿಗಳು, ಆಪರೇಷನ್ ಬ್ರಹ್ಮ ಅಡಿಯಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ನಮ್ಮ ಪೈಲೆಟ್‌ಗಳು ಜಿಪಿಎಸ್ ಸಿಗ್ನಲ್‌ಗಳ ಸ್ಪೂಫಿಂಗ್ ಸೈಬರ್ ದಾಳಿಯನ್ನು ಎದುರಿಸುತ್ತಿದ್ದು, ಕೂಡಲೇ ಕಾರ್ಯಪ್ರವೃತ್ತರಾಗಿ ಜಿಪಿಎಸ್ ವ್ಯವಸ್ಥೆಗೆ ಬದಲಾಗಿ ಐಎನ್‌ಎಸ್ ವ್ಯವಸ್ಥೆಯ ತಮ್ಮ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ. ಮಯನ್ಮಾರ್‌ನಲ್ಲಿ ಭೂಕಂಪ ಸಂಭವಿಸಿದ ಬಳಿಕ ಭಾರತೀಯ ವಾಯಯುಪಡೆಯು ಆಪರೇಷನ್ ಬ್ರಹ್ಮ ಹೆಸರಿನ ಮಾನವೀಯ ನೆರವು ಕಾರ್ಯಾಚರಣೆಯನ್ನು ಆರಂಭಿಸಿತ್ತು. ಇದರ ಭಾಗವಾಗಿ ಮೊಟ್ಟ ಮೊದಲ ವಿಮಾನವು ಕಳೆದ ಮಾ.29ರಂದು ಐಎಫ್‌ನ ಅ-130ಎ ಸೂಪರ್ ಹರ್ಕ್ಯುಲಸ್' ವಿಮಾನವು, 15 ಟನ್ ಪರಿಹಾರ ಸಾಮಗ್ರಿಗಳನ್ನು ಹೊತ್ತು ಯಾಂಗೋನ್‌ಗೆ ಬಂದಿಳಿದಿತ್ತು. ಅದಾದ ಬಳಿಕ ಅ-17 ಗ್ಲೋಬ್‌ಮಾಸ್ಟರ್-ಐಎಫ್ ವಿಮಾನಗಳೂ ಕೂಡ ಪರಿಹಾರ ಸಾಮಗ್ರಿಗಳನ್ನು ಹೊತ್ತೊಯ್ದವು. ಆದರೆ ಈ ವಿಮಾನಗಳು ಮಯನ್ಮಾರ್ ವಾಯುಪ್ರದೇಶವನ್ನು ಪ್ರವೇಶಿಸುತ್ತಿದ್ದಂತೇ, ಜಿಪಿಎಸ್ ಸಿಗ್ನಲ್‌ಗಳಲ್ಲಿ ದೋಷ ಕಂಡುಬಂದಿತು. ಇದು ಸೈಬರ್ ದಾಳಿ ಎಂದು ಅರಿತ ಪೈಲೆಟ್‌ಗಳು, ಕೂಡಲೇ ತಮ್ಮ ವಾಯು ಮಾರ್ಗ ನಿರ್ದೇಶನಕ್ಕೆ ಐಎನ್‌ಎಸ್ ವ್ಯವಸ್ಥೆಯನ್ನು ಬಳಸಿಕೊಂಡರು ಎಂದು ಐಎಫ್ ಮೂಲಗಳು ತಿಳಿಸಿವೆ.

- ಭೂಕಂಪಪೀಡಿತ ಮಯನ್ಮಾರ್‌ಗೆ ಮಾನವೀಯ ನೆರವು ನೀಡುತ್ತಿರುವ ಐಎಫ್
- ಮಯನ್ಮಾರ್‌ನತ್ತ ಹೊರಡುವ ಐಎಫ್ ವಿಮಾನಗಳ ಮೇಲೆ ಸೈಬರ್ ದಾಳಿ
- ಜಿಪಿಎಸ್ ಸಿಗ್ನಲ್‌ಗಳ ಸ್ಪೂಫಿಂಗ್ ಸೈಬರ್ ದಾಳಿಗೆ ತುತ್ತಾಗುವ ಐಎಫ್ ವಿಮಾನಗಳು



ಆಂತರಿಕ ಸಂಚರಣ ವ್ಯವಸ್ಥೆ (ಐಎನ್‌ಎಸ್) ಎಂದರೆ, ಇದು ಉಪಗ್ರಹಗಳನ್ನು ಅವಲಂಬಿಸದ ಒಂದು ನ್ಯಾವಿಗೇಷನ್ ವ್ಯವಸ್ಥೆಯಾಗಿದೆ. ಇದು ಪೈಲೆಟ್‌ಗಳಿಗೆ ತಮ್ಮ ಗಮ್ಯ ಸ್ಥಾನದ ಬಗ್ಗೆ ನಿಖರವಾದ ಮಾಹಿತಿಯನ್ನು ಒದಗಿಸುತ್ತದೆ. ಜಿಪಿಎಸ್ ಸ್ಪೂಫಿಂಗ್ ತುಂಬಾ ಅಪಾಯಕಾರಿಯಾಗಬಲ್ಲದು. ಇದು ವಿಮಾನವನ್ನು ತಪ್ಪಾದ ಮಾರ್ಗದಲ್ಲಿ ಕೊಂಡೊಯ್ಯಬಹುದು ಮತ್ತು ಅಪಘಾತಗಳಿಗೆ ಕಾರಣವಾಗಬಹುದು.

ಈ ತೊಂದರೆಗಳ ನಡುವೆಯೂ ಮಯನ್ಮಾರ್‌ಗೆ ಮಾನವೀಯ ನೆರವು ನೀಡುವುದನ್ನು ಮುಂದುವರೆಸಿರುವ ಭಾರತೀಯ ವಾಯುಸೇನೆ, ಸಂತ್ರಸ್ತರಿಗೆ ಅಗತ್ಯವಿರುವ ವಸ್ತುಗಳನ್ನು ನಿರಂತರವಾಗಿ ತಲುಪಿಸುತ್ತಿದೆ. ಸೈಬರ್ ದಾಳಿಯಂತಹ ಸವಾಲುಗಳನ್ನು ಎದುರಿಸಲು ಐಎಫ್ ಸನ್ನದ್ಧವಾಗಿದೆ. ಪೈಲಟ್‌ಗಳು ತರಬೇತಿ ಮತ್ತು ತಂತ್ರಜ್ಞಾನದ ಸಹಾಯದಿಂದ ಯಾವುದೇ ಪರಿಸ್ಥಿತಿಯನ್ನು ನಿಭಾಯಿಸಲು ಸಮರ್ಥರಾಗಿದ್ದಾರೆ ಎಂದು ಭಾರತೀಯ ವಾಯುಸೇನೆ ಸ್ಪಷ್ಟಪಡಿಸಿದೆ.

**ವಿಮಾನದ ಸ್ಥಳದ ಬಗ್ಗೆ ಗೊಂದಲ**

**ಜಿಪಿಎಸ್ ಸ್ಪೂಫಿಂಗ್ ಸಾಮಾನ್ಯವಾಗಿ ಪೈಲಟ್‌ಗಳಿಗೆ ವಾಯುಮಾರ್ಗದ ತಪ್ಪು ಮಾಹಿತಿಯನ್ನು ನೀಡುತ್ತದೆ. ಇದರಿಂದ ವಿಮಾನದ ಸ್ಥಳದ ಬಗ್ಗೆ ಗೊಂದಲ ಉಂಟಾಗುತ್ತದೆ. ಆದರೆ ಮಯನ್ಮಾರ್‌ನಲ್ಲಿ ಐಎಫ್ ಪೈಲಟ್‌ಗಳು ತಕ್ಷಣವೇ ಐಎನ್ ಎಸ್‌ಗ ವ್ಯವಸ್ಥೆಗೆ ಬದಲಾಗುವ ಮೂಲಕ, ಸಂಭಾವ್ಯ ಗಂಡಾಂತರದಿಂದ ಪಾರಾದರು. ಐಎನ್‌ಎಸ್ ಅತ್ಯಂತ ನಿಖರವಾದ ವ್ಯವಸ್ಥೆಯಾಗಿದ್ದು, ಕಾರ್ಯಾಚರಣೆಯನ್ನು ಪೂರ್ಣಗೊಳಿಸಲು ಸಹಾಯ ಮಾಡಿತು , ಎಂದು ಭಾರತೀಯ ವಾಯುಸೇನೆ ತಿಳಿಸಿದೆ.**

**ಮಯನ್ಮಾರ್ ಭೂಕಂಪ ಸಂತ್ರಸ್ತರಿಗೆ ನೆರವು ನೀಡುತ್ತಿರುವ ಭಾರತೀಯ ವಿಮಾನಗಳ ಈ ಸೈಬರ್ ದಾಳಿಯ ಹಿಂದೆ ಯಾರ ಕೈವಾಡವಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದಾಗ್ಯೂ, ಚೀನಾ ಈ ಪ್ರದೇಶದಲ್ಲಿ ತನ್ನ ಪ್ರಭಾವ ಹೆಚ್ಚಿಸುತ್ತಿದ್ದು, ಇದರಲ್ಲಿ ಚೀನಾದ ಕೈವಾಡ ಶಂಕೆ ಇದೀಗ ವ್ಯಕ್ತವಾಗಿದೆ. ಅಷ್ಟೇ ಅಲ್ಲದೇ ಮಯನ್ಮಾರ್ ವಿದ್ರೋಹಿ ಗುಂಪುಗಳ ಕೈವಾಡದ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ ಎಂದು ಭಾರತೀಯ ವಾಯುಸೇನೆ ಹೇಳಿದೆ.**

## ಅಮೆರಿಕಾ ಪ್ರವಾಸ ಮುನ್ನ ಅಪಾಯ ತಿಳಿಯಿರಿ: ಚೀನಾ ಸಲಹೆ

**ಸಿಂಗಾಪುರ:** ಇತ್ತೀಚಿನ ವಾರಗಳಲ್ಲಿ ಜಗತ್ತಿನ ಹಲವಾರು ದೇಶಗಳು ಅಮೆರಿಕಕ್ಕೆ ಪ್ರಯಾಣಿಸುವ ಬಗ್ಗೆ ಹೊಸ ಸಲಹೆ ಮತ್ತು ಎಚ್ಚರಿಕೆ ನೀಡಿವೆ, ಚೀನಾ ತನ್ನ ನಾಗರಿಕರು ಅಮೆರಿಕಕ್ಕೆ ಭೇಟಿ ನೀಡುವ ಮೊದಲು ಅಪಾಯಗಳನ್ನು ಸಂಪೂರ್ಣವಾಗಿ ತಿಳಿದು ಹೊರಡುವಂತೆ ಸೂಚಿಸಿದೆ.

ಕೆನಡಾ ಮತ್ತು ಇಂಗ್ಲೆಂಡ್, ಜರ್ಮನಿ, ಡೆನ್ಮಾರ್ಕ್ ಮತ್ತು ಫಿನ್‌ಲ್ಯಾಂಡ್‌ನಂತಹ ಯುರೋಪಿಯನ್ ದೇಶಗಳು ಸಹ ತಮ್ಮ ನಾಗರಿಕರಿಗೆ ಅಮೆರಿಕಕ್ಕೆ ಭೇಟಿ ನೀಡುವ ಬಗ್ಗೆ ಹೊಸ ಮಾರ್ಗದರ್ಶನ ನೀಡಿದ್ದು ಎಚ್ಚರಿಕೆವಹಿಸುವಂತೆ ಸೂಚಿಸಲಾಗಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಎರಡನೇ ಅವಧಿಯ ಆರಂಭಿಕ ತಿಂಗಳುಗಳಲ್ಲಿ ಗಡಿ ನೀತಿಗಳು, ವೀಸಾ ಪರಿಶೀಲನೆ ಕಾರ್ಯವಿಧಾನಗಳು ಮತ್ತು ಅಮೆರಿಕದಲ್ಲಿ ದಾಖಲೆರಹಿತ ವಲಸಿಗರ ಮೇಲೆ ಕೇಂದ್ರೀಕರಿಸಿದ ಹಲವಾರು ವಲಸೆ-ಸಂಬಂಧಿತ ಕಾರ್ಯನಿರ್ವಾಹಕ ಆದೇಶಗಳನ್ನು ಘೋಷಿಸಿದ ನಂತರ ವಿಶ್ವದ ಹಲವು ದೇಶಗಳು ತಮ್ಮ ಪ್ರಜೆಗಳಿಗೆ ಎಚ್ಚರಿಕೆಯ ಮಾರ್ಗಸೂಚಿ ಹೊರಡಿಸಿದ್ದಾರೆ.

ಏಪ್ರಿಲ್ 2ರಂದು ಘೋಷಿಸಲಾದ ಡೊನಾಲ್ಡ್ ಟ್ರಂಪ್ ಅವರ ''ವಿಮೋಚನಾ ದಿನ'' ಸುಂಕಗಳಿಂದ ಉಂಟಾದ ವ್ಯಾಪಾರ ಯುದ್ಧದ ಮಧ್ಯೆ, ಚೀನಾದ ಇತ್ತೀಚಿನ ಕ್ರಮ ಬಂದಿದೆ, ಇದು ಎಲ್ಲಾ ಆಮದುಗಳ ಮೇಲೆ ಶೇಕಡಾ 10 ರಷ್ಟು ಮೂಲ ಸುಂಕವನ್ನು ವಿಧಿಸಿತು, ಕೆಲವು ವ್ಯಾಪಾರ ಪಾಲುದಾರರಿಂದ ಆಮದುಗಳ ಮೇಲೆ ಹೆಚ್ಚಿನ ಸುಂಕಗಳನ್ನು ವಿಧಿಸಿದೆ.

ಡೊನಾಲ್ಡ್ ಟ್ರಂಪ್ ಅಂದಿನಿಂದ ಹೆಚ್ಚಿನ ಸುಂಕಗಳ ಮೇಲೆ 90 ದಿನಗಳ ವಿರಾಮ ಘೋಷಿಸಿದ್ದಾರೆ, ಆದರೆ ಚೀನಾದ ಮೇಲೆ ದ್ವಿಗುಣಗೊಳಿಸಿದ್ದಾರೆ ಮತ್ತು ಎರಡೂ ದೇಶಗಳು ಪ್ರತಿಯಾಗಿ ಸುಂಕ ಹೆಚ್ಚಳವನ್ನು ವ್ಯಾಪಾರ ಮಾಡುತ್ತಿವೆ.ಡೊನಾಲ್ಡ್ ಟ್ರಂಪ್ ವಿಧಿಸಿದ ಇದೇ ರೀತಿಯ ಸುಂಕಗಳಿಗೆ ಪ್ರತೀಕಾರವಾಗಿ ಬೀಜಿಂಗ್ ಅಮೆರಿಕದ ಆಮದುಗಳ ಮೇಲೆ ಸುಂಕ ಹೆಚ್ಚಿಸಿದ ನಂತರ ಚೀನಾ ಪ್ರವಾಸಿಗರು ಅಮೆರಿಕಕ್ಕೆ ಪ್ರಯಾಣಿಸುವ ಮೊದಲು ಅಪಾಯಗಳನ್ನು ಸಂಪೂರ್ಣವಾಗಿ ನಿರ್ಣಯಿಸಲು'' ಎಚ್ಚರಿಸಿದೆ.

''ಚೀನಾ-ಅಮೆರಿಕಾ ವ್ಯಾಪಾರ ಸಂಬಂಧಗಳಲ್ಲಿನ ಕ್ಷೀಣತೆ ಮತ್ತು ಯುನೈಟೆಡ್ ಸ್ಟೇಟ್ಸ್‌ನಲ್ಲಿನ ದೇಶೀಯ ಭದ್ರತಾ ಪರಿಸ್ಥಿತಿಯಿಂದಾಗಿ, ಚೀನಾದ ಪ್ರವಾಸಿಗರು ಅಮೆರಿಕಕ್ಕೆ ಪ್ರಯಾಣಿಸುವ ಮೊದಲು ಅಪಾಯಗಳನ್ನು ಸಂಪೂರ್ಣವಾಗಿ ನಿರ್ಣಯಿಸಲು ಸಲಹೆ ನೀಡುತ್ತೇವೆ ಎಂದು ಬೀಜಿಂಗ್‌ನ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಬ್ರಿಟನ್‌ನ ವಿದೇಶಾಂಗ ಕಚೇರಿಯಿಂದ ಆನ್‌ಲೈನ್‌ನಲ್ಲಿ ಪ್ರಕಟಿಸಲ್ಪಟ್ಟ ಮತ್ತು ಇತ್ತೀಚೆಗೆ ಮಾರ್ಚ್ 14 ರಂದು ನವೀಕರಿಸಲಾದ ಅಮೆರಿಕಕ್ಕೆ ಪ್ರಸ್ತುತ ಬ್ರಿಟಿಷ್ ಪ್ರಯಾಣ ಸಲಹೆಯಲ್ಲಿ ''ನೀವು ಎಲ್ಲಾ ಪ್ರವೇಶ, ವೀಸಾ ಮತ್ತು ಇತರ ಪ್ರವೇಶ ಷರತ್ತು ಪಾಲಿಸಬೇಕು. ಅಮೆರಿಕದಲ್ಲಿನ ಅಧಿಕಾರಿಗಳು ಪ್ರವೇಶ ನಿಯಮಗಳನ್ನು ಕಟ್ಟುನಿಟ್ಟಾಗಿ ನಿಗದಿಪಡಿಸುತ್ತಾರೆ ಮತ್ತು ಜಾರಿಗೊಳಿಸುತ್ತಾರೆ. ನೀವು ನಿಯಮಗಳನ್ನು ಉಲ್ಲಂಘಿಸಿದರೆ ನಿಮ್ಮನ್ನು ಬಂಧಿಸಲು ಅಥವಾ ಬಂಧನಕ್ಕೆ ಒಳಪಡಿಸಬಹುದು ಎಂದು ಎಚ್ಚರಿಕೆ ನೀಡಲಾಗಿದೆ.

**ಸಂದರ್ಶಕರ ಬಂಧನ**

**ಮಾರ್ಚ್‌ನಲ್ಲಿ, ಇಂಗ್ಲೆಂಡ್‌ನಿಂದ ಅಮೆರಿಕಕ್ಕೆ ಪ್ರಯಾಣಿಸುವ ನಾಗರಿಕರಿಗೆ ತನ್ನ ಸಲಹೆ ಪರಿಷ್ಕರಿಸಿತು, ಅದರ ಪ್ರವೇಶ ನಿಯಮಗಳನ್ನು ಯಾರಾದರೂ ಉಲ್ಲಂಘಿಸಿದರೆ ಬಂಧನ ಎದುರಿಸಬಹುದು ಎಂದು ಚೀನಾ ಎಚ್ಚರಿಕೆ ನೀಡಿದೆ.**



## ಅಮರನಾಥ ಯಾತ್ರೆಗೆ ಇಂದಿನಿಂದ ನೋಂದಣಿ ಶುರು

**ಶ್ರೀನಗರ:** ಈ ಸಾಲಿನ ಅಮರನಾಥ ಯಾತ್ರೆಯ ನೋಂದಣಿ ಪ್ರಕ್ರಿಯೆ ಇಂದಿನಿಂದ ಆರಂಭವಾಗಿದ್ದು, ಅರ್ಜಿ ಸಲ್ಲಿಕೆ ಹಾಗೂ ಅವಶ್ಯ ದಾಖಲೆಗಳ ಕುರಿತು ಸಂಪೂರ್ಣ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

2025ರ ಅಮರನಾಥ ಯಾತ್ರೆ ಜೂ.29ರಿಂದ ಪ್ರಾರಂಭವಾಗಿ ಆ.19ರವರೆಗೆ ನಡೆಯಲಿದ್ದು, ಇಂದಿನಿಂದ ನೋಂದಣಿ ಪ್ರಕ್ರಿಯೆ ಶುರುವಾಗಿದೆ. ಸಮುದ್ರಮಟ್ಟದಿಂದ 12,756 ಅಡಿ ಎತ್ತರದ ಗುಹೆಯಲ್ಲಿ ನೈಸರ್ಗಿಕವಾಗಿ ರೂಪುಗೊಂಡ ಮಂಜುಗಡ್ಡೆಯ ಶಿವಲಿಂಗದ ದರ್ಶನಕ್ಕೆ ಪ್ರತಿ ವರ್ಷ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ.

ಯಾತ್ರಿಕರು ಶ್ರೀ ಅಮರನಾಥ ದೇವಾಲಯ ಮಂಡಳಿಯ ಅಧಿಕೃತ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಅಥವಾ ದೇಶಾದ್ಯಂತ ಗೊತ್ತುಪಡಿಸಿದ 540 ಬ್ಯಾಂಕ್ ಶಾಖೆಗಳ ಮೂಲಕ ಆಫ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳಬಹುದು.

**ಆನ್‌ಲೈನ್ ನೋಂದಣಿ ಹಂತಗಳು:**

1..https://jksasb.nic.in/ಗೆ ಭೇಟಿ ನೀಡಿ.

2. 2025ರ ಯಾತ್ರಾ ನೋಂದಣಿ ಮೇಲೆ ಕ್ಲಿಕ್ ಮಾಡಿ.

3. ಅಗತ್ಯವಿರುವ ದಾಖಲೆಗಳನ್ನು ಅಪ್‌ಲೋಡ್ ಮಾಡಿ, ಇತ್ತೀಚಿನ ಪಾಸ್‌ಪೋರ್ಟ್ ಗಾತ್ರದ ಫೋಟೋ ಇದೇ ಏ.15ರ ನಂತರ ನೀಡಲಾದ ಕಡ್ಡಾಯ ಆರೋಗ್ಯ ಪ್ರಮಾಣಪತ್ರ, ಗುರುತಿನ ಚೀಟಿ

4. ನೋಂದಣಿಯನ್ನು ಪೂರ್ಣಗೊಳಿಸಲು 220 ರೂ. ಪಾವತಿಸಬೇಕು.

## ಸುಡಾನ್‌ನಲ್ಲಿ ನರಮೇಧ: ನಿರಾಶ್ರಿತರ ಶಿಬಿರಗಳ ಮೇಲೆ ಆರ್‌ಎಸ್‌ಎಫ್‌ದಾಳಿ: ಸುಮಾರು 114ಕ್ಕೂ ಜನರ ಹತ್ಯೆ

**ಸುಡಾನ್:** ಅರೆಸೈನಿಕ ಗುಂಪು ಡಾರ್ಫರ್ ಪ್ರದೇಶದಲ್ಲಿ ಸ್ಥಳಾಂತರಗೊಂಡ ಜನರ ಶಿಬಿರಗಳ ಮೇಲೆ ಎರಡು ದಿನ ದಾಳಿ ನಡೆಸಿದ್ದಾರೆ.

ಸುಡಾನ್‌ನ ಕುಖ್ಯಾತ ಅರೆಸೈನಿಕ ಗುಂಪು ಡಾರ್ಫರ್ ಪ್ರದೇಶದಲ್ಲಿ ಸ್ಥಳಾಂತರಗೊಂಡ ಜನರ ಶಿಬಿರಗಳ ಮೇಲೆ ಎರಡು ದಿನಗಳ ದಾಳಿ ನಡೆಸಿ 20 ಮಕ್ಕಳು ಮತ್ತು ಒಂಬತ್ತು ನೆರವು ಕಾರ್ಯಕರ್ತರು ಸೇರಿದಂತೆ 114ಕ್ಕೂ ಹೆಚ್ಚು ಜನರನ್ನು ಕೊಂದು ಹಾಕಿದೆ. ವಿಶ್ವಸಂಸ್ಥೆಯ ಅಧಿಕಾರಿಯೊಬ್ಬರು ಈ ಮಾಹಿತಿಯನ್ನು ನೀಡಿದ್ದಾರೆ.

ಸುಡಾನ್‌ನಲ್ಲಿ ವಿಶ್ವಸಂಸ್ಥೆಯ ನಿವಾಸಿ ಮತ್ತು ಸಂಯೋಜಕರಾಗಿರುವ ಕ್ಲೆಮೆಂಟೈನ್ ನ್ಕ್ವೆಟಾ-ಸಲ್ಮಿ, ರಾಪಿಡ್ ಸಪೋರ್ಟ್ ಫೋರ್ಸ್ (ಆರ್‌ಎಸ್‌ಎಫ್) ಮತ್ತು ಮಿಲಿಟಿಯಾಗಳು ಝುಮ್‌ಜಮ್ ಮತ್ತು ಅಬು ಶೋರೂಕ್ ಶಿಬಿರಗಳು ಮತ್ತು ಉತ್ತರ ಡಾರ್ಫರ್ ಪ್ರಾಂತ್ಯದ ಪ್ರಾಂತೀಯ ರಾಜಧಾನಿಯಾದ ಅಲ್-ಫಶರ್ ಪಟ್ಟಣದ ಮೇಲೆ ದಾಳಿ ಮಾಡಿದ್ದಾರೆ ಎಂದು ಹೇಳಿದರು.

ವಿಶ್ವಸಂಸ್ಥೆಯ ಪ್ರಕಾರ, ಅಲ್-ಫಶರ್ ಸೇನೆಯ ನಿಯಂತ್ರಣದಲ್ಲಿದೆ. ಎರಡು ವರ್ಷಗಳ ಹಿಂದೆ ಸುಡಾನ್‌ನಲ್ಲಿ ಅಂತರ್ಯುದ್ಧ ಆರಂಭವಾದಾಗಿನಿಂದ ಸೇನೆಯು ಆರ್‌ಎಸ್‌ಎಫ್ ವಿರುದ್ಧ ಹೋರಾಡುತ್ತಿದೆ. ಈ ಸಂಘರ್ಷದಲ್ಲಿ 24 ಸಾವಿರಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ಆದಾಗ್ಯೂ, ಕಾರ್ಯಕರ್ತರು ಈ ಸಂಖ್ಯೆ ಇನ್ನೂ ಹೆಚ್ಚಿರಬಹುದು ಎಂದು ಹೇಳುತ್ತಾರೆ. ಮತ್ತೆ ಶಿಬಿರಗಳ ಮೇಲೆ ದಾಳಿ ನಡೆದಿದೆ ಎಂದು ನ್ಕ್ವೆಟಾ-ಸಲ್ಮಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಝುಮ್‌ಜಮ್



ಶಿಬಿರದಲ್ಲಿದ್ದ ಒಂಬತ್ತು ನೆರವು ಕಾರ್ಯಕರ್ತರು ಸಹ ದಾಳಿಯಲ್ಲಿ ಸಾವನ್ನಪ್ಪಿದ್ದಾರೆ ಎಂದು ಅವರು ಹೇಳಿದರು.

ಸುಡಾನ್‌ನಲ್ಲಿ ಎರಡು ವರ್ಷಗಳ ಸಂಘರ್ಷದ ಸಮಯದಲ್ಲಿ ನಿರಾಶ್ರಿತರು ಮತ್ತು ನೆರವು ಕಾರ್ಯಕರ್ತರ ಮೇಲಿನ ಕ್ರೂರ ದಾಳಿಗಳು ಹೆಚ್ಚಳವಾಗಿದೆ ಎಂದು ಅವರು ಹೇಳಿದರು. ನ್ಕ್ವೆಟಾ-ಸಲಾಮಿ ನೆರವು ಕಾರ್ಯಕರ್ತರ ಹೆಸರನ್ನು ಹೇಳಲಿಲ್ಲ. ಆದರೆ ಸುಡಾನ್‌ನ ವೈದ್ಯರ ಒಕ್ಕೂಟವು ಝುಮ್‌ಜಮ್‌ನಲ್ಲಿರುವ ತಮ್ಮ ಆಸ್ಪತ್ರೆಯ ಮೇಲೆ ದಾಳಿ ನಡೆಸಿದಾಗ ಆರು ರಿಲೀಫ್ ಇಂಟರ್‌ನ್ಯಾಷನಲ್ ವೈದ್ಯಕೀಯ ಕಾರ್ಯಕರ್ತರು ಸಾವನ್ನಪ್ಪಿದ್ದಾರೆ ಎಂದು ಹೇಳಿದೆ.

ಸಾವನ್ನಪ್ಪಿದ ವೈದ್ಯಕೀಯ ಕಾರ್ಯಕರ್ತರಲ್ಲಿ ವೈದ್ಯರಾದ ಡಾ. ಮಹಮೂದ್ ಬಾಬಾಕರ್ ಇದ್ರಿಸ್ ಮತ್ತು ಗುಂಪಿನ ಪ್ರದೇಶದ ಮುಖ್ಯಸ್ಥರಾದ ಆಡಮ್ ಬಾಬಾಕರ್ ಅಬ್ದುಲ್ಲಾ ಸೇರಿದ್ದಾರೆ ಎಂದು ಒಕ್ಕೂಟ ತಿಳಿಸಿದೆ. ಈ ಅಪರಾಧಕ್ಕೆ ಆರ್‌ಎಸ್‌ಎಫ್ ಕಾರಣ ಎಂದು ಒಕ್ಕೂಟವು ಆರೋಪಿಸಿತು.

### ಬಲವಂತದಿಂದ ಹೊರಕ್ಕೆ ನೂಕುವುದನ್ನು ತಡೆಯಲು ನೋಂದಣಿ ಅಗತ್ಯ: ಗೃಹಸಚಿವಾಲಯ

## ವಿದೇಶಿ ಪ್ರಜೆಗಳಿಗೆ 30 ದಿನ ಡೆಡ್‌ಲೈನ್ ಕೊಟ್ಟ ಟ್ರಂಪ್ ಸರ್ಕಾರ

**ವಾಷಿಂಗ್ಟನ್:** ಅಮೆರಿಕದಲ್ಲಿ 30 ದಿನಗಳಿಗಿಂತ ಹೆಚ್ಚು ದಿನ ನೆಲೆಸಿರುವ ವಿದೇಶಿ ಪ್ರಜೆಗಳು ಕೂಡಲೇ ದೇಶ ತೊರೆಯುವಂತೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಮತ್ತೊಂದು ಎಚ್ಚರಿಕೆ ನೀಡಿದೆ.

- ಅಮೆರಿಕ ವಿದೇಶಿ ಪ್ರಜೆಗಳಿಗೆ ಹೊಸ ಎಚ್ಚರಿಕೆ ನೀಡಿದ ಟ್ರಂಪ ಆಡಳಿತ
- ಸ್ವಯಂ ಗಡೀಪಾರಾಗಿ ಹಣ ಉಳಿಸಿಕೊಳ್ಳಿ ಅಥವಾ ಶಿಕ್ಷೆಯಿಂದ ಪಾರಾಗಿ ಎಂದ ಅಮೆರಿಕ ಸಚಿವಾಲಯ.
- ಬಲವಂತದಿಂದ ಹೊರಕ್ಕೆ ನೂಕುವುದನ್ನು ತಡೆಯಲು ನೋಂದಣಿ ಅಗತ್ಯ ಎಂದ ಅಲ್ಲಿನ ಗೃಹಸಚಿವಾಲಯ.

ದೇಶದಲ್ಲಿ ಅಕ್ರಮವಾಗಿ ನೆಲೆಸಿರುವ ವಲಸಿಗರು ವಿದೇಶಿ ನೋಂದಣಿ ಕಾಯಿದೆ' (ಏಲಿಯನ್ ರಿಜಿಸ್ಟ್ರೇಷನ್ ಆ್ಯಕ್ಟ್) ಅನುಸಾರ ಫೆಡರಲ್ ಇಲಾಖೆಯಲ್ಲಿ ಸ್ಥಾಪಿತ ನಿಯಮದಡಿ ಏ. ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ನಿಯಮ ಮೀರಿ ದೇಶದಲ್ಲಿ ಉಳಿದುಕೊಂಡರೆ ದಂಡದ ಜತೆಗೆ ಕಾರಾಗೃಹ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂದು ಗೃಹ ಸಚಿವಾಲಯ ಎಚ್ಚರಿಕೆ ನೀಡಿದೆ.

ಅಧ್ಯಕ್ಷ ಟ್ರಂಪ್ ಅವರ ಅಕ್ರಮ ವಲಸಿಗರ ವಿರುದ್ಧದ ಕಾನೂನು ಕ್ರಮದ ಭಾಗವಾಗಿ ವಿದೇಶಿಯರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಚಿವಾಲಯ ಕಾರ್ಯದರ್ಶಿ ಕ್ರಿಸ್ಟಿ ನೊಯಿಮ್ ತಿಳಿಸಿದ್ದಾರೆ.

**ತೆರಿಗೆ ವಿನಾಯಿತಿ ಉಲ್ಟಾ ಹೊಡೆದ ಅಮೆರಿಕ:** ಚೀನಾ ಸೇರಿ ಹಲವು ದೇಶಗಳ ಎಲೆಕ್ಟ್ರಾನಿಕ್ ಉತ್ಪನ್ನಗಳ ಮೇಲಿನ ಸುಂಕಕ್ಕೆ ವಿನಾಯಿತಿ ಘೋಷಿಸಿದ ಬೆನ್ನಲ್ಲೇ ಅಮೆರಿಕ ಈಗ ಉಲ್ಟಾ ಹೊಡೆದಿದೆ.

ಸ್ಮಾರ್ಟ್‌ಫೋನ್ ಸೇರಿ ಎಲೆಕ್ಟ್ರಾನಿಕ್ ಉತ್ಪನ್ನಗಳಿಗೆ ನೀಡಿರುವ ತೆರಿಗೆ ವಿನಾಯಿತಿಯು ತಾತ್ಕಾಲಿಕವಾಗಿದೆ. ಶೀಘ್ರದಲ್ಲೇ ಇವುಗಳಿಗೆ ಹೊಸ ತೆರಿಗೆ ಬರಲಿದೆ ಎಂದು ಅಮೆರಿಕ ತಿಳಿಸಿದೆ. ಅಮೆರಿಕ ವಾಣಿಜ್ಯ ಸಚಿವ ಹೌವರ್ಡ್ ಲುಟ್ನಿಕ್ ಅವರು ಸಂದರ್ಶನ ನೀಡುವ ವೇಳೆ ಈ ವಿಚಾರ ಪ್ರಸ್ತಾಪಿಸಿದ್ದಾರೆ. ಮುಂಬರುವ ದಿನಗಳಲ್ಲಿ ಡೊನಾಲ್ಡ್ ಟ್ರಂಪ್ ಸರಕಾರವು ವಲಯವಾರು ಸುಂಕ ವಿಧಿಸುತ್ತದೆ. ಇದಕ್ಕೆ ವಿದ್ಯುನ್ಮಾನ ಉಪಕರಣಗಳನ್ನೂ ಸೇರಿಸಲಾಗುತ್ತದೆ, ಎಂದು ತಿಳಿಸಿದ್ದಾರೆ. ಹಾಗಾಗಿ, ಚೀನಾ, ಭಾರತ ಸೇರಿ ಹಲವು ದೇಶಗಳಿಗೆ ಈಗ ಮತ್ತೆ ಸುಂಕದ ಭೀತಿ ಎದುರಾಗಿದೆ.



**ದಿನಕ್ಕೆ 998 ಡಾಲರ್ ದಂಡ**

**''ಅಮೆರಿಕದಲ್ಲಿ 30 ದಿನಗಳಿಗಿಂತ ಹೆಚ್ಚು ಕಾಲ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳು ಫೆಡರಲ್ ಸರಕಾರದ ರೂಪಿಸಿದ ನಿಯಮಗಳಡಿ ನೋಂದಾಯಿಸಿಕೊಳ್ಳಬೇಕು. ಇಲ್ಲವಾದಲ್ಲಿ ಪ್ರತಿ ದಿನಕ್ಕೆ 998 ಡಾಲರ್‌ನಂತೆ ದಂಡ ಮತ್ತು ಜೈಲು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ದಂಡನೆ ಶಿಕ್ಷೆಗೂ ಮೊದಲೇ ವಿದೇಶಿಯರು ಸ್ವಯಂ ಗಡೀಪಾರಾಗುವುದು ಒಳ್ಳೆಯದು ಎಂದು ಟ್ರಂಪ ಆಡಳಿತ ಎಚ್ಚರಿಸಿದೆ.**

**ಸ್ವಯಂ ಗಡೀಪಾರಿಗೆ ಆಫರ್**

**ದೇಶದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿಯರ ಸ್ವಯಂ ಗಡೀಪಾರಿಗೆ ಗೃಹ ಸಚಿವಾಲಯ ಹೊಸ ಆಫರ್ ನೀಡಿದೆ. ಸ್ವಯಂ ಗಡೀಪಾರಾದರೆ ಅಮೆರಿಕದಲ್ಲಿ ಸಂಪಾದಿಸಿದ ಹಣ ಉಳಿಯುತ್ತದೆ. ಭವಿಷ್ಯದಲ್ಲಿ ಮರಳಿ ಅಮೆರಿಕಕ್ಕೆ ಹಿಂದಿರುಗುವ ಕಾನೂನುಬದ್ಧ ವಲಸೆಗೂ ಅವಕಾಶ ಸಿಗುತ್ತದೆ ಎಂದು ತಿಳಿಸಿದೆ. ಒಂದು ವೇಳೆ ನಿಯಮ ಮೀರಿ ದೇಶದಲ್ಲೇ ಉಳಿದುಕೊಂಡು ಬಂಧನಕ್ಕೊಳಗಾದರೆ ಅಮೆರಿಕಗೆ ಮರಳುವ ಅವಕಾಶ ಕಳೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದೆ.**

## ಗುಜರಾತ್ ಕರಾವಳಿಯಲ್ಲಿ ಭರ್ಜರಿ ಬೇಟೆ

### 1,800 ಕೋಟಿ ರೂ. ಮೌಲ್ಯದ ಮಾದಕ ವಸ್ತು ಜಪ್ತಿ



**ಗಾಂಧಿನಗರ:** ಗುಜರಾತ್ ಭಯೋತ್ಪಾದನಾ ನಿಗ್ರಹ ದಳ ಮತ್ತು ಭಾರತೀಯ ಕೋಸ್ಟ್ ಗಾರ್ಡ್ ಜಂಟಿ ಕಾರ್ಯಾಚರಣೆಯಲ್ಲಿ, ಗುಜರಾತ್ ಕರಾವಳಿಯ ಅಂತಾರಾಷ್ಟ್ರೀಯ ಸಮುದ್ರ ಗಡಿ ರೇಖೆಯ ಬಳಿ 1,800 ಕೋಟಿ ರೂ. ಮೌಲ್ಯದ 300 ಕೆಜಿ ಮೆಥಾಂಫೆಟಮೈನ್ ಡ್ರಗ್ಸ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಗುಜರಾತ್ ಎಟಿಎಸ್ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾರೀ ಪ್ರಮಾಣದ ಸರಕು ಪತ್ತೆಯಾಗಿದೆ, ಆದ್ರೆ ಕಳ್ಳಸಾಗಣೆದಾರರು ಎಸ್ಕೇಪ್ ಆಗಲು ಪಾಕಿಸ್ತಾನ ಜಲ ಪ್ರದೇಶಕ್ಕೆ ಪಲಾಯನ ಮಾಡಿದ್ದಾರೆ. ಈ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಕೇಂದ್ರ, ಡ್ರಗ್ ಮುಕ್ತ ಭಾರತ ನಿರ್ಮಾಣ ಮಾಡುವ ದೃಷ್ಟಿಯಿಂದ ದೇಶಾದ್ಯಂತ ಕರೆ ನೀಡಿದೆ. ಹೀಗಾಗಿ ಸಂಬಂಧ ಪಟ್ಟ ಅಧಿಕಾರಿಗಳು ಡ್ರಗ್ ದಂಧೆಯನ್ನು ಭೇದಿಸುವ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದಾರೆ.

ಕಳೆದ ವಾರ ಅಸ್ಸಾಂನಲ್ಲಿ 24.32 ಕೋಟಿ ಮೌಲ್ಯದ 30.4 ಕೆಜಿ ಮೆಥಾಂಫೆಟಮೈನ್ ಡ್ರಗ್ಸ್ ಅನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದರು. ಈ ಬೆನ್ನಲ್ಲೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪ್ರಧಾನಿ ನರೇಂದ್ರ ಮೋದಿ ಅವರು ಡ್ರಗ್ಸ್ ವಿರುದ್ಧ ಕಾರ್ಯಾಚರಣೆಗೆ ಕರೆ ನೀಡಿದ್ದರು. ಕೇಂದ್ರ ಸರ್ಕಾರದ ಪ್ರಕಾರ 2024ರ ವರ್ಷದಲ್ಲಿ ದೇಶಾದ್ಯಂತ ವಿವಿಧ ಎನ್‌ಸಿಬಿ ಮತ್ತು ಪೊಲೀಸ್ ಪಡೆಗಳು 16,914 ಕೋಟಿ ರೂ. ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿವೆ ಎಂದು ತಿಳಿದುಬಂದಿದೆ.

ಇನ್ನೂ 2004 ರಿಂದ 2014ರ ವರೆಗೆ 3.63 ಲಕ್ಷ ಕೆಜಿಯಷ್ಟು ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಆದ್ರೆ 2014 ರಿಂದ 2024ವರೆಗಿನ ಅವಧಿಯಲ್ಲಿ 24 ಲಕ್ಷ ಕೆಜಿ ಅಂದ್ರೆ ಹಿಂದಿನ ಸರ್ಕಾರದ ಅವಧಿಗಿಂತ 7 ಪಟ್ಟು ಹೆಚ್ಚು ಮಾದಕ ವಸ್ತುಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ.

ಈ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಗುಜರಾತ್ ಗೃಹ ಸಚಿವ ಹರ್ಷ ಸಾಂಘ್ವಿ, ಅಧಿಕಾರಿಗಳ ಕಾರ್ಯವನ್ನು ಶ್ಲಾಘಿಸಿದ್ದಾರೆ.

## ದೇಶ ಭ್ರಷ್ಟ ವಜ್ರೋದ್ಯಮಿ ಮೆಹುಲ್ ಚೋಕ್ಸಿ ಅರೆಸ್ಟ್

**ಮುಂಬೈ:** ಪಂಜಾಬ್ ನ್ಯಾಷನಲ್ ಬ್ಯಾಂಕ್ ಸಾಲ ಹಗರಣದಲ್ಲಿ ಪ್ರಮುಖ ಆರೋಪಿಯಾದ ದೇಶ ಭ್ರಷ್ಟ ವಜ್ರೋದ್ಯಮಿ ಮೆಹುಲ್ ಚೋಕ್ಸಿ ಯನ್ನು ಬೆಲ್ಜಿಯಂನಲ್ಲಿ ಬಂಧಿಸಲಾಗಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ 13,850 ಕೋಟಿ ರೂ. ಸಾಲ ಪಡೆದಿದ್ದ ವಜ್ರದ ವ್ಯಾಪಾರಿಗಳಾದ ನೀರವ್ ಮೋದಿ ಮತ್ತು ಮೆಹುಲ್ ಚೋಕ್ಸಿ, ಸಾಲ ಮರುಪಾವತಿಸದೇ ವಂಚಿಸಿ ವಿದೇಶಕ್ಕೆ ಪರಾರಿಯಾಗಿದ್ದರು. ಇವರಿಬ್ಬರಿಗಾಗಿ ಸಿಬಿಐ ಮತ್ತು ಜಾರಿ ನಿರ್ದೇಶನಾಲಯ ಹುಡುಕಾಟ ನಡೆಸುತ್ತಿದೆ. ಭಾರತ ಸರ್ಕಾರದ ಕೋರಿಕೆಯ ಮೇರೆಗೆ ಚೋಕ್ಸಿ ಅವರನ್ನು ಬೆಲ್ಜಿಯಂನಲ್ಲಿ ಬಂಧಿಸಲಾಗಿದೆ. ಸದ್ಯ ಚೋಕ್ಸಿ ಜೈಲಿನಲ್ಲಿದ್ದಾರೆ ಎಂದು ತಿಳಿದುಬಂದಿದೆ. 2018ರಲ್ಲಿ ದೇಶದಿಂದ ಪರಾರಿಯಾಗಿದ್ದ ಚೋಕ್ಸಿ, ಆರಂಭದಲ್ಲಿ ಆಂಟಿಗುವಾ ಮತ್ತು ಬಾರ್ಬುಡಾದಲ್ಲಿ ವಾಸಿಸುತ್ತಿದ್ದರು ಎಂದು ಹೇಳಾಗುತ್ತಿತ್ತು. ಆದರೆ, ಇತ್ತೀಚೆಗೆ ಅವರು ಬೆಲ್ಜಿಯಂನ ಆಂಟ್ವೆರ್ಪ್‌ನಲ್ಲಿ ಇದ್ದಾರೆ ಎಂಬ ಮಾಹಿತಿ ಲಭ್ಯವಾಗಿತ್ತು. ಅವರನ್ನು ಭಾರತಕ್ಕೆ ಹಸ್ತಾಂತರಿಸುವಂತೆ ಸಿಬಿಐ ಬೆಲ್ಜಿಯಂ ಸರ್ಕಾರಕ್ಕೆ ಮನವಿ ಮಾಡಿತ್ತು. ಇನ್ನೂ ನೀರವ್ ಮೋದಿ ಗಡೀಪಾರು ಪ್ರಕ್ರಿಯೆಗಳು ನಡೆಯುತ್ತಿವೆ ಎಂದು ತಿಳಿದುಬಂದಿದೆ.

ಸದ್ಯ ಚೋಕ್ಸಿ ಬೆಲ್ಜಿಯಂ ಕೋರ್ಟ್‌ನಲ್ಲಿ ತನ್ನನ್ನು ಭಾರತಕ್ಕೆ ಹಸ್ತಾಂತರಿಸದಂತೆ ಮನವಿ ಮಾಡಬಹುದು. ಹೀಗಾಗಿ ಆರೋಪಿಯನ್ನ ಭಾರತಕ್ಕೆ ಕರೆತರಲು ಸಂಬಂಧಪಟ್ಟ ತನಿಖಾ ಸಂಸ್ಥೆಗಳು ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿವೆ. ಕಾನೂನು ಹೋರಾಟ ಸ್ವಲ್ಪ ಸಮಯ ತೆಗೆದುಕೊಳ್ಳಬಹುದು ಎಂದು ಮೂಲಗಳು ತಿಳಿಸಿವೆ.

## ಭಾರತದ ಸೇನಾ ಬತ್ತಳಿಕೆಗೆ ಲೇಸರ್ ಅಸ್ತ್ರ: ಪ್ರಯೋಗ ಯಶಸ್ವಿ

**ಅಮರಾವತಿ:** ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ತಯಾರಿಸಿದ ಲೇಸರ್ ಶಸ್ತ್ರಾಸ್ತ್ರದ ಮೊದಲ ಯಶಸ್ವಿ ಪ್ರಯೋಗ ಆಂಧ್ರಪ್ರದೇಶದ ಕರ್ನೂಲ್‌ನಲ್ಲಿ ನಡೆಯಿತು. ಆಂಧ್ರಪ್ರದೇಶದ ಕರ್ನೂಲ್‌ನಲ್ಲಿರುವ ರಾಷ್ಟ್ರೀಯ ಮುಕ್ತ ವಾಯು ಪ್ರದೇಶದಲ್ಲಿ ಲೇಸರ್ ಅಸ್ತ್ರವನ್ನು ಬಳಸಿ ಡ್ರೋನ್‌ನ್ನು ಹೊಡೆದುರುಳಿಸಲಾಯಿತು. ಈ ಮೂಲಕ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ ನಾಲ್ಕು ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ಸಹ ಸೇರಿಕೊಂಡಿತು. ಅಮೆರಿಕ, ಚೀನಾ ಮತ್ತು ರಷ್ಯಾದಲ್ಲಿ ಈಗಾಗಲೇ ಲೇಸರ್ ಶಸ್ತ್ರಾಸ್ತ್ರಗಳು ಇವೆ.

ಲೇಸರ್ ಅಸ್ತ್ರದಿಂದ ಡ್ರೋನ್‌ಗಳು ಮತ್ತು ಸ್ಫೋಟಕಗಳನ್ನು ಹೊಡೆದುರುಳಿಸಬಹುದಾಗಿದೆ. ಈ ತಂತ್ರಜ್ಞಾನವನ್ನು ಹೈದರಾಬಾದ್‌ನ ಹೈ ಎನರ್ಜಿ ಸಿಸ್ಟಮ್ಸ್ ಅಂಡ್ ಸೈನ್ಸಸ್ ಸೆಂಟರ್ ಹಾಗೂ ಹಲವಾರು ಶೈಕ್ಷಣಿಕ ಸಂಸ್ಥೆಗಳು, ದೇಶಿಯ ಕೈಗಾರಿಕೆಗಳ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾಗಿದೆ.

**ಸ್ಟಾರ್ ವಾರ್ಸ್ ತಂತ್ರಜ್ಞಾನ:** ಜನಪ್ರಿಯ ಚಲನಚಿತ್ರ ಸರಣಿ 'ಸ್ಟಾರ್ ವಾರ್ಸ್' ನಲ್ಲಿನ ಡೆತ್ ಸ್ಟಾರ್‌ನಂತೆ ಲೇಸರ್-ಡ್ಯೂ ಕಾರ್ಯನಿರ್ವಹಿಸುತ್ತದೆ. ಭಾರತೀಯ ಸೇನೆಯು ಹೆಚ್ಚಿನ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುತ್ತಿದೆ. ಇದು ಆರಂಭ ಮಾತ್ರ, ನಾವು ಶೀಘ್ರದಲ್ಲೇ ಇದಕ್ಕಿಂತ ಶಕ್ತಿಶಾಲಿ ಅಸ್ತ್ರವನ್ನು ತಯಾರಿಸುತ್ತೇವೆ ಎಂದು ಡಿಆರ್‌ಡಿಒ ಅಧ್ಯಕ್ಷ ಡಾ. ಸಮೀರ್ ಕಾಮತ್ ತಿಳಿಸಿದ್ದಾರೆ. ಲೇಸರ್ ಅಸ್ತ್ರ ರಾಡಾರ್ ಅಥವಾ ಅದರ ಅಂತರ್ನಿರ್ಮಿತ ಎಲೆಕ್ಟ್ರೋ ಆಪ್ಟಿಕ್ ವ್ಯವಸ್ಥೆಯಿಂದ ಗುರಿಯನ್ನು ಪತ್ತೆಹಚ್ಚಿ, ಶಕ್ತಿಯುತ ಲೇಸರ್ ಕಿರಣ ಬಳಸಿ ದಾಳಿ ಮಾಡುತ್ತದೆ. ಯುದ್ಧದ ಸಮಯದಲ್ಲಿ ಮದ್ದುಗುಂಡುಗಳ ಮೇಲಿನ ಅವಲಂಬನೆಯನ್ನು ಈ ವ್ಯವಸ್ಥೆ ಕಡಿಮೆ ಮಾಡುತ್ತದೆ.



**ಲೇಸರ್ ಅಸ್ತ್ರ ಹೇಗೆ ಕೆಲಸ ಮಾಡುತ್ತದೆ?**

**ಲೇಸರ್ ಶಸ್ತ್ರಾಸ್ತ್ರ ವಿಶ್ವದ ಅತ್ಯಂತ ಪ್ರಬಲವಾದ ಪ್ರತಿ ಡ್ರೋನ್ ವ್ಯವಸ್ಥೆಗಳಲ್ಲಿ ಒಂದಾಗಿದ್ದು, ಗುರಿಯನ್ನು ಕೆಲವೇ ಸೆಕೆಂಡುಗಳಲ್ಲಿ ಹೊಡೆದುರುಳಿಸುತ್ತದೆ. ಏಕಕಾಲದಲ್ಲಿ ಬಹು ಡ್ರೋನ್ ದಾಳಿಗಳನ್ನು ತಡೆಯಲು ಶಕ್ತವಾಗಿದೆ. ಅಲ್ಲದೇ ಕಣ್ಗಾವಲು ವ್ಯವಸ್ಥೆ ಮತ್ತು ಆಂಟೆನಾಗಳನ್ನು ನಾಶಪಡಿಸುವ ಸಾಮರ್ಥ್ಯವನ್ನು ಇದು ಹೊಂದಿದೆ.**





# ಸಾವಿನ ದವಡೆಯಿಂದ ಕೂದಲೆಳೆ ಅಂತರದಲ್ಲಿ ಪಾರು



ಐಪಿಎಲ್ 2025 ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ಮುಂಬೈ ಇಂಡಿಯನ್ಸ್ ವಿರುದ್ಧ ಸೋತರೂ, ಕನ್ನಡಿಗ ಕರುಣ್ ನಾಯರ್ ಅವರ ಅದ್ಭುತ ಬ್ಯಾಟಿಂಗ್ ಎಲ್ಲಾರ ಗಮನ ಸೆಳೆಯಿತು. 40 ಎಸೆತಗಳಲ್ಲಿ 89 ರನ್ ಗಳಿಸಿದ ಅವರು 5 ಸಿಕ್ಸರ್ ಮತ್ತು 12 ಬೌಂಡರಿ ಬಾರಿಸಿದರು. 2016 ರಲ್ಲಿ ನದಿ ಅಪಘಾತದಿಂದ ಪಾರಾದ ಕರುಣ್, ಕಷ್ಟಗಳನ್ನು ಎದುರಿಸಿ ಐಪಿಎಲ್ ಗೆ ಮರಳಿದ್ದು ವಿಶೇಷ.

## ಸಾವನ್ನು ಗೆದ್ದುಬಂದಿದ್ದ ಕರುಣ್

ಐಪಿಎಲ್ 2025 ರ 29 ನೇ ಪಂದ್ಯದಲ್ಲಿ, ಡೆಲ್ಲಿ ಕ್ಯಾಪಿಟಲ್ಸ್, ಮುಂಬೈ ಇಂಡಿಯನ್ಸ್ ವಿರುದ್ಧ ಸೋತಿತ್ತಾದರೂ ಕನ್ನಡಿಗ ಕರುಣ್ ನಾಯರ್ ಮಾತ್ರ ತಮ್ಮ ಆಟದಿಂದ ಎಲ್ಲಾರ ಹೃದಯ ಗೆಲ್ಲುವಲ್ಲಿ ಯಶಸ್ವಿಯಾದರು. ಬಲಿಷ್ಠ ಬೌಲಿಂಗ್ ವಿಭಾಗವನ್ನು ಹೊಂದಿರುವ ಮುಂಬೈ ಇಂಡಿಯನ್ಸ್ ವಿರುದ್ಧ ಸಿಡಿಲಬ್ಬರದ ಬ್ಯಾಟಿಂಗ್ ಮಾಡಿದ ಕರುಣ್ 40 ಎಸೆತಗಳಲ್ಲಿ 89 ರನ್‌ಗಳ ಇನ್ನಿಂಗ್ಸ್ ಆಡಿದರು. ಕರುಣ್ ನಾಯರ್ ತಮ್ಮ ಸ್ಫೋಟಕ ಇನ್ನಿಂಗ್ಸ್‌ನಲ್ಲಿ 5 ಸಿಕ್ಸರ್‌ಗಳು ಮತ್ತು 12 ಬೌಂಡರಿಗಳನ್ನು ಬಾರಿಸಿದರು. ಜಸ್ಪ್ರೀತ್ ಬುಮ್ರಾ ಅವರಂತಹ ಮಾರಕ ವೇಗಿಯನ್ನು ದಂಡಿಸಿದ ಕರುಣ್, ಬುಮ್ರಾ ಅವರ 9 ಎಸೆತಗಳಲ್ಲಿ 26 ರನ್ ಗಳಿಸಿದರು. ಇಂದು ಕ್ರಿಕೆಟ್ ಮೈದಾನದಲ್ಲಿ ರನ್ ಮಳೆ ಹರಿಸುತ್ತಿರುವ ಕರುಣ್, ಕೂದಲೆಳೆ ಅಂತರದಲ್ಲಿ ಸಾವು ಗೆದ್ದುಬಂದ ಕಥೆ ನಿಮ್ಮಲ್ಲಿ ಎಷ್ಟು ಜನರಿಗೆ ಗೊತ್ತು

ವಾಸ್ತವವಾಗಿ ಕರುಣ್ ನಾಯರ್ 2016 ರಲ್ಲಿಯೇ ನದಿಯಲ್ಲಿ ಮುಳುಗಿ ಸಾವನ್ನಪ್ಪಬೇಕಾಗಿತ್ತು. ಆದರೆ ಅದೃಷ್ಟವಶಾತ್ ಕೂದಲೆಳೆ ಅಂತರದಲ್ಲಿ ಕರುಣ್ ಸಾವನ್ನು ಗೆದ್ದುಬಂದಿದ್ದರು. 2016 ರ ಜೂನ್‌ನಲ್ಲಿ ಅಂದರೆ ಕರುಣ್ ಏಕದಿನ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ ಒಂದು ತಿಂಗಳ ನಂತರ ಈ ಘಟನೆ ಸಂಭವಿಸಿತ್ತು. ವಾಸ್ತವವಾಗಿ ಕರುಣ್ ನಾಯರ್ ಕೇರಳದ ಪಂಪಾ ನದಿಯ ಮೂಲಕ ದೋಣಿಯಲ್ಲಿ ದೇವಾಲಯಕ್ಕೆ ಭೇಟಿ ನೀಡಲು ಹೋಗುತ್ತಿದ್ದರು. ಆದರೆ ದೇವಸ್ಥಾನ ತಲುಪುವಷ್ಟರಲ್ಲಿ ಅವರು ಪ್ರಯಾಣಿಸುತ್ತಿದ್ದ ದೋಣಿ ನದಿಯಲ್ಲಿ ಮಗುಚಿ ಬಿದ್ದಿತ್ತು.

ನದಿಯಲ್ಲಿ ದೋಣಿ ಮಗುಚಿ ಬಿದ್ದ ಪರಿಣಾಮ ಆರು ಜನರು ಸಾವನ್ನಪ್ಪಿದ್ದು, ಹಲವರು ನಾಪತ್ತೆಯಾಗಿದ್ದರು. ಆದರೆ ಕರುಣ್ ಮಾತ್ರ ಮುಳುಗುತ್ತಿದ್ದ ದೋಣಿಯಿಂದ ಹೊರಬಂದು ದಡ ಸಿಗುವವರೆಗೂ ಈಜುವ ಮೂಲಕ ಸಾವನ್ನು ಜಯಿಸಿದ್ದರು.

# 5 ವಿಕೆಟ್‌ಗಳಿಂದ ಲಕ್ನೋ ಸೋಲಿಸಿದ ಸಿಎಸ್‌ಕೆ!

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ನಿಗದಿತ 20 ಓವರ್ ಗಳಲ್ಲಿ 7 ವಿಕೆಟ್ ನಷ್ಟಕ್ಕೆ 166 ರನ್ ಗಳಿಸಿತು. ಉತ್ತರ ಪ್ರದೇಶದ ಲಖನೌದ ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಏಕಾನಾ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಐಪಿಲ್ 2025ರ 30ನೇ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ 5 ವಿಕೆಟ್ ಗಳಿಂದ ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು ತವರಿನಲ್ಲಿಯೇ ಸೋಲಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ನಿಗದಿತ 20 ಓವರ್ ಗಳಲ್ಲಿ 7 ವಿಕೆಟ್ ನಷ್ಟಕ್ಕೆ 166 ರನ್ ಗಳಿಸಿತು.

ಲಕ್ನೋ ಪರ ಏಡನ್ ಮಾರ್ಕ್ರಮ್ ಕೇವಲ 6 ರನ್ ಗಳಿಸಿ, ತ್ರಿಪಾಠಿಗೆ ಕ್ಯಾಚ್ ನೀಡಿ ನಿರ್ಗಮಿಸಿದರು. ಮಿಚ್ಚೆಲ್ ಮಾರ್ಷ್ 30 ರನ್ ಗಳಿಸಿದರೆ, ಸ್ಫೋಟಕ ಬ್ಯಾಟ್ಸ್‌ಮನ್ ನಿಕೋಲಸ್ ಪೊರಾನ್ ಕೇವಲ 8 ರನ್ ಗಳಿಸಿ ಎಲ್ ಬಿಡಬ್ಲ್ಯೂಗೆ ಬಲಿಯಾದರು.

ನಾಯಕ ರಿಷಭ್ ಪಂತ್, 63, ಅಯುಷ್ ಬದೋನಿ 22, ಅಬ್ದುಲ್ ಸಮದ್ 20 ಹಾಗೂ ಶಾರ್ದೂಲ್ ಠಾಕೂರ್ 6 ರನ್ ಗಳಿಸಿದರು. ಹೀಗಾಗಿ ನಿಗದಿತ 20 ಓವರ್ ಗಳಲ್ಲಿ 7 ವಿಕೆಟ್ ನಷ್ಟಕ್ಕೆ 166 ರನ್ ಕಲೆಹಾಕಿದ ಲಕ್ನೋ ಸೂಪರ್ ಜೈಂಟ್ಸ್, ಚೆನ್ನೈಗೆ 167 ರನ್ ಗಳ ಗೆಲುವಿನ ಗುರಿ ನೀಡಿತು. ಸಿಎಸ್ ಕೆ ಪರ ರವೀಂದ್ರ ಜಡೇಜಾ ಹಾಗೂ ಮತೀಶಾ ಪತಿರಾಣಾ ತಲಾ 2 ವಿಕೆಟ್ ಪಡೆದರೆ, ಖಲೀಲ್ ಅಹ್ಮದ್, ಅಂಶುಲ್ ಕಾಂಬೋಜ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.



ಪೂರನ್‌ನನ್ನು ಫೆವಿಲಿಯನ್‌ಗೆ ಕಳುಹಿಸಿದ ಧೋನಿ!

ಲಕ್ನೋ ನೀಡಿದ 167 ರನ್ ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಸಿಎಸ್‌ಕೆ ಪರ ಆರಂಭಿಕ ಆಟಗಾರ ಶೈಕ್ ರಶೀದ್ 27, ರಚಿನ್ ರವೀಂದ್ರ 37 ರನ್ ಗಳಿಸಿ ಔಟಾದರು. ಬಳಿಕ ಬಂದ ರಾಹುಲ್ ತ್ರಿಪಾಠಿ ಕೇವಲ 9 ರನ್ ಗಳಿಗೆ ರವಿ ಬಿಷ್ಣೋಯಿ ಬೌಲಿಂಗ್ ನಲ್ಲಿ ಕ್ಯಾಚ್ ನೀಡಿ ನಿರ್ಗಮಿಸಿದರು. ರವೀಂದ್ರ ಜಡೇಜ ಕೇವಲ 7 ರನ್ ಗಳಿಗೆ ಔಟಾಗುವ ಮೂಲಕ ನಿರಾಸೆ ಮೂಡಿಸಿದರು.

ಈ ಸಂದರ್ಭದಲ್ಲಿ ಶಿವಂ ದುಬೆ ಅಜೇಯ 43, ಹಾಗೂ ಮಹೇಂದ್ರ ಸಿಂಗ್ ಅಜೇಯ 26 ರನ್ ಗಳ ನೆರವಿನಿಂದ ಚೆನ್ನೈ 19.3 ಓವರ್ ಗಳಲ್ಲಿ 5 ವಿಕೆಟ್ ನಷ್ಟಕ್ಕೆ 168 ರನ್ ಗಳಿಸುವ ಮೂಲಕ ಭರ್ಜರಿ ಗೆಲುವು ಸಾಧಿಸಿತು.

ಹೌದು. ಲಕ್ನೋ ಸೂಪರ್ ಜೈಂಟ್ಸ್ ಸ್ಫೋಟಕ ಬ್ಯಾಟ್ಸ್‌ಮನ್ ನಿಕೋಲಸ್ ಪೂರನ್ ಬ್ಯಾಟಿಂಗ್ ಮಾಡುತ್ತಿದ್ದಾಗ ಅನ್ಶುಲ್ ಕಾಂಬೋಜ್ ಫುಲರ್ ಎಸೆತವನ್ನು ನಿಕೋಲಸ್ ಎದುರಿಸುವಲ್ಲಿ ವಿಫಲರಾದರು. ಚೆಂಡು ಅವರ ಪ್ಯಾಡ್‌ಗೆ ಬಡಿಯಿತು. ಸಿಎಸ್‌ಕೆ ಆಟಗಾರರು ಔಟ್‌ಗೆ ಮನವಿ ಮಾಡಿದರು. ಆದರೆ ಅಂಪೈರ್ ನಾಟೌಟ್ ಎಂದರು. ಆಗ ಧೋನಿ ಡಿಆರ್‌ಎಸ್ ಪಡೆದರು. ಅನ್ಶುಲ್ ಕಾಂಬೋಜ್ ಎಸೆದ ಬಾಲ್ ಪೂರನ್ ಅವರಿಂದ ತಪ್ಪಿಸಿಕೊಂಡು ಲೆಗ್ ಸ್ಟಂಪ್‌ಗೆ ತಾಗುತ್ತಿರುವುದು ಸ್ಪಷ್ಟವಾಗಿ ಕಂಡಿತು. ಪೂರನ್ ನಿರಾಸೆಯಿಂದ ಪೆವಿಲಿಯನ್ ನತ್ತ ಹೆಜ್ಜೆಹಾಕಿದರು. ನಿಕೋಲಸ್ ಪೂರನ್ ಪ್ರಸಕ್ತ ಐಪಿಎಲ್‌ನಲ್ಲಿ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ. ಇವರು 7 ಪಂದ್ಯಗಳಲ್ಲಿ 357 ರನ್ ಕಲೆ ಹಾಕಿದ್ದು, ಆರೆಂಜ್ ಕ್ಯಾಪ್ ಹೊಂದಿದ್ದಾರೆ.



# ಆರ್‌ಸಿಬಿ ಡ್ರೆಸ್ಸಿಂಗ್ ಕೋಣೆಯಲ್ಲಿ ಕೊಹ್ಲಿ ಬ್ಯಾಟ್ ನಾಪತ್ತೆ..!

ಜೈಪುರದ ಸವಾಯ್ ಮಾನ್ಸಿಂಗ್ ಕ್ರೀಡಾಂಗಣದಲ್ಲಿ ನಡೆದ ರಾಜಸ್ಥಾನ್ ರಾಯಲ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 9 ವಿಕೆಟ್‌ಗಳ ಅಮೋಘ ಜಯ ಸಾಧಿಸಿತು. ಈ ಪಂದ್ಯದಲ್ಲಿ ಆರ್‌ಸಿಬಿ ಪರ ಗೆಲುವಿನ ಇನ್ನಿಂಗ್ಸ್ ಆಡಿದ ವಿರಾಟ್ ಕೊಹ್ಲಿ ಟಿ20 ಕ್ರಿಕೆಟ್‌ನಲ್ಲಿ ಅಪರೂಪದ ದಾಖಲೆಯನ್ನು ನಿರ್ಮಿಸಿದರು.

## ಡೇವಿಡ್ ಬ್ಯಾಗ್‌ನಲ್ಲಿ ಕೊಹ್ಲಿ ಬ್ಯಾಟ್

ಆದರೆ ಪಂದ್ಯ ಮುಗಿದ ನಂತರ, ರಾಯಲ್ ಚಾಲೆಂಜರ್ಸ್ ಬೆಂಗಳೂರಿನ ಡ್ರೆಸ್ಸಿಂಗ್ ಕೋಣೆಯಲ್ಲಿ ತಮಾಷದಾಯಕ ಘಟನೆ ನಡೆದಿದ್ದು, ಈ ಘಟನೆಯಿಂದ ಸ್ವತಃ ವಿರಾಟ್ ಕೊಹ್ಲಿಯೇ ಒಂದು ಕ್ಷಣ ಆಘಾತಕ್ಕೊಳಗಾದರು.

**ಕೊಹ್ಲಿಯ 1 ಬ್ಯಾಟ್ ನಾಪತ್ತೆ:** ವಾಸ್ತವವಾಗಿ, ರಾಜಸ್ಥಾನ್ ವಿರುದ್ಧದ ಪಂದ್ಯದ ನಂತರ ಕೊಹ್ಲಿ ತಮ್ಮ ಕಿಟ್ ಪ್ಯಾಕ್ ಮಾಡುವಾಗ ಅವರ ಒಂದು ಬ್ಯಾಟ್ ಕಿಟ್ ಬ್ಯಾಗ್‌ನಿಂದ ಕಾಣೆಯಾಗಿದೆ. ಕೊಹ್ಲಿ ಕಿಟ್‌ಬ್ಯಾಗ್‌ನಲ್ಲಿ 7 ಬ್ಯಾಟ್ ಗಳಲ್ಲಿ ಒಂದು ಬ್ಯಾಟ್ ನಾಪತ್ತೆಯಾಗಿತ್ತು. ಪಂದ್ಯದ ನಂತರ ಕಿಟ್ ಪ್ಯಾಕ್ ಮಾಡುವಾಗ ಕೇವಲ 6 ಬ್ಯಾಟ್ ಗಳು ಇರುವುದನ್ನು ಗಮನಿಸಿದ ಕೊಹ್ಲಿ ಇನ್ನೊಂದು ಬ್ಯಾಟ್ ಎಲ್ಲಿ ಹೋಯಿತು ಎಂದು ಹುಡುಕಾಟ ನಡೆಸಲು ಶುರು ಮಾಡಿದ್ದಾರೆ. ಕೊಹ್ಲಿ ಎಷ್ಟೇ ಹುಡುಕಿದರು ಆ ಬ್ಯಾಟ್ ಸಿಕ್ಕಿಲ್ಲ.

ಅಷ್ಟಕ್ಕೂ ನಡೆದಿರುವುದೇನೆಂದರೆ ಕೊಹ್ಲಿಯ ಕಿಟ್‌ಬ್ಯಾಗ್‌ನಿಂದ ಒಂದು ಬ್ಯಾಟ್ ಅನ್ನು ಎಗರಿಸಿದ್ದ ತಂಡದ ಸಹ ಆಟಗಾರ ಟಿಮ್ ಡೇವಿಡ್ ಆ ಬ್ಯಾಟ್ ಅನ್ನು ತನ್ನ ಕಿಟ್‌ಬ್ಯಾಗ್‌ನಲ್ಲಿ ಮರೆಮಾಡಿದ್ದರು. ಈ ವಿಚಾರ ಗೊತ್ತಿಲ್ಲದ ಕೊಹ್ಲಿ ಕಳೆದುಹೋಗಿರುವ ಬ್ಯಾಟ್‌ಗಾಗಿ ಸಾಕಷ್ಟು ಹುಡುಕಾಟ ನಡೆಸಿದ್ದಾರೆ. ಎಷ್ಟೇ ಹುಡುಕಾಟ ಮಾಡಿದರು ಕೊಹ್ಲಿಗೆ ಆ ಬ್ಯಾಟ್ ಸಿಕ್ಕಿಲ್ಲ. ಅಂತಿಮವಾಗಿ ಚಿಂತಿತರಾಗಿದ್ದ ಕೊಹ್ಲಿ ಬಳಿಗೆ ಬಂದ ತಂಡದ ಮತ್ತೊಬ್ಬ ಆಟಗಾರ, ಟಿಮ್ ಡೇವಿಡ್ ಬ್ಯಾಗಿನಲ್ಲಿ ಬ್ಯಾಟ್ ಇರುವುದಾಗಿ ತಿಳಿಸುತ್ತಾನೆ.

ಆ ಬಳಿಕ ಟಿಮ್ ಡೇವಿಡ್ ತನ್ನ ಬ್ಯಾಗ್‌ನಲ್ಲಿದ್ದ ಕೊಹ್ಲಿ ಬ್ಯಾಟ್ ಅನ್ನು ಕೊಹ್ಲಿಗೆ ಹಿಂದಿರುಗಿಸುತ್ತಾರೆ . ಆ ಬಳಿಕ ಕೊಹ್ಲಿ ಬ್ಯಾಟ್ ಅನ್ನು ಎತ್ತಿಟ್ಟುಕೊಂಡ ಬಗ್ಗೆ ಮಾತನಾಡಿದ ಟಿಮ್ ಡೇವಿಡ್, 'ವಿರಾಟ್ ತುಂಬಾ ಚೆನ್ನಾಗಿ ಬ್ಯಾಟಿಂಗ್ ಮಾಡುತ್ತಿದ್ದರು. ಹಾಗಾಗಿ ಅವರ ಒಂದು ಬ್ಯಾಟ್ ಕಾಣೆಯಾಗಿದೆ ಎಂದು ಅವರಿಗೆ ಅರಿವಾಗಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂದು ನೋಡೋಣ ಎಂದು ನಾವು ಭಾವಿಸಿದೆವು. ಆದರೆ ತನ್ನ ಆಟದಿಂದ ಕೊಹ್ಲಿ ತುಂಬಾ ಸಂತೋಷಗೊಂಡಿದ್ದರಿಂದ ಅವರಿಗೆ ಅದು ಅರಿವಾಗಲೇ ಇಲ್ಲ. ಹಾಗಾಗಿ ನಾನು ಅವರಿಗೆ ಬ್ಯಾಟ್ ಅನ್ನು ಹಿಂತಿರುಗಿಸಿದೆ ಎಂದಿದ್ದಾರೆ.

**ಟಿ20 ಕ್ರಿಕೆಟ್‌ನ 100ನೇ ಅರ್ಧಶತಕ:** ಈ ಪಂದ್ಯ ವಿರಾಟ್‌ಗೆ ಅತ್ಯಂತ ಸ್ಮರಣೀಯವಾಗಿತ್ತು. ಅವರು ಅಜೇಯ 62 ರನ್ ಗಳಿಸುವ ಮೂಲಕ ಆರ್‌ಸಿಬಿಗೆ 9 ವಿಕೆಟ್‌ಗಳ ಜಯ ತಂದುಕೊಟ್ಟರು. ಇದು ಟಿ20 ಕ್ರಿಕೆಟ್‌ನಲ್ಲಿ ಕೊಹ್ಲಿಯ 100ನೇ ಅರ್ಧಶತಕವಾಗಿದ್ದು, ಈ ಮೈಲಿಗಲ್ಲು ತಲುಪಿದ ವಿಶ್ವದ ಎರಡನೇ ಆಟಗಾರ ಮತ್ತು ಭಾರತದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೂ ಕೊಹ್ಲಿ ಪಾತ್ರರಾಗಿದ್ದಾರೆ.





# ಕೆಜಿಎಫ್ 2 ರಿಲೀಸ್ ಆಗಿ ಮೂರು ವರ್ಷ

ಕೆಜಿಎಫ್ 2 ಚಿತ್ರವು ರಿಲೀಸ್ ಆಗಿ ಮೂರು ವರ್ಷಗಳು ಪೂರ್ಣಗೊಂಡಿವೆ. ಈ ಚಿತ್ರವು ಬಾಕ್ಸ್ ಆಫೀಸ್‌ನಲ್ಲಿ ಅಪಾರ ಯಶಸ್ಸು ಕಂಡಿತ್ತು. ಆದರೆ, ಮೂರನೇ ಭಾಗದ ಬಗ್ಗೆ ಇನ್ನೂ ಯಾವುದೇ ಅಧಿಕೃತ ಮಾಹಿತಿ ಇಲ್ಲದಿರುವುದು ಅಭಿಮಾನಿಗಳಲ್ಲಿ ನಿರಾಶೆಯನ್ನುಂಟು ಮಾಡಿದೆ. ಅಭಿಮಾನಿಗಳು ಶೀಘ್ರದಲ್ಲೇ ಒಳ್ಳೆಯ ಸುದ್ದಿ ಕೇಳುವ ನಿರೀಕ್ಷೆಯಲ್ಲಿದ್ದಾರೆ.

ರಾಕಿಂಗ್ ಸ್ಟಾರ್ ಯಶ್ ನಟನೆಯ, ಪ್ರಶಾಂತ್ ನೀಲ್ ನಿರ್ದೇಶನದ 'ಕೆಜಿಎಫ್ 2' ರಿಲೀಸ್ ಆಗಿ ಮೂರು ವರ್ಷ ತುಂಬಿದೆ. ಕನ್ನಡ ಚಿತ್ರರಂಗದ ಬಾಕ್ಸ್ ಆಫೀಸ್ ಮಾತ್ರವಲ್ಲದೆ, ಹಿಂದಿಯಲ್ಲೂ ಈ ಚಿತ್ರ ಹೊಸ ದಾಖಲೆ ಬರೆದು ಇತಿಹಾಸ ಸೃಷ್ಟಿ ಮಾಡಿತ್ತು. ಈ ಚಿತ್ರದ ಹೆಸರಲ್ಲಿ ಈಗಲೂ ಅನೇಕ ದಾಖಲೆಗಳು ಇವೆ. ಸಾವಿರ ಕೋಟಿ ರೂಪಾಯಿ ಕ್ಲಬ್ ಸೇರಿದ ಈ ಚಿತ್ರಕ್ಕೆ ಹೊಂಬಾಳೆ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ವಿಜಯ್ ಕಿರಗಂದೂರು ಬಂಡವಾಳ ಹೂಡಿದ್ದರು.

ಈ ಸಿನಿಮಾನ ಎಲ್ಲಾರೂ ಇಂದು ನೆನಪಿಸಿಕೊಳ್ಳುತ್ತಿದ್ದಾರೆ. 'ಕೆಜಿಎಫ್' ಸಿನಿಮಾ 2018ರಲ್ಲಿ ರಿಲೀಸ್ ಆಗಿ ಗೆದ್ದಿತ್ತು. ಇದಾದ 4 ವರ್ಷಗಳ ಬಳಿಕ 'ಕೆಜಿಎಫ್ 2' ರಿಲೀಸ್ ಆಯಿತು. 2022ರ ಏಪ್ರಿಲ್ 14ರಂದು ಕನ್ನಡದ ಜೊತೆಗೆ, ತೆಲುಗು, ಹಿಂದಿ, ತಮಿಳು, ಮಲಯಾಳಂ ಭಾಷೆಯಲ್ಲಿ ಸಿನಿಮಾ ರಿಲೀಸ್ ಆಯಿತು. ರವಿ ಬಸ್ರೂರು ಅವರ ಹಿನ್ನೆಲೆ ಸಂಗೀತ, ಭುವನ್ ಗೌಡ ಅವರ ಛಾಯಾಗ್ರಹಣ, ಶಿವಕುಮಾರ್ ಅವರ ಕಲಾ ನಿರ್ದೇಶನ ಈ ಸಿನಿಮಾದ ಹೈಲೈಟ್ ಆಗಿತ್ತು. ಯಶ್ ಜೊತೆ ಬಾಲಿವುಡ್‌ನ ಸಂಜಯ್ ದತ್, ರವೀನಾ ಟಂಡನ್ ನಟಿಸಿದ್ದರು. ಕನ್ನಡದ ಶ್ರೀನಿಧಿ ಶೆಟ್ಟಿ, ಪ್ರಕಾಶ್ ರಾಜ್ ಮೊದಲಾದವರು ನಟಿಸಿದ್ದರು.

# 'ಗುಡ್ ಬ್ಯಾಡ್ ಅಗ್ಲಿ' ಹಾಡಿಗೆ ಪ್ರಿಯಾ ಮಸ್ತ್ ಡ್ಯಾನ್ಸ್



ಅಜಿತ್ ಕುಮಾರ್ ನಟನೆಯ 'ಗುಡ್ ಬ್ಯಾಡ್ ಅಗ್ಲಿ' ಚಿತ್ರ ಭರ್ಜರಿ ಯಶಸ್ಸು ಕಾಣುತ್ತಿದೆ. ಚಿತ್ರದ ಹಾಡಿಗೆ ಪ್ರಿಯಾ ಪ್ರಕಾಶ್ ವಾರಿಯರ್ ಅವರು ಮಾಡಿದ ಡ್ಯಾನ್ಸ್ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಸಿಮ್ರಾನ್ ಅವರ ಹಿಂದಿನ ಹಾಡಿನ ಡ್ಯಾನ್ಸ್‌ಗೆ ಹೋಲಿಸಿದರೆ, ಪ್ರಿಯಾ ಅವರ ಡ್ಯಾನ್ಸ್ ಸಹ ಅದ್ಭುತವಾಗಿದೆ ಎಂದು ಅಭಿಮಾನಿಗಳು ಹೇಳುತ್ತಿದ್ದಾರೆ.

## ಕಣ್ಸನ್ನೆ ಹುಡುಗಿ ಎಂದೇ ಫೇಮಸ್

ಅಜಿತ್ ನಟನೆಯ 'ಗುಡ್ ಬ್ಯಾಡ್ ಅಗ್ಲಿ' ಸಿನಿಮಾ ಏಪ್ರಿಲ್ 10ರಂದು ಬಿಡುಗಡೆ ಕಂಡಿತು. ಇದನ್ನು ಅಧಿಕ್ ರವಿಚಂದ್ರನ್ ನಿರ್ದೇಶಿಸಿದ್ದಾರೆ ಮತ್ತು ಮೈತ್ರಿ ಮೂವಿ ಮೇಕರ್ಸ್ ನಿರ್ಮಿಸಿದೆ. ಈ ಚಿತ್ರ ಸಂಪೂರ್ಣವಾಗಿ ಅಜಿತ್ ಅಭಿಮಾನಿಗಳಿಗೆ ಮೀಸಲಾದ ಚಿತ್ರ ಎಂದು ಹೇಳಬಹುದು. ಈ ಸಿನಿಮಾ ಒಳ್ಳೆಯ ಕಲೆಕ್ಷನ್ ಮಾಡುತ್ತಿದೆ. ಈ ಚಿತ್ರದಲ್ಲಿ ತುಂಬಾ ಮಾಸ್ ಡೈಲಾಗ್ ಗಳನ್ನು ನೀಡುವ ಮೂಲಕ ಪ್ರೇಕ್ಷಕರನ್ನು ತಮ್ಮ ಕಡೆ ಸೆಳೆದಿದ್ದಾರೆ ಅಜಿತ್. ಈ ಚಿತ್ರ ಬಿಡುಗಡೆಯಾಗಿ ಚಿತ್ರಮಂದಿರಗಳಲ್ಲಿ ಭರ್ಜರಿ ಪ್ರದರ್ಶನ ಕಾಣುತ್ತಿದೆ. ಹೀಗಿರುವಾಗಲೇ ಚಿತ್ರದ ಹಾಡಿಗೆ ನಟಿ ಪ್ರಿಯಾ ಪ್ರಕಾಶ್ ವಾರಿಯರ್ ಭರ್ಜರಿ ಡ್ಯಾನ್ಸ್ ಮಾಡಿದ್ದಾರೆ. ನಟಿ ಪ್ರಿಯಾ ಪ್ರಕಾಶ್ ವಾರಿಯರ್ ಕಣ್ಸನ್ನೆ ಹುಡುಗಿ ಎಂದೇ ಫೇಮಸ್ ಆದವರು. ಇತ್ತೀಚೆಗೆ ಅವರಿಗೆ ಅಂಥ ದೊಡ್ಡ ಆಫರ್ ಗಳೇನು ಬರುತ್ತಿಲ್ಲ.

# ಧ್ರುವ ಜೊತೆ ಅನುಪಮಾ ಕಿಸ್ಸಿಂಗ್

ಅನುಪಮಾ ಪರಮೇಶ್ವರನ್ ಮತ್ತು ಧ್ರುವ್ ವಿಕ್ರಮ್ ಅವರ ಒಂದು ಖಾಸಗಿ ಫೋಟೋ ಲೀಕ್ ಆಗಿದೆ. ಈ ಫೋಟೋದಲ್ಲಿ ಇಬ್ಬರೂ ಕಿಸ್ ಮಾಡುತ್ತಿರುವುದು ಕಾಣಿಸುತ್ತದೆ. ಇದು ಅಭಿಮಾನಿಗಳಿಂದ ಮಾಡಲ್ಪಟ್ಟ ಎಐ ಚಿತ್ರ ಅಥವಾ ಹೊಸ ಸಿನಿಮಾದ ಪ್ರಚಾರದ ಒಂದು ಭಾಗ ಎಂಬ ಊಹೆಗಳಿವೆ. ಅನುಪಮಾ ಅವರು ಇತ್ತೀಚೆಗೆ ಬೋಲ್ಡ್ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಅನುಪಮಾ ಪರಮೇಶ್ವರನ್ ಅವರು ಸದಾ ಸುದ್ದಿಯಲ್ಲಿ ಇರುತ್ತಾರೆ. ಅವರು ಸಿನಿಮಾಗಳನ್ನು ಮಾಡಿ ಸುದ್ದಿ ಆಗೋದು ಒಂದು ಕಡೆಯಾದರೆ ವೈಯಕ್ತಿಕ ಜೀವನದ ಕಾರಣಕ್ಕೂ ಅವರು ಆಗಾಗ ಚರ್ಚೆಗೆ ಆಗುತ್ತಾರೆ. ಈಗ ಅವರ ಹೊಸ ಫೋಟೋ ಒಂದು ಲೀಕ್ ಆಗಿದೆ. ಈ ಫೋಟೋದಲ್ಲಿ ಅನುಪಮಾ ಪರಮೇಶ್ವರನ್ ಅವರು ಯುವ ಹೀರೋ ಜೊತೆ ಕಿಸ್ ಮಾಡುತ್ತಿರುವುದಿದೆ. ಅಷ್ಟಕ್ಕೂ ಯಾರು ಇವರು ಇವರ ವಯಸ್ಸು ಎಷ್ಟು ಚಿಯಾನ್ ವಿಕ್ರಮ್ ಮಗ ಧ್ರುವ್ ವಿಕ್ರಮ್ ಜೊತೆ ಅನುಪಮಾ ಡೇಟಿಂಗ್ ಮಾಡುತ್ತಿದ್ದಾರೆ ಎನ್ನಲಾಗಿದೆ. ಅನುಪಮಾಗೆ 29 ವರ್ಷ ವಯಸ್ಸು. ಧ್ರುವಗೆ 27 ವರ್ಷ ವಯಸ್ಸು. ಇವರು ಕಿಸ್ ಮಾಡುತ್ತಿರುವ ಫೋಟೋ ಆನ್‌ಲೈನ್‌ನಲ್ಲಿ ಲೀಕ್ ಆಗಿದೆ. ಮ್ಯೂಸಿಕ್ ಸ್ಟ್ರೀಮಿಂಗ್ ಪ್ಲಾಟ್‌ಫಾರ್ಮ್ ಒಂದರಲ್ಲಿ 'ಬ್ಲ್ಯೂ ಮೂನ್' ಎಂಬ ಟೈಟಲ್ ಟ್ರ್ಯಾಕ್ ರಿಲೀಸ್ ಆಗಿತ್ತು. ಆ ಬಳಿಕ ಇದನ್ನು ಪ್ರೈವೇಟ್ ಮಾಡಲಾಗಿದೆ. ಈ ಪ್ಲೇಲಿಸ್ಟ್‌ನ ಪ್ರಾಫೈಲ್ ಪಿಕ್ಚರ್ ತುಂಬಾನೇ ಇಂಟಿಮೇಟ್ ಆಗಿದೆ. ಧ್ರುವ್ ಹಾಗೂ ಅನುಪಮಾ ಫ್ರೆಂಚ್ ಕಿಸ್ ಮಾಡುತ್ತಿದ್ದಾರೆ.



ಲೀಕ್ ಆಯ್ತು ಇಂಟಿಮೇಟ್ ಫೋಟೋ




ನಿನ್ನ ಜೀವನದುದ್ದಕ್ಕೂ ಇರುವೆ ಎಂದು ಮಾತುಕೊಡ್ತೀನಿ

# ಚಂದನ್ ಜೊತೆ ಸುಪ್ರೀತಾ ನಿಶ್ಚಿತಾರ್ಥ

ಕಿರುತೆರೆಯ ಜನಪ್ರಿಯ 'ಸೀತಾ ವಲ್ಲಭ' ನಟಿ ಸುಪ್ರೀತಾ ಸತ್ಯನಾರಾಯಣ್ ಎಂಗೇಜ್‌ಮೆಂಟ್ ಮಾಡಿಕೊಂಡಿದ್ದಾರೆ. ಚಂದನ್ ಶೆಟ್ಟಿ ಜೊತೆ ಎಂಗೇಜ್ ಆಗಿರುವ ಕುರಿತು ನಟಿ ಸೋಷಿಯಲ್ ಮೀಡಿಯಾದಲ್ಲಿ ಗುಡ್ ನ್ಯೂಸ್ ಕೊಟ್ಟಿದ್ದಾರೆ.

ಹೊಸ ಚಾಪ್ಟರ್ ಇಲ್ಲಿಂದ ಶುರು. ಹಲೋ ಎನ್ನುವ ನಿನ್ನ ಧ್ವನಿಯಿಂದಲೇ ಪ್ರೀತಿ ಶುರುವಾದ ಬಗ್ಗೆ ಹೇಳಲಾ ಅಥವಾ ನಿನ್ನ ನಗು ನೋಡಿದಾಗ ನನ್ನ ಹೊಟ್ಟೆಯೊಳಗಡೆ ಚಿಟ್ಟೆ ಹಾರಾಟ ಮಾಡೋ ಬಗ್ಗೆ ಹೇಳಲಾ ನಿನ್ನ ನಗು ಅಂದ್ರೆ ನನಗೆ ತುಂಬ ಇಷ್ಟ. ಆ ನಗುಗೋಸ್ಕರ ನಾನು ಏನು ಬೇಕಿದ್ರೂ ಮಾಡುವೆ. ಖುಷಿಗೋಸ್ಕರ ನಾನು ದೇವರ ಬಳಿ ಪ್ರಾರ್ಥಿಸಿದೆ. ಅವನು ನನಗೆ ನಿಮ್ಮನ್ನು ಕೊಟ್ಟ. ನನ್ನ ಜೀವನಕ್ಕೆ ಬಂದಿದ್ದಕ್ಕೆ, ನಿಜವಾದ ಲವ್ ಏನು ಎಂದು ಅರ್ಥ ಮಾಡಿಸಿದ್ದಕ್ಕೆ, ನನ್ನ ಜೀವನವನ್ನು ಸುಂದರ ಮಾಡಿದ್ದಕ್ಕೆ ಥ್ಯಾಂಕ್ಯೂ ಎಂದು ಬರೆದುಕೊಂಡಿದ್ದಾರೆ. ನಿನ್ನ ನಗು, ಶಾಂತಿ, ಖುಷಿಗೋಸ್ಕರ ನಾನು ಪ್ರಾಮಿಸ್ ಮಾಡುವೆ. ನಿನ್ನ ಜೀವನದುದ್ದಕ್ಕೂ ಇರುವೆ ಎಂದು ಮಾತುಕೊಡ್ತೀನಿ. ಇಬ್ಬರೂ ಒಟ್ಟಿಗೆ ಜೀವನ ಕಳೆಯೋಣ. ಐ ಲವ್ ಯೂ ಕಂದ. ನನ್ನ ಹೃದಯ ನಿನ್ನದು. ನನ್ನ ಎದೆಯಾಳೋ ಧಣಿ ನೀನೇ, ನಿನ್ನ ಸಹಚಾರಿಣಿ ನಾನೇ ಎಂದು ನಟಿ ಪೋಸ್ಟ್ ಬರೆದುಕೊಂಡಿದ್ದಾರೆ.

# ನಟ ಬ್ಯಾಂಕ್ ಜನಾರ್ಧನ್ ವಿಧಿವಶ



## ಮೂರು ದಿನಗಳಿಂದ ಆರೋಗ್ಯ ಸಮಸ್ಯೆ

ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಕನ್ನಡ ಚಿತ್ರರಂಗದ ಹಿರಿಯ ಪೋಷಕ ನಟ ಬ್ಯಾಂಕ್ ಜನಾರ್ಧನ್ (76) ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿಂದು ನಿಧನರಾಗಿದ್ದಾರೆ. ನಟನ ನಿಧನಕ್ಕೆ ಕನ್ನಡ ಚಿತ್ರರಂಗ ಕಂಬನಿ ಮಿಡಿದಿದೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ನಟನಿಗೆ ತಡರಾತ್ರಿ ರಾತ್ರಿ ಏಕಾಏಕಿ ಉಸಿರಾಟ ಸಮಸ್ಯೆ ಕಾಣಿಸಿಕೊಂಡಿದೆ. ಕೂಡಲೇ ಆಸ್ಪತ್ರೆಗೆ ಕರೆತಂದಿದ್ದಾದರೂ ಫಲಕಾರಿಯಾಗದೇ ತಡರಾತ್ರಿ 2:30ರ ಸುಮಾರಿಗೆ ಕೊನೆಯುಸಿರೆಳೆದಿದ್ದಾರೆ. ಸದ್ಯ ಆಸ್ಪತ್ರೆಯಲ್ಲಿರುವ ಪಾರ್ಥಿವ ಶರೀರವನ್ನ ಸುಲ್ತಾನ್ ಪಾಳ್ಯದಲ್ಲಿರುವ ಅವರ ನಿವಾಸಕ್ಕೆ ಶಿಫ್ಟ್ ಮಾಡಲಾಯಿತು. ಬೆಳಗ್ಗೆ 10:30 ರಿಂದ ಸಂಜೆ 4 ಗಂಟೆ ವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಇನ್ನೂ ತಂದೆ ಸಾವಿನ ಕುರಿತು ಮಾಹಿತಿ ನೀಡಿರುವ ಬ್ಯಾಂಕ್ ಜನಾರ್ಧನ್ ಅವರ ಪುತ್ರ ಗುರುಪ್ರಸಾದ್, 20 ದಿನಗಳಿಂದ ಆಸ್ಪತ್ರೆಗೆ ಹೋಗ್ತಾ ಇದ್ರು, ಸಾಕಷ್ಟು ಟ್ರೀಟ್ಮೆಂಟ್ ಕೊಡಿಸಿದ್ದೇವು. ಮೂರು ದಿನಗಳಿಂದ ಆರೋಗ್ಯ ಸಮಸ್ಯೆ ಏರುಪೇರು ಆಗುತ್ತಿತ್ತು. ನಂತರ ಆಸ್ಪತ್ರೆಗೆ ದಾಖಲು ಮಾಡಿದ್ವು, ನಿನ್ನೆ ತುಂಬಾ ಉಸಿರಾಟದ ಸಮಸ್ಯೆಯಾಗಿತ್ತು. ವೈದ್ಯರು ಕೂಡ ತುಂಬಾ ಪ್ರಯತ್ನ ಪಟ್ಟಿದ್ರು. ಆದ್ರೆ ಉಳಿಸಿಕೊಳ್ಳಲು ಆಗಲಿಲ್ಲ ಬೆಳಗಿನ ಜಾವ 2.30ರ ಸುಮಾರಿಗೆ ಚಿಕಿತ್ಸೆ ಫಲಕಾರಿಯಾಗದೇ ನಿಧನರಾಗಿದ್ದಾರೆ ಎಂದು ತಿಳಿಸಿದ್ದಾರೆ.

**ನಟ ಜಗ್ಗೇಶ್ ತೀವ್ರ ಸಂತಾಪ:** ಇನ್ನೂ ಬ್ಯಾಂಕ್ ಜನಾರ್ಧನ್ ನಿಧನಕ್ಕೆ ಹಿರಿಯ ನಟ ಜಗ್ಗೇಶ್ ಸಹ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಳ್ಳುವ ಮೂಲಕ ಸಂತಾಪ ಸೂಚಿಸಿದ್ದಾರೆ. ಆತ್ಮೀಯ ಗೆಳೆಯ ಜನಾರ್ದನ ಹೋಗಿ ಬಾ.. ನಾವಿಬ್ಬರು ಪಾತ್ರಕ್ಕಾಗಿ ಹಸಿದು ಅಲೆದು ಪಡೆದು ಗೆದ್ದವರು. ನಾನು ನಿನ್ನ ಚಿತ್ರದಲ್ಲಿ ಕರೆಯುತ್ತಿದ್ದ ಬಾಂಡ್ಲಿ ಫಾದರ್ ಪದ ನಿನ್ನ ಒಡನಾಟ ನೆನೆದು ಭಾವುಕನಾದೆ.. ಆತ್ಮಕ್ಕೆ ಶಾಂತಿ ಎಂದು ಬರೆದುಕೊಂಡಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966